ಶ್ರೀ ಕೋಣಂದೂರು ಲಿಂಗಪ್ಪ.—ನಾವು ವಿಧಾನಸೌಧದ ಹೊರಗೆ ಹೋಗುವ ಹಾಗೆಯೇ ಇಲ್ಲ. ಏಕೆಂದರೆ ವಿಧಾನಸೌಧದ ಅನೇಕ ಮೂಲೆಗಳಲ್ಲಿ ಉಪವಾಸ ವ್ರತವನ್ನು ಆರಂಭಿಸುತ್ತಿದ್ದಾರೆ. ಒಂದು ಕಡೆ, ಆರೋಗ್ಯ ಇಲಾಖೆಯ ಕಾರ್ಯಕರ್ತರು, ಇನ್ನೊಂದು ಕಡೆ ಖಾಸಗೀ ಕಾಲೇಜಿನ ಉಪಾಧ್ಯಾಯರುಗಳು, ಮತ್ತೊಂದು ಕಡೆ ಯೂನಿವರ್ಸಿಟಿ ಉಪಾಧ್ಯಾಯರುಗಳು ಉಪವಾಸ ವ್ರತವನ್ನು ಕೈಗೊಂಡಿದ್ದಾರೆ. ಅವರನ್ನು ಅಲ್ಲಿಂದ ಎಬ್ಬಿಸುವುದಕ್ಕೆ ಅವರ ಸಮಸ್ಯೆಗಳನ್ನು ಏನಾದರೂ ತಿಳಿದುಕೊಂಡಿದ್ದೀರಾ, ಅವರ ಸಮಸ್ಯೆಗಳ ಪರಿಹಾರಕ್ಕೆ ಅವರಿಗೇನಾದರೂ ಸಮಾಧಾನವನ್ನು ಹೇಳಿದ್ದೀರಾ, ಅದರ ಬಗ್ಗೆ ಏನೇನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಾ ಎಂಬುದನ್ನು ದಯವಿಟ್ಟು ಈ ಸಭೆಯಲ್ಲಿ ಅಪ್ಪಣೆ ಕೊಡಿಸಿ.

ಶ್ರೀ ಕೋಣಂದೂರು ಲಿಂಗಪ್ಪ :—ನೀವು ಅಂದರೆ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿ ಇರುವುದು ಬೇಡ, ನಮಗೆ ಇದು ಸಮಂಜಸವಾಗಿ ಕಾಣುವುದಿಲ್ಲ ಎಂದು ಹೇಳಿದರೆ, ತಾವು ಇದನ್ನು ಒಪ್ಪುತ್ತೀರಾ ?

2-00 P. M.

ಅಧ್ಯಕ್ಷರು :—ಮಾನ್ಯ ಸದಸ್ಯರು ನನಗೆ ಈ ಪ್ರಶ್ನೆಯನ್ನು ಹಾಕಬಹುದೇ?

ಶ್ರೀ ಕೋಣಂದೂರು ಲಿಂಗಪ್ಪ :—ನಾವು ತಮಗೆ ಪೂರ್ಣ ಅಧಿಕಾರವನ್ನು ಕೊಡುತ್ತೇವೆ ತಾವು ಆ ಪಕ್ಷದವರನ್ನು ಒಂದು ಸಾರಿ ಸಂಪೂರ್ಣವಾಗಿ ಅಧಿಕಾರದಿಂದ ಡಿಸ್‌ಮಿಸ್‌ಮಾಡಿಬಿಡಿ....

ಶ್ರೀ ಡಿ. ದೇವರಾಜ್ ಅರಸ್ (ಮುಖ್ಯಮಂತ್ರಿಗಳು) :—

ಮಾನ್ಯ ಅಧ್ಯಕ್ಷರೇ : ಈ ಸಭೆಯ ಮುಂದೆ ಒಂದು ನಿರ್ಣಯವನ್ನು ಮಂಡನೆ ಮಾಡುವುದಕ್ಕಾಗಿ ತಮ್ಮ ಅನುಮತಿಯನ್ನು ಬೇಡಿ ಅದನ್ನು ಸಭೆಯ ಮುಂದೆ ಮಂಡಿಸುತ್ತೇನೆ : ಆ ನಿರ್ಣಯ ಈ ರೀತಿಯಾಗಿದೆ :

MOTION UNDER RULE 146

Re :—*A*trocities on kannadigas and other linguistic minorities by the Shiv-Sena and others in Bombay, and other part of Maharashtra State. Also urging the Central Government and the Maharashtra Government to hold judicial enquiry in these events and to pay compensation to those who have suffered by the incident.

MADAM SPEKER : Hon. Chief Minister to move the Resolution under Rule 146.

SRI P. A. PAWASHE : On a point of order. The hon. Chief Minister is going to move the motion under rule 146 of the Rules of Procedure and conduct of Business in the House. A motion to be admissible under this rule must fulfill the conditions laid down in rule 148. The first condition is that it shall raise substantially one definite issue. My submission is that this particular motion does not raise one substantial issue. Various issues are included in the same motion. The first part of the motion deals with the atrocities on Kannadigas by Shiva Sena. If it relates only to the atrocities by Shiva Sena, then we can say it is one definite issue. But different issues are raised here.

MADAM SPEAKER : These are all connected issues. How do as the member say that they are different? There is no second part as such.

SRI P. A. PAWASHE : My submission is that the second part of the motion deals with paying of compensation and instituting a judicial enquiry. They are two different issues Therefore, my submission is that this motion does not satisfy the first condition laid down in the rule. Therefore, this motion is not admissible.

MADAM SPEAKER : There is no point of order. They are not different. These are all connected issues. The Hon. Chief Minister may move the resolution.

SRI D. DEVARAJ URS : I move :

> "That this House expresses its grave anxiety and deep concern over the atrocities committed on Kannadigas and other linguistic minorities in Bombay and other parts of Maharashtra by the Shiva Sena and others and requests the Maharashtra and Central Government to take all steps

(SRI D. DEVARAJ URS)

to ensure the safety of the person and property of Kannadigas and other linguistic minorities in the said places in order that they are enabled to pursue their legitimate avocations. This house further requests the Central Government to prevail upon the Maharashtra Government to institute a judicial enquiry into those incidents to determine the cause and fix responsibility and also urges that adequate compensation be paid to the Kannadigas and other linguistic minorities who were the victims of those atrocities.

MADAM SPEAKER : Motion moved:

"That this House expresses its grave anxiety and deep concern over the atrocities committed on Kannadigas and other linguistic minorities in Bombay and other parts of Maharashtra by the Shiva Sena and others and quests the Maharashtra and Central Government to take all steps to ensure the safety of the person and property of Kannadigas and other linguistic minorities in the said places in order that they are enabled to pursue their legitimate avocations.

This House further requests the Central Government to prevail upon the Maharashtra Government to institute a judicial enquiry into those incidents to determine the causes and fix responsibility and also urges that adequate compensation be paid to the Kannadigas and other linguistic minorities who were the victims of those atrocities."

MADAM SPEAKER : There is an amendment. Sri H.D. Deve Gowda may move the amendment.

SRI H.D. DEVE GOWDA : I move the following amendment to the motion moved by the Chief Minister.

"That in line 4 of para 1 of the motion, for the words "and others" substitute the words "with the connivance of Maharashtra Government".

In line 2 of para 2 of the motion, the words "prevail upon the Maharashtra Government" shall be deleted.

MADAM SPEAKER : Amendment moved :

"That in line 4 of para 1 of the motion, for the words "and others" substitute the words "with the connivance of the Maharashtra Government".

In line 2 of para 2 of the motion, the words "prevail upon the Maharashtra Government" shall be deleted."

Both the motion and the amendments are before the House.

ಶ್ರೀ. ಡಿ. ದೇವರಾಜ ಅರಸ್.—ಮಾನ್ಯ ಅಧ್ಯಕ್ಷರೇ ಈ ದಿವಸ ಈ ಸಭೆಯಲ್ಲಿ ಇಂಥ ಒಂದು ನಿರ್ಣಯುವನ್ನು ಮಂಡಿಸುವುದು ನನಗೇನೂ ಅಂಥ ಒಂದು ಸಂತೋಷವನ್ನು ಉಂಟು ಮಾಡತಕ್ಕದಾಗಿಲ್ಲ. ಇಂಥ ಒಂದು ಘಟನೆ ಆಗಬಾರದಾಗಿತ್ತು. ಈ ದಿವಸ ಇಲ್ಲಿ ಒಂದು ಚರ್ಚೆ ಮಾಡಿ ಒಂದು ನಿರ್ಣಯುವನ್ನು ಮಾಡತಕ್ಕಂಥ ಸನ್ನಿವೇಶ ಉದ್ಭವಿಸದೆ ಇದ್ದಿದ್ದರೆ ಚೆನ್ನಾಗಿತ್ತು. ಆದರೆ ಈ ದಿವಸ ನಾನು ಇದನ್ನು ಅನಿವಾರ್ಯವಾಗಿ ಮಂಡಿಸಬೇಕಾಗಿದೆ.

ನಮ್ಮ ದೇಶ ಬಾಷಾವಾರು ಆಧಾರದ ಮೇಲೆ ವಿಭಜನೆಯಾಗಿ ಅನೇಕ ಭಾಷಾವಾರು ಪ್ರಾಂತ್ಯಗಳು ರಚಿತವಾಗಿ ಇಲ್ಲಿಗಾಗಲೇ 15 17 ವರ್ಷಗಳಾದವು. ರಾಜ್ಯಗಳ ಆಡಳಿತವು ಒಂದು ಸ್ಥಿಮಿತಕ್ಕೆ ಬರುತ್ತಿದ್ದ ಕಾಲದಲ್ಲಿ, ರಾಜ್ಯದ ಕೆಲವು ಭಾಗಗಳಲ್ಲಿ ಭಾಷಾ ಆಧಾರದ ಮೇಲೆ ಈ ರೀತಿ ಹಿಂಸಾ ಮತ್ತು ದೌರ್ಜನ್ಯ ಕೃತ್ಯಗಳಾಗುತ್ತಿರುವುದನ್ನು ನೋಡಿದರೆ ನಮ್ಮ ಆಸ್ತಿಪಾಸ್ತಿಗಳು ಹಾಳಾಗುತ್ತಿರುವುದನ್ನು ನೋಡಿದರೆ, ನಮಗೆ ನಾವೇನು ಈ ಭಾಷಾವಾರು ವಿಭಜನೆಯಿಂದ ಒಂದು ಫಲವನ್ನು ಅಪೇಕ್ಷಿಸಿದ್ದೆವೋ ಅದು ದೊರಕಲಿಲ್ಲ ಎಂಬುದನ್ನು ನಾವು ಇಂದು ನೋಡುತ್ತಿದ್ದೇವೆ. ನಾವು ಈ ರಾಜ್ಯಗಳನ್ನು ಯಾವ ಆಧಾರದ ಮೇಲೆ

(ಶ್ರೀ ಡಿ. ದೇವರಾಜ ಅರಸ್)

ವಿಂಗಡಿಸಿದರೂ ಒಂದು ರಾಜ್ಯದಲ್ಲಿ ಒಂದೇ ಭಾಷೆಯ ಜನರು ಇರುವುದಕ್ಕೆ ಸಾಧ್ಯ ವಿಲ್ಲ. ಪ್ರತಿಯೊಂದು ರಾಜ್ಯದಲ್ಲೂ ಬೇರೆ ಬೇರೆ ಭಾಷೆಗಳನ್ನಾಡತಕ್ಕ ಜನರು ಇಲ್ಲದಂತೆ ರಾಜ್ಯಗಳನ್ನು ವಿಂಗಡಣೆ ಮಾಡುವುದಕ್ಕಾಗುವುದಿಲ್ಲ. ಒಂದು ರಾಜ್ಯ ವನ್ನು ಒಂದು ಭಾಷೆಯವರಿಗೆ ಕೊಟ್ಟು ಅಲ್ಲಿರತಕ್ಕ ಬೇರೆ ಭಾಷೆಗಳ ಜನರನ್ನು ಅಲ್ಲಿಂದ ಬೇರೆ ಕಡೆಗೆ ವಲಸೆ ಕಳುಹಿಸಲು ಸಾಧ್ಯವಿಲ್ಲ ಇಂಥ ಅಭಿಪ್ರಾಯ ಕೂಡ ಈ ಭಾಷಾವಾರು ವಿಭಜನೆಯ ಅಭಿಪ್ರಾಯದಲ್ಲಿ ಹಿನ್ನೆಲೆಯಾಗಿಲ್ಲ. ಒಂದು ರಾಜ್ಯದ ಆಡಳಿತ ಮತ್ತು ಆ ರಾಜ್ಯದಲ್ಲಿ ಜನರಾಡತಕ್ಕ ಭಾಷೆ ಎರಡೂ ಒಂದಾ ಗಿದ್ದರೆ ಜನರ ಪರಸ್ಪರ ತಿಳುವಳಿಕೆಗೆ ಅನುಕೂಲವಾಗುತ್ತದೆಂದು ಇದನ್ನು ಮಾಡ ಲಾಗಿದೆ. ಅಂದಾಗ ಒಂದು ಭಾಷಾವಾರು ರಾಜ್ಯವನ್ನು ವಿಂಗಡಿಸಿದಾಗ ಆ ರಾಜ್ಯದಲ್ಲಿ ಅನ್ಯಭಾಷೆಯನ್ನಾಡತಕ್ಕ ಜನರು, ಅಂದರೆ ಮಹರಾಷ್ಟ್ರದಲ್ಲಿ—ಕನ್ನಡಿ ಗರೂ, ಕರ್ನಾಟಕದಲ್ಲಿ ಮರಾಠಿ ಮಾತನಾಡತಕ್ಕವರೂ ಇದ್ದೇ ಇರಬೇಕಾಗು ತ್ತದೆ. ಇದನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲ ಈ ಸಮಸ್ಯೆಗಳನ್ನು ಬಗೆಹರಿಸಿ ಕೊಳ್ಳುವುದಕ್ಕೆ ಎಸ್. ಆರ್. ಸಿ. ಆಕ್ಟ್ ಎನ್ನುವ ಒಂದು ಕಾನೂನು ಮಾಡಿ, ಅದರ ರೀತ್ಯ ಭಾಷಾವಾರು ಪ್ರಾಂತಗಳ ಗಡಿ ವಿಂಗಡಣೆ ಮಾಡಿ ಆದರ ಮೇಲೂ ಏನಾದರೂ ಸಣ್ಣಪುಟ್ಟ ಸಮಸ್ಯೆಗಳಿದ್ದರೆ, ಕೆಲವು ಹಳ್ಳಿಗಳಿಗೆ ಸಂಬಂಧಪಟ್ಟ ಹಾಗೆ, ಸಣ್ಣ ಸಣ್ಣ ಪ್ರದೇಶಗಳಿಗೆ ಸಂಬಂಧಪಟ್ಟ ಹಾಗೆ ಸಮಸ್ಯೆಗಳಿದ್ದರೆ ಉಭಯ ರಾಜ್ಯಗಳ ಸರ್ಕಾರಗಳವರೂ ಸೇರಿ ಪರಸ್ಪರ ಮಾತನಾಡಿಕೊಂಡು ಬಗೆಹರಿಸತಕ್ಕದ್ದು ಎಂದು ಅದರಲ್ಲಿ ನಮೂದಾಗಿದೆ. ಅದರ ಪ್ರಕಾರ ಕರ್ನಾಟಕ ಮತ್ತು ಮಹಾರಾಷ ಗಡಿ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗಲಿಲ್ಲ, ಎಷ್ಟೋ ವರ್ಷಗಳಿಂದ ತಳ್ಳಿಕೊಂಡು ಬಂತು. ತದನಂತರ ಈ ಸಮಸ್ಯೆಯನ್ನು ಜೋನಲ್ ಕೌನ್ಸಿಲ್‌ನಲ್ಲಿ ತಂದು ಅದಕ್ಕಾಗಿ ಒಂದು ಸಮಿತಿಯನ್ನು ಮಾಡಿ ಆ ಸಮಿತಿಯಲ್ಲಿ ಮಹಾರಾಷ್ಟ್ರದವರು ಇಬ್ಬರು ಮತ್ತು ಕರ್ನಾಟಕದವರು ಇಬ್ಬರು ಸದಸ್ಯರಾಗಿರಬೇಕೆಂದು ಮಾಡಿದರು. ಅವರು ವರದಿಯನ್ನು ಕೊಟ್ಟಾಗ ನಾಲ್ಕೂ ಜನರು ಸೇರಿ ಒಪ್ಪಿದಂಥ ವರದಿಯಾಗಲಿಲ್ಲ. ಅವರದೇ ಒಂದು ವರದಿ ಯಾಯಿತು, ನಮ್ಮ ವರದೇ ಬೇರೆ ಆಯಿತು. ಇವೆಲ್ಲ ವಿಚಾರ ಚರ್ವಿತಚರ್ವಣ ವಾಗಿ ಕೊನೆಗೆ ಮಹರಾಷ್ಟ್ರ ಸರ್ಕಾರದವರು ಬೊಂಬಾಯಿನಲ್ಲಿ ಕಾಂಗ್ರೆಸ್ ಎ.ಐ.ಸಿ ಸಿ. ಅಧಿವೇಶನ ನಡೆದಾಗ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮುಂದೆ ಈ ಸಮಸ್ಯೆಯನ್ನು ತಂದು, ಒಂದು ಒತ್ತಡವನ್ನು ಆಗಿನ ನಮ್ಮ ಮುಖ್ಯ ಮಂತ್ರಿ ಯವರ ಮೇಲೆ ಹೇರಿ ಅದರ ಪರಿಣಾಮವಾಗಿ ಒಂದು ಕಮಿಷನ್ ನೇಮಕ ಮಾಡಬೇಕೆಂದು ಒಪ್ಪಿಸಿಕೊಂಡು, ಅದಕ್ಕೆ ಯಾರನ್ನು ನೇಮಕ ಮಾಡಬೇಕು ಎನ್ನುವುದನ್ನು ಕೂಡ ಅವರೇ ಸಲಹೆ ಮಾಡಿ ಮಹಾಜನ್ ಅವರನ್ನು ನೇಮಕ ಮಾಡಬೇಕೆಂದು ಹೇಳಿ ಅದಕ್ಕೆ ನಮ್ಮ ರಾಜ್ಯ ಸರ್ಕಾರದವರೂ ಒಪ್ಪಿ ಆ ವರದಿ

ಕೂಡ ಬಂತು. ಇಷ್ಟೆಲ್ಲ ಆದ ಮೇಲೆ ಆ ವರದಿಯನ್ನು ಮಹಾರಾಷ್ಟ್ರದವರು ಈಗ ಬೇಡ ಎಂದು ಹೇಳುತ್ತಿದ್ದಾರೆ. ಅದು ಪರ್ವರ್ಸ್ ವರದಿ ಎಂದು ಹೇಳುತ್ತಿದ್ದಾರೆ. ಕಮಿಷನ್ ನೇಮಕ ಮಾಡುವುದಕ್ಕೆ ಪೂರ್ವಭಾವಿಯಾಗಿ ಮಹಾರಾಷ್ಟ್ರದ ಮುಖ್ಯ ಮಂತ್ರಿಗಳು, ಈಗ ಕೇಂದ್ರದಲ್ಲೀ ಮಂತ್ರಿಯಾಗಿರುವ ಶ್ರೀ ವೈ. ಬಿ. ಚವಾಣ್ ಅವರು ಇದೇ ಕೊನೆಯ ಮಾತು ಎಂದು ಹೇಳಿದ್ದಾರೆ. ಇದೇ ಕೊನೆಯ ಮಾತು ಎಂದು ತಿಳಿದುಕೊಂಡು ಇದು ಫೈನಲ್ ಅಂಡ್ ಬೈಂಡಿಂಗ್ ಎಂದು ಇಟ್ಟುಕೊಳ್ಳೋಣ, ವರದಿ ಫೈನಲ್ ಆಗಿ ಇರಬೇಕು. ಅದು ಉಭಯತ್ರರನ್ನೂ ಬಂಧಿಸಿರತಕ್ಕದ್ದು ಎಂದೆಲ್ಲ ಹೇಳಿ ವರದಿ ಬಂದ ಮೇಲೆ ಅವರಿಗೆ ಕೆಲವು ವಿಚಾರದಲ್ಲಿ ಸರಿಯಿಲ್ಲ ಎಂದು ಹೇಳಿದಾಕ್ಷಣ ಆ ವರದಿಯೇ ಬೇಡ ಎಂದು ಹೇಳಿ ಏಳು ವರ್ಷವಾಯಿತು. ಈ ಏಳು ವರ್ಷಗಳಿಂದ ನಡೆದುಕೊಂಡು ಬಂದಿರತಕ್ಕ ವಿದ್ಯಮಾನಗಳ ಬಗ್ಗೆ ಹೆಚ್ಚಾಗಿ ನಾವು ಯೋಚನೆ ಮಾಡಬೇಕಾದ್ದಿದೆ. ಉಭಯ ರಾಜ್ಯಗಳಲ್ಲಿ ಭಿನ್ನಾಭಿಪ್ರಾಯವಿದ್ದರೆ ಅದನ್ನು ಬಗೆಹರಿಸುವುದಕ್ಕೆ ನಾವು ನಾಗರಿಕ ಪ್ರಪಂಚಕ್ಕೆ ಗೊತ್ತಿರತಕ್ಕ ವಿಧಾನಗಳೇನು? ಒಂದು ಪಂಚಾಯಿತಿಗೆ ಒಪ್ಪಿಸುವುದು. ಲೇಬರ್ ಡಿಸ್ಪ್ಯೂಟ್ ಬಂದರೆ, ಮಾಲೀಕರಿಗೆ ಮತ್ತು ಕಾರ್ಮಿಕರಿಗೆ ವಿವಾದವುಂಟಾದರೆ, ಮೊದಲು ಕನ್‌ಸಿಲಿಯೇಷನಿಗೆ ಒಪ್ಪಿಸಬೇಕು, ಕನ್‌ಸಿಲಿಯೇಷನ್‌ನಲ್ಲಿ ಒಪ್ಪಲಿಲ್ಲವೆಂದರೆ ಅಜ್ಯೂಡಿಕೇಷನ್ನಿಗೆ ಹೋಗಿ ತದನಂತರ ಆರ್ಬಿಟ್ರೇಷನ್ ಎಂದರೆ ಯಾರೋ ಮೂರನೇ ಪಾರ್ಟಿ ಕುಳಿತು ಇಬ್ಬರ ಮಾತನ್ನೂ ಕೇಳಿ ಅವರು ಕೊಡುವ ತೀರ್ಮಾನವೇ ಅಂತ್ಯ ತೀರ್ಮಾನವಾಗುತ್ತದೆ ಮತ್ತು ಅದರಂತೆ ಇಬ್ಬರೂ ಒಪ್ಪಿಕೊಳ್ಳಬೇಕು ಎಂದು ಇದೆ. ಅಲ್ಲಿ ಕೂಡ ನಾಗರಿಕ ರೀತಿಯಲ್ಲಿ ಕೆಲವು ಕ್ರಮಗಳನ್ನು ಹಿಡಿದುಕೊಂಡು ಆ ಮಾರ್ಗಗಳ ಮುಖಾಂತರ ಸಮಸ್ಯೆಗಳನ್ನು ಬಿಡಿಸಬೇಕೆಂದಿದೆಯೇ ಹೊರತು ಮ್ಯಾನೇಜ್‌ಮೆಂಟಿನವರು ಅವರಿಗೆ ಬೇಕಾದಂತೆ ಇದ್ದರೆ ಮಾತ್ರ ಒಪ್ಪಿಕೊಳ್ಳುತ್ತೇವೆ, ಇಲ್ಲದೆ ಇದ್ದರೆ ಇಲ್ಲ ಎನ್ನುವುದಾಗಲೀ, ಕಾರ್ಮಿಕರು ಮ್ಯಾನೇಜ್‌ಮೆಂಟಿನವರನ್ನು ಹೊಡೆದು ಹಿಂಸೆ ಮಾಡುವುದಾಗಲೀ ಸರಿಯಲ್ಲ ಎಂದು ಹೇಳುತ್ತಾರೆ. ಇವೆಲ್ಲ ನಾವು ಒಪ್ಪಿಕೊಂಡಿರತಕ್ಕ ಮಾರ್ಗಗಳು ಅದೇ ರೀತಿಯಾಗಿ ಭಾಷಾವಾರು ಪ್ರಾಂತಗಳ ವಿಂಗಡಣೆಯಾದ ಮೇಲೆ ಅಲ್ಪಸ್ವಲ್ಪ ಸಮಸ್ಯೆಗಳಿದ್ದರೆ ಅವನ್ನು ಬಗೆಹರಿಸಿಕೊಳ್ಳತಕ್ಕ ಒಂದು ವಿಧಾನವನ್ನು ಎಸ್.ಆರ್.ಸಿ. ಆಕ್ಟ್‌ನಲ್ಲಿ ನಮೂದು ಮಾಡಿದ್ದಾರೆ. ಅದನ್ನು ಬಿಟ್ಟು ಅದಕ್ಕಿಂತ ಬಹಳ ದೂರ ಹೋಗಿದೆ. ನಮ್ಮ ರಾಜ್ಯದ ಜನತೆ ಅಥವಾ ಮುಖಂಡರ ಸೌಜನ್ಯವೆಂದು ಇಟ್ಟುಕೊಳ್ಳೋಣ, ವೀಕ್‌ನೆಸ್ ಎಂದೂ ಕೆಲವರು ಹೇಳಬಹುದು, ಗಡಿ ಸಮಸ್ಯೆ ಬಗೆಹರಿಯುತ್ತದೆ ಎಂದು ಕಮಿಷನ್ ಮಾಡುವುದಕ್ಕೆ ಒಪ್ಪಿಕೊಂಡರು. ಕಮಿಷನ್ ಮಾಡುವುದನ್ನು ಒಪ್ಪುವುದಕ್ಕೂ ಕಾರಣವಿಲ್ಲ ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ಆ ಸಂದರ್ಭದಲ್ಲಿ ನಮ್ಮ ರಾಜ್ಯದಲ್ಲಿ ಸುಮಾರು 10—15 ದಿವಸ ಕಮಿಷನ್ ರಚನೆಗೆ ಒಪ್ಪಬಾರದೆಂದು ದೊಡ್ಡ ಆಂದೋಳನ ನಡೆಯಿತು, ಅನೇಕರು ಸತ್ಯಾಗ್ರಹ ಮಾಡಿದರು,

(ಶ್ರೀ ಡಿ. ದೇವರಾಜ ಅರಸ್)

ರೈಲ್ವೆ ಸತ್ಯಾಗ್ರಹ ಮಾಡಿದರು ಗೋಳಿಬಾರ್ ಆಯಿತು, ಆ ಕಾಲದಲ್ಲಿ ಒಬ್ಬರು ಮೃತಪಟ್ಟರು ಎಂದು ಕಾಣುತ ದೆ. ಇಷ್ಟೆಲ್ಲಾ ಗೊಂದಲಗಳಾದ ಮೇಲೆ ಶಮನವಾಯಿತು. ಆಗ ರಾಜ್ಯಾದ್ಯಂತ ಜನಾಭಿಪ್ರಾಯ ಏನಿತ್ತು ಎಂದರೆ ಯಾವ ಕಮಿಷನ್ ನೇಮಕವೂ ಆಗಬಾರದು, ಕಮಿಷನ್ ನೇಮಕ ಮಾಡುವುದಕ್ಕೆ ಒಪ್ಪುವುದು ಸರಿಯಲ್ಲವೆಂದು ಹೇಳಿದರು. ಇಂಥ ಕಮಿಷನ್ ಮಾಡುವುದಕ್ಕೆ ಎಸ್.ಆರ್.ಸಿ. ಆಕ್ಟ್‌ನಲ್ಲಿ ಅದರ ಚೌಕಟ್ಟಿನಲ್ಲಿ ಅವಕಾಶವಿಲ್ಲ. ಆದರೂ ಕೂಡ ಕಮಿಷನ್ ರಚನೆ ಮಾಡವುದಕ್ಕೆ ಒಪ್ಪಿಗೆಯನ್ನು ಕೊಟ್ಟು ಆದರ ವರದಿ ವಂದ ಮೇಲೆ ಅದನ್ನು ಒಪ್ಪುವುದಿಲ್ಲವೆಂದು ಮಹಾರಾಷ್ಟ್ರ ಸರ್ಕಾರ ಮತ್ತು ಅವರ ಕೆಲವು ಮುಖಂಡರುಗಳು ಹೇಳುತ್ತಾ ಬಂದರು. ಅವರು ಅಷ್ಟಕ್ಕೇ ಬಿಡಲಿಲ್ಲ. ಅದಕ್ಕಿಂತ ದೂರ ಹೋಗಿದೆ. ವರದಿಯನ್ನು ಒಪ್ಪುವುದಿಲ್ಲವೆಂದರೆ ಅದಕ್ಕೆ ಬೇರೆ ಮಾರ್ಗವೇನು? ಇನ್ನು ಯಾವುದಾದರೂ ರಾಜಮಾರ್ಗ, ನಾಗರಿಕ ಮಾರ್ಗದಲ್ಲಿ ಬಗೆಹರಿಸಿಕೊಳ್ಳೋಣ ಎಂದರೆ ಚಿಂತೆ ಇಲ್ಲ. ಆದನ್ನು ಬಿಟ್ಟು ಅವರು ಏನು ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆಂದರೆ, ಅಲ್ಲಿಯ ಕೆಲವು ಮುಖಂಡರು ನಮ್ಮ ಮೇಲೆ ದುಂಡಾವೃತ್ತಿ ಮಾಡಿ, ಹಿಂದೆ ರಾಜರುಗಳು ಪಾಳೆಯಗಾರರ ಕಾಲದಲ್ಲಿ ರಾಜ್ಯಗಳನ್ನು ಪಡೆಯುವುದಕ್ಕೆ ದಂಡೆತ್ತಿ ಹೋಗಿ ಎದುರಾಳಿಗಳನ್ನು ಪಾಳೆಯಗಾರರನ್ನು, ಸೋಲಿಸಿ ರಾಜ್ಯವನ್ನು ವಶಮಾಡಿ ಕೊಳ್ಳುತ್ತಿದ್ದ ರೀತಿಯ ಮನೋಭಾವವನ್ನು ಈಗ ಪ್ರದರ್ಶನ ಮಾಡುವ ರೀತಿಯಲ್ಲಿ ಮಹಾರಾಷ್ಟ್ರದ ಕೆಲವು ಮುಖಂಡರು ಆಗಿಂದಾಗ್ಗೆ ಮಹಾಜನ್ ಕಮಿಷನ್ ವರದಿಯನ್ನು ಒಪ್ಪುವುದಿಲ್ಲವೆನ್ನುವ ಕಾರಣದಿಂದ ನಮ್ಮ ಸ್ಥಳಕ್ಕೆ ಬಂದು, ಬೆಳಗಾಂ ಪಟ್ಟಣಕ್ಕೆ ಮತ್ತು ಅದರ ಸುತ್ತಮುತ್ತಲ ಪ್ರದೇಶಕ್ಕೆ ಬಂದು ಅಲ್ಲಿಯ ಜನರನ್ನು ಎತ್ತೀ ಕಟ್ಟತಕ್ಕದ್ದು, ಪ್ರಚೋದನೆ ಮಾಡತಕ್ಕದ್ದು ಮತ್ತು ಹಿಂಸಾಕೃತ್ಯಗಳಲ್ಲಿ ಅವರು ತೊಡಗುವಂತೆ ಪ್ರಚೋದಿಸತಕ್ಕದ್ದು ಈ ಕೆಲಸಗಳಲ್ಲಿ ನಿರತರಾಗಿದ್ದಾರೆ. ಕೇಂದ್ರ ಸರ್ಕಾರ ಗಡಿ ಸಮಸ್ಯೆಯನ್ನು ಬಗೆಹರಿಸದೆ ಹಾಗೆಯೇ ಬಿಟ್ಟರೆ ಅದರಿಂದ ದೊಡ್ಡ ಅನಾಹುತವಾಗುತ್ತದೆ ಎನ್ನುವುದನ್ನು ಕೇಂದ್ರದಲ್ಲಿ ತೋರಿಸಬೇಕು ಎನ್ನುವುದೇ ಈ ಜನರ ಮುಖ್ಯವಾದ ಉದ್ದೇಶ. ಯಾವಾಗ ಪಾರ್ಲಿಮೆಂಟ್ ಅಧಿವೇಶನ ಪ್ರಾರಂಭವಾಗುತ್ತದೆ ಅದಕ್ಕೆ ಪೂರ್ವಭಾವಿಯಾಗಿ ಸಿದ್ಧತೆಗಳನ್ನು ಮಾಡಿರುತ್ತಾರೆ. ಅ ಸಿದ್ಧತೆಯನ್ನು ಯಾವ ರೀತಿ ಮಾಡುತ್ತಾರೆಂದರೆ ಗಡಿ ಸಮಸ್ಯೆಯನ್ನು ಎತ್ತುವುದಕ್ಕೋಸ್ಕರ ಇಲ್ಲಿ ಬರುವುದು, ಗಡಿಬಿಡಿ ಮಾಡುವುದು, ಯಾವ ರೀತಿಯಿಂದಲಾದರೂ ಗಲಾಟೆ ಮಾಡಿಸಿ ಪೋಲೀಸರು ಕಾನೂನ ಪಾಲನೆಗೋಸ್ಕರ ಏನಾದರೂ ಕಾರ್ಯ ಮಾಡಿದರೆ ಪೋಲೀಸರ ಎಕ್ಸೆಸ್ ಅಯಿತು, ನಮ್ಮನ್ನು ಹೊಡೆದಿದ್ದಾರೆ, ನಮನ್ನು ಹಾಗೆ ಮಾಡಿದರು, ಹೀಗೆ ಮಾಡಿದರು, ದುಂಡಾವೃತ್ತಿ ಮಾಡಿದರು, ನಮಗೆ ತೊಂದರೆ ಮಾಡಿದರು,

ಮರಾಠಿಗರಿಗೆ ಕರ್ನಾಟಕದಲ್ಲಿ ರಕ್ಷಣೆ ಇಲ್ಲ, ಮರಾಠಿಗರು ಬಹಳ ತೊಂದರೆಗೆ ಒಳಗಾಗಿದ್ದಾರೆ, ಅವರ ಆಸ್ತಿ ಪಾಸ್ತಿಗಳಿಗೆ ರಕ್ಷಣೆ ಇಲ್ಲ ಎಂಬುದಾಗಿ ಹೇಳ ಬೇಕೆಂದು ಆ ಒಂದು ನೆಪವನ್ನು ಮುಂದೊಡ್ಡಿ ಗಡಿ ಸಮಸ್ಯೆಯನ್ನು ಬೇಗ ಬಗೆಹರಿಸಬೇಕು ಎಂದು ಹೇಳುತ್ತಾರೆ. ಗಡಿ ಸಮಸ್ಯೆಯನ್ನು ಬಗೆಹರಿಸಲು ಮಹಾರಾಷ್ಟ್ರದವರು ಯಾವರೀತಿ ಹೇಳುತ್ತಾರೋ ಅದೇ ರೀತಿಯಲ್ಲಿ ತೀರ್ಮಾನ ಕೂಡ ಬೇಕೆಂಬುದೇ ಅವರ ಹಠ. ಮೊರನೆಯವರು ಹೇಳುವ ರೀತಿ ಯಲ್ಲಿ ಬಗೆಹರಿಸಬೇಕಾಗಿಲ್ಲ. ಕೇಂದ್ರ ಸರಕಾರವಾದರೂ ಇದನ್ನು ಬಗೆಹರಿಸ ಬೇಕಾದರೆ ಅವರು ಹೇಳುವ ರೀತಿಯಲ್ಲೇ ಬಗೆಹರಿಸಬೇಕು ಎಂದು ಹೇಳು ತ್ತಾರೆ. ಇದರ ಬಗ್ಗೆ ಒಂದು ಉದಾಹರಣೆ ಹೇಳುತ್ತೇನೆ. ಗಡಿ ಸಮಸ್ಯೆ ಯನ್ನು ಬಗೆಹರಿಸುವುದಕ್ಕೆ ಕೆಲವು ಸೂತ್ರಗಳನ್ನು ಅನುಸರಿಸಲು ಸರಕಾರ ಪಾಟಸ್ಕರು ಕಮಿಷನ್ ನೇಮಕ ಮಾಡುವಾಗ ಹೇಳಿದ್ದರು. ಅದೇನೆಂದರೆ ಆಗ ಆ ಕಮಿಷನ್‌ನವರು ಒಂದು ಹಳ್ಳಿಯನ್ನು ಒಂದು ಯೂನಿಟ್ಟಾಗಿ ಇಟ್ಟು ಕೊಳ್ಳುವುದು ಒಳ್ಳೆಯದು ಎಂದು ಸಲಹೆ ಮಾಡಿದರು. ಈ ಸೂತ್ರವೇ ಪಾಟಸ್ಕರು ಫಾರ್ಮುಲಾ ಎಂದರು. ಇದೇ ರೀತಿ ಕೆಲವು ಸೂತ್ರಗಳನ್ನು ಇಟ್ಟುಕೊಂಡು ಗಡಿ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಹೇಳಿದಂತೆ ಫಜಲಾಲಿ ಕಮಿಷನ್ ಬಂದಾಗಲೂ ತಿಳಿಸಿದ್ದರು. ಆದರೆ ಫಜಲಾಲಿ ಕಮಿಷನ್‌ನವರು ಆಗಲಿ ಎಸ್. ಆರ್. ಸಿ. ಅಕ್ಟು ಆಗಲೀ ಇಲ್ಲವೇ ಮುಂದೆ ಆದ ಧಾರ ಕಮಿಷನ್ ಆಗಲಿ ಹಳ್ಳಿಗಳನ್ನು ಘಟಕಗಳಾಗಿ ಇಡಲು ಒಪ್ಪಲಿಲ್ಲ. ಹಳ್ಳಿಗಳನ್ನು ಘಟಕಗಳಾಗಬೇಕೆಂಬುದು ಫಾಟಸ್ಕರ್ ಸೂತ್ರವೇನಲ್ಲ.

SRI S. BANGARAPPA:—It was an agreed matter between Pataskar and Andhra Government. Pataskar did not give any formula for that.

ಶ್ರೀ ಡಿ. ದೇವರಾಜ ಅರಸ್:—ಯಾವ ಕಮಿಷನ್‌ನವರೂ ಹೀಗೆ ಇರ ಬೇಕೆಂದು ಹೇಳಿಲ್ಲ. ಇದರಲ್ಲಿ ಲ್ಯಾಂಗ್ವೇಜು ಫಾರ್ಮುಲಾ ಹೇಳುವಾಗ ಶೇಕಡಾ 70—75 ಭಾಗದಷ್ಟು ಜನರು ಒಂದೇ ಭಾಷೆಯವರು ಇದ್ದರೆ ಅದನ್ನೇ ಆಧಾರ ವಾಗಿಟ್ಟುಕೊಳ್ಳಬೇಕೆಂದೂ ಹೇಳಲಿಲ್ಲ. ಕೆಲವರು ಹೋಬಳಿಯನ್ನು ಒಂದು ಘಟಕ ಮಾಡಬೇಕೆಂದರು ಇನ್ನು ಕೆಲವರು ತಾಲ್ಲೂಕು ಒಂದು ಘಟಕ ಮಾಡಬಹುದು ಎಂದರು. ಇದರ ಬಗ್ಗೆ ಆಗ ಎರಡು ರಾಜ್ಯಗಳ ಮುಖ್ಯ ಮಂತ್ರಿಗಳೂ ಕಲೆತು ಎಂದರೆ ಆಗಿದ್ದ ಮದ್ರಾಸು ಹಾಗೂ ಆಂಧ್ರ ಸರಕಾರಗಳ ಮುಖ್ಯ ಮಂತ್ರಿಗಳೂ ಸೇರಿ ಇದರ ಸಮಸ್ಯೆಯನ್ನು ಯಾವ ರೀತಿ ಬಗೆಹರಿಸಬಹುದು ಎಂದು ಚರ್ಚೆ ಮಾಡುವಾಗ ಅವರು ಕೆಲವು ಹಳ್ಳಿಗಳನ್ನು ಒಂದು ರಾಜ್ಯದವರು ತೆಗೆದುಕೊಳ್ಳಲಿ ಇನ್ನೊಂದು ರಾಜ್ಯದವರು ಕೆಲವು ಹಳ್ಳಿಗಳನ್ನು ತೆಗೆದುಕೊಳ್ಳಲಿ ಎಂದು ಸಲಹೆ

(ಶ್ರೀ ಡಿ. ದೇವರಾಜ ಅರಸ್)

ಮಾಡಿದರು. ಯಾವ ಯಾವ ಹಳ್ಳಿಗಳು ಯಾವ ಹಳ್ಳಿಗಳಿಗೆ ಹೋಗಬೇಕೆಂದು ಗುರುತಿಸಲು ಫಾಟಸ್ಕರ್‌ರವರನ್ನು ನೇಮಿಸಿದರು. ಇದನ್ನು ಫಟಸ್ಕರ್ ಫಾರ್ಮುಲಾ ಎಂದು ತಪ್ಪಾಗಿ ಹೇಳುವುದು ಇದೇ ಫಾಟಸ್ಕರು ಫಾರ್ಮುಲಾ ಆಗುವುದಿಲ್ಲ. ಇದರ ಬಗ್ಗೆ ಯಾವ ಕಮಿಷನ್ನೂ ಹೇಳಿಲ್ಲ. ಮಹಾರಾಷ್ಟ್ರದವರು ಫಾಟಸ್ಕರು ಹೇಳಿರುವ ಸಲಹೆಗಳನ್ನು ಒಪ್ಪಬಹುದು ಎಂದು ಹೇಳಿದ್ದರು ಅಷ್ಟೇ.

It was not a formula. It is an understanding between Madras and Andhra. It is niether Pataskar formula nor anybody's formula except the formula of those who are talking about it. ಇದನ್ನು ಒಪ್ಪಿಕೊಳ್ಳದೇ ಹೋದರೆ ಗಡಿ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗುವುದಿಲ್ಲ ಎಂದು ಹೇಳುವುದು, ಇದಕ್ಕಾಗಿ ಇಲ್ಲದ ಗಲಾಟೆ ಮಾಡುವುದು, ಜನರಲ್ಲಿ ಭಯ ಬರುವಂತೆ ಜನರನ್ನು ಪ್ರಚೋದನೆ ಮಾಡುವುದು, ಇಲ್ಲದ ಅನಾಹುತಗಳನ್ನು ಗಡಿ ಭಾಗಗಳಲ್ಲಿರುವ ಜನರಿಗೆ ಮಾಡುವುದು ಸರಿಯಲ್ಲ ಎಂದು ಇದಕ್ಕಾಗಿ ಇಂದು ನಾನು ಇಲ್ಲಿ ಇಂತಹ ಒಂದು ನಿರ್ಣಯವನ್ನು ಸಭೆಯ ಮುಂದೆ ಮಂಡಿಸಿರುವುದು. ಶಿವಸೇನೆಯ ಚರಿತ್ರೆಯನ್ನು ನಾನು ತಿಳಿದ ಕೊಂಡಿರುವಂತೆ ಇದರ ವಿವರಗಳನ್ನು ಹೇಳಬೇಕಾದ ಅಗತ್ಯ ಇಲ್ಲ. ಶಿವಸೇನೆ ಮೊದಲು ಏತಕ್ಕಾಗಿ ಹುಟ್ಟಿತು? ಇದರ ಮೂಲ ಕಾರಣ ವೇನು ಎಂದರೆ ಮಣ್ಣಿನ ಮಕ್ಕಳಿಗೆ ಕೆಲಸ ದೊರಕಿಸುವುದು. Sons of the soil--ಅಂದ ಹಾಗೆ ಇದು ಪ್ರಾರಂಭವಾಯಿತು. ಇದು ಎಲ್ಲಿಯವರೆಗೆ ಹೋಯಿತು ಎಂದರೆ ಮರಾಠಿಗರಿಗೆ ಬೇಕಾದಷ್ಟು ಅನಾಹುತಗಳಾದವು ಎಂದು ಹೇಳಿದರು. ಇದಕ್ಕೆ ಉದಾಹರಣೆಯಾಗಿ ಬೊಂಬಾಯಿಯಲ್ಲಿ ಕೆಲಸ ಸಿಗುವ ವಿಚಾರದಲ್ಲಿ ಹೊರಗಿನವರಿಗೆ ಕೆಲಸಗಳು ಸಿಗುತ್ತಿವೆ ಇಲ್ಲಿನ ಮರಾಠಿಗರಿಗೆ ಸಿಗುತ್ತಿಲ್ಲ ಎಂದು ಇದಕ್ಕಾಗಿ ಶಿವಸೇನೆ ಎಂದು ಆರಂಭವಾಗಿ, ಇದು ಬೆಳೆಯುತ್ತಾ ಬಂದು. ಇದು ಎಲ್ಲಿಯವರೆಗೆ ಹೋಯಿತು ಎಂದರೆ, ಇದು ಒಂದು ರೀತಿಯಾದ ರಾಜಕೀಯ ಗೊಂದಲಕ್ಕೆ ಸಿಕ್ಕಿತು. ರಾಜಕಾರಣಿಗಳೂ ಕೂಡ ಇದನ್ನು ಹಿಡಿದು ಕೊಂಡು ಇಲ್ಲದ ಗೊಂದಲಕ್ಕೆ ಅವಕಾಶವಾಯಿತು. ಶಿವಸೇನೆಯವರು ಹೇಳುವ ಮಾತುಗಳನ್ನು ಒಪ್ಪಿಕೊಂಡು ರಾಜಕಾರಣಿಗಳು ಇದಕ್ಕೆ ಆಶ್ರಯ ಕೊಡಲು ಆರಂಭ ಮಾಡಿದರು. ಕೊನೆಗೆ ಇದು ಈಗ ಎಲ್ಲಿಗೆ ಬಂದಿದೆ ಎಂದರೆ ನಮ್ಮ ಪುರಾಣದಲ್ಲಿ ಒಂದು ಕತೆ ಇರುವುದು ನೆನಪಿಗೆ ಬರುತ್ತದೆ. ಅದು ಭಸ್ಮಾಸುರ ಈಶ್ವರನಿಂದ ವರ ಪಡೆದುಕೊಂಡು ಯಾವ ರೀತಿಯಾಯಿತೋ ಅದರಂತಾಗಿದೆ. ಇತ್ತೀಚೆಗೆ ಇದರ ಕಾರ್ಯವ್ಯಾಪ್ತಿ ಹೆಚ್ಚಾಗುತ್ತಿದೆ. ಹಿಂದೊಂದು ಸಾರಿ ಶಿವಸೇನೆ ಯವರು ಬೊಂಬಾಯಿ ಕಾರ್ಪೊರೇಷನ್ ಚುನಾವಣೆಗೆ ನಿಂತಾಗ ಅವರು ಸೋಲನ್ನು ಅನುಭವಿಸಿದರು. ಅಲ್ಲಿಂದ ಇವರ ಚಟುವಟಿಕೆಗಳು ಹೆಚ್ಚಾದವು.

ಶ್ರೀ ಕಾಗೋಡು ತಿಮ್ಮಪ್ಪ ; ಇದು ಕಾಂಗ್ರೆಸ್ಸು ಈಶ್ವರನ ಸೃಷ್ಟಿ.

ಶ್ರೀ ವಿ. ಎಸ್. ಪಾಟೀಲ್ : ಶ್ರೀ ವಿ. ಪಿ. ನಾಯಕ ಇಲ್ಲವೇ ಶ್ರೀ. ವೈ. ಬಿ. ಚವಾಣರವರ ಸೃಷ್ಟಿ ಎನ್ನಿ.

ಶ್ರೀ ಕೋಣಂದೂರು ಲಿಂಗಪ್ಪ : ನಿಮ್ಮ ದೆಲ್ಲಿ ಮೋಹಿನಿ ಈ ಭಸ್ಮಾಸುರನನ್ನು ಮರಳು ಮಾಡಲಾಗುವುದಿಲ್ಲವೇ ?

ಶ್ರೀ ಡಿ. ದೇವರಾಜ ಅರಸ್ :— ಡೆಲ್ಲಿ ಮೋಹಿನಿ ಅಂತ ಬೇರೆ ಇಟ್ಟಿದ್ದೀರೇನು ? ನಿಮ್ಮ ಕೈಯ್ಯಲ್ಲಿ ಆಗದಿದ್ದರೆ, ಈ ಭಸ್ಮಾಸುರನ ಸಂಹಾರಕ್ಕೆ ಮೋಹಿನಿ ಅವತಾರವನ್ನೂ ಮಾಡಬೇಕಾಗುತ್ತೇನೋ ?

ಶ್ರೀ ಎಸ್. ವೈ. ಪಾಟೀಲ್ :—ಆ ಕಾಲ ಯಾವಾಗ ಬರುತ್ತೆ ?

ಶ್ರೀ ಡಿ. ದೇವರಾಜ ಅರಸ್ : ಅದು ನಿಮ್ಮ ಕಾಲದಲ್ಲಿಯೇ ಬರುತ್ತೆ.

ಶ್ರೀ ಎಸ್. ವೈ. ಪಾಟೀಲ್ :- ಭಸ್ಮಾಸುರನನ್ನು ನಾಶ ಮಾಡಲಿಕ್ಕೆ ಮೋಹಿನಿ ಅವತಾರವನ್ನು ಮಾಡಲು ಯಾರು ಬರುತ್ತಾರೆ?

ಶ್ರೀ ಡಿ. ದೇವರಾಜ ಅರಸ್:- ಮೋಹಿನಿಯಾಗಿ ಬರಬೇಕಾದರೆ ಆ ಕಾಲವೂ ಬರುತ್ತದೆ. ಅಂತಹ ಕಾಲ ಎಂದು ಬರುತ್ತೆ ಎನ್ನುವುದನ್ನೂ ಕಾದು ನೋಡಬೇಕಾಗಿದೆ. ಇಂದು ಭಸ್ಮಾಸುರನಂತೆ ಶಿವಸೇನೆಯ ಕಾರ್ಯಗಳು ಆಗುತ್ತಿವೆ. ಇದರಿಂದ ಬೊಂಬಾಯಿನಲ್ಲಿದ್ದ ಹೊರಗಡೆಯಿಂದ ಬಂದಿರುವ ಜನಗಳಿಗೆ ತೀವ್ರವಾದ ತೊಂದರೆಗಳುಂಟಾದವು. ಇದಕ್ಕೆ ಕೆಲವು ರಾಜಕಾರಣಿಗಳೂ ಸೇರಿಕೊಂಡರು.

ಶ್ರೀ ಕೆ. ಹೆಚ್. ಹನುಮೇಗೌಡ :- ಶಿವಸೇನೆಯವರಿಗೂ ಕೇಂದ್ರ ಸರಕಾರದವರಿಗೂ ಒಂದು ರೀತಿಯಾದ ಹೊಂದಾಣಿಕೆ ಇದೆ ಎಂದು ಅಲ್ಲಿನ ಜನರೇ ಹೇಳುತ್ತಿರುವುದೂ ತಮ್ಮ ಗಮನಕ್ಕೆ ಬಂದಿರಬಹುದು.

ಶ್ರೀ ಡಿ. ದೇವರಾಜ ಅರಸ್ :- ಅಂತಹದೇನೂ ಇಲ್ಲ. ಕೇಂದ್ರದಲ್ಲೂ ಇಲ್ಲ ಆ ರಾಜ್ಯದಲ್ಲೂ ಇಲ್ಲ. ಇತ್ತೀಚೆಗೆ ಶಿವಸೇನೆಯು ಬೊಂಬಾಯಿಯಲ್ಲಿರುವ ಕಾರ್ಪೊರೇಷನ್‌ನಲ್ಲಿ ಒಂದು ರೀತಿಯಾದ ಪ್ರಬಲವಾದ ಸ್ಥಾನವನ್ನು ಗಳಿಸಿಕೊಂಡಿದೆ. ಇಲ್ಲಿಗೆ ದಕ್ಷಿಣ ದೇಶದ ಕಡೆಯಿಂದ ಎಂದರೆ ಕನ್ನಡ ರಾಜ್ಯದಿಂದ ಬಂದಿರುವ ಜನರಿದ್ದಾರೆ. ಕೇರಳದಿಂದ ಬಂದ ಜನರಿದ್ದಾರೆ ಆಂಧ್ರದಿಂದ

(ಶ್ರೀ ಡಿ. ದೇವರಾಜ ಅರಸ್)

ಬಂದ ಜನರಿದ್ದಾರೆ ಹೀಗೆ ವಿವಿಧ ಭಾಗಗಳಿಂದ ಬಂದಿರುವ ಜನರು ಇದರಲ್ಲಿದ್ದಾರೆ. ಸುಮಾರು ಹತ್ತಾರು ಲಕ್ಷ ಜನರು ಹೊರಗಿನಿಂದ ಬಂದು ಇಲ್ಲಿ ಜೀವನ ನಡೆಸುತ್ತಿದ್ದಾರೆ. ಗುಜರಾತಿನಿಂದ ಬಂದಿರುವ ಜನರೂ ಇದ್ದಾರೆ. ಮೊನ್ನೆ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ವಿ ಪಿ. ನಾಯಕರವರು ಹೇಳಿದಂತೆ ಬೊಂಬಾಯಿ ನಗರದಲ್ಲಿ ಮರಾಠಿ ಭಾಷೆ ಮಾತನಾಡತಕ್ಕ ಜನರು ಬಹುಭಾಗ ಇಲ್ಲ ಎಂದು ಹೇಳಿದ್ದಾರೆ. ಶೇಕಡಾ 44 ರಿಂದ 45ರ ವರೆಗೆ ಇದ್ದಾರೆಂದು ಲೆಕ್ಕ ಹಾಕಿದ್ದಾರೆ. ಬಾಕಿಯುವರು ಶೇಕಡಾ 55 ರಿಂದ 56 ಪರ್ಸೆಂಟ್‌ವರೆಗೆ ಇದ್ದಾರೆ. ಬೇರೆ ಬೇರೆ ಭಾಷೆ ಮಾತನಾಡುವ ಜನರು ಈ ಮುಂಬೈ ಪಟ್ಟಣದಲ್ಲಿ ವರ್ಷೇ ವರ್ಷೇ ಮರಾಠಿಗರ ಸಂಖ್ಯೆಗಿಂತ ಹೆಚ್ಚಾಗುತ್ತಿದ್ದಾರೆ. ಇದಕ್ಕೆ ಕಾರಣ ಹೊರಗಡೆಯಿಂದ ಅಲ್ಲಿಗೆ ಹೋಗಿ ಕೆಲವರು ವಾಸ ಮಾಡುತ್ತಿರುವುದು. ಈ ಜನರಿಗೆ ಶಿವಸೇನೆಯಿಂದ ತೊಂದರೆಯಾಗುತ್ತಿರುವುದನ್ನು ನಾವು ಇಂದು ನೋಡುತ್ತಿದ್ದೇವೆ. ಶಿವಸೇನೆಯ ಕೆಲಸ ಕೇವಲ ತಮ್ಮವರಿಗೆ ಕೆಲಸ ಒದಗಿಸಿ ಕೊಡುವುದಷ್ಟಕ್ಕೇ ನಿಲ್ಲಲಿಲ್ಲ, ಅವರು ರಾಜಕೀಯಕ್ಕೂ ಸಹ ಕೈ ಹಾಕಿದರು. ಇವರು ಈ ಗಡಿ ಸಮಸ್ಯೆ ಬಗ್ಗೆ ಪ್ರಮುಖವಾದ ಪಾತ್ರವನ್ನು ವಹಿಸಿದ್ದಾರೆಂಬುದು ನಮಗೆ ಸ್ಪಷ್ಟವಾಗಿ ಕಾಣುತ್ತಿದೆ. 20 ಸಹಸ್ರ ಜನರನ್ನು ತಯಾರು ಮಾಡಿ ನಾವು ಕರ್ನಾಟಕಕ್ಕೆ ಕಳುಹಿಸುತ್ತಿದ್ದೇವೆಂದು ಶಿವಸೇನೆಯ ಮುಖಂಡರು ಹೇಳಿದರು. ಏತಕ್ಕಾಗಿ ಕಳುಹಿಸುತ್ತಾರೆಂದು ಗೊತ್ತಿಲ್ಲ; ಯುದ್ಧ ಮಾಡುವುದಕ್ಕೇ ಅಥವಾ ನಮ್ಮ ಜನರನ್ನು ಹೊಡೆದು ಹಾಕುವುದಕ್ಕೇ ಎಂಬುದು ನನಗೆ ತಿಳಿಯಲಿಲ್ಲ; ಒಟ್ಟಿನಲ್ಲಿ ನಮ್ಮ ರಾಜ್ಯದ ಮೇಲೆ ದಂಡೆತ್ತಿ ಬರುವ ಮನೋಭಾವವನ್ನು ವ್ಯಕ್ತಪಡಿಸಿದರು. 20 ಸಾವಿರ ಜನರ ಪೈಕಿ ಎಷ್ಟು ಜನರನ್ನು ಕಳಿಸಿದರು ಎಂಬುದು ಗೊತ್ತಿಲ್ಲ; ಈ ರೀತಿಯ ಒಂದು ಪ್ರದರ್ಶನ ಮಾಡುತ್ತಿರುವುದೇ ಅಲ್ಲದೆ, ಇದಕ್ಕೆ ಸಂಬಂಧಪಟ್ಟ ಮುಖಂಡರು ನಮ್ಮ ರಾಜ್ಯಕ್ಕೆ ಬಂದು ಇಲ್ಲಿಯ ಜನರನ್ನು ಪ್ರಚೋದಿಸಿದರು, ಬೆಂಬಲ ಕೊಟ್ಟರು, ಹಣ ಒದಗಿಸಿದರು. ಒಟ್ಟಿನಲ್ಲಿ ದುಂಡಾವರ್ತಿಯಿಂದಲಾದರೂ ಈ ಗಡಿ ಸಮಸ್ಯೆಯನ್ನು ಬಗೆಹರಿಸಬೇಕೆಂದು ಹೊರಟರು.

ಶ್ರೀ ಎಂ. ಎಸ್. ಕೃಷ್ಣನ್:- ಮುಖಂಡರು ಅಂದರೆ ಯಾರು ಯಾರು?

ಶ್ರೀ ಡಿ. ದೇವರಾಜ ಅರಸ್:- ಕೆಲವು ಮುಖಂಡರು ನಮ್ಮ ರಾಜ್ಯಕ್ಕೆ ಬಂದು ಪ್ರಚೋದನೆ ಮಾಡಿದರು. ಈ ಗಡಿ ಸಮಸ್ಯೆಯನ್ನು ಯಾವ ಸಮಯದಲ್ಲಿ ಹೈ-ಲೈಟ್ ಮಾಡಬೇಕೆಂದು ಅವರ ಮನಸ್ಸಿಗೆ ಬರುತ್ತದೋ, ಆಗ ಆ ವಿಚಾರದಲ್ಲಿ ಒಂದು ದೊಡ್ಡ ಗಲಾಟೆ ಎಬ್ಬಿಸುತ್ತಾರೆ. 1971ರ ಪಾರ್ಲಿ

ಮೆಂಟ್ ಚುನಾವಣೆಯ ಸಮಯದಲ್ಲಿ ಈ ಗಡಿ ಸಮಸ್ಯೆಯನ್ನು ದೊಡ್ಡದನ್ನಾಗಿ ಎತ್ತಿದರು. ಆ ಸಮಯದಲ್ಲಿ ಏನಾಯಿತು ಎಂಬುದು ನಮ್ಮ ಒಂದು ಅನುಭವಕ್ಕೆ ಬಂದಿದೆ. ಈ ರೀತಿ ಅವರು ದೇಶಕ್ಕೆ ಕಷ್ಟಕಾಲ ಬಂದಾಗ ಅಥವಾ ವಿಶೇಷ ಸಂದರ್ಭಗಳು ಬಂದಾಗ ಈ ಗಡಿ ಸಮಸ್ಯೆಯನ್ನು ಮುಂದೆ ಇಟ್ಟುಕೊಂಡು ಏನಾದರು ಮಾಡಿ ಈ ಬೆಳಗಾಂನ್ನು ತಾವು ಪಡೆದುಕೊಳ್ಳಬೇಕು ಎಂಬ ಮನೋಭಾವವನ್ನು ವ್ಯಕ್ತ ಪಡಿಸುವಂತೆ ಕಾಣುತ್ತಿದೆ. ಇದನ್ನೆಲ್ಲಾ ನಾನು ಆಧಾರ ಇಟ್ಟುಕೊಂಡು ಹೇಳುತ್ತಿದ್ದೇನೆ. ಇದಕ್ಕೆ ಆಧಾರ ಎಂದರೆ ನವಂಬರ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ಪಾರ್ಲಿಮೆಂಟ್ ಅಧಿವೇಶನ ನಡೆಯುತ್ತಿರಬೇಕಾದರೆ ಅದಕ್ಕಿಂತ 3-4 ತಿಂಗಳ ಮೊದಲೇ ಇದಕ್ಕೆ ಸಿದ್ಧತೆ ನಡೆಸಿದ್ದಾರೆ. ಯಾವ ರೀತಿ ಸಿದ್ಧತೆ ನಡೆಸಿದ್ದಾರೆಂದರೆ, ಕೆಲವು ಮುಖಂಡರು ಆಗಾಗ್ಗೆ ನಮ್ಮ ರಾಜ್ಯದ ಬೆಳಗಾಂ ಜಿಲ್ಲೆಗೆ ಭೇಟಿ ಕೊಟ್ಟು ಇಲ್ಲಿಯ ಮರಾಠಿಗರನ್ನು ಪ್ರಚೋದಿಸಿದರು. ಇವರುಗಳ ಪೈಕಿ ಮುಖ್ಯರಾದವರೆಂದರೆ ಮಹಾರಾಷ್ಟ್ರ ವಿಧಾನ ಪರಿಷತ್ತಿನ ಡೆಪ್ಯೂಟಿ ಚೇರ್‌ಮನ್ ಅವರಾದ ಶ್ರೀಮಾನ್ ಗವಾಯಿ ಅವರು ಶ್ರೀಯುತರುಗಳಾದ ದಂಡವತೆ, ಎಸ್. ಜಿ. ಗೋರೆ, ಕಿಶೋರ್ ಪವಾರ್, ಮನೋಹರ್‌ಜೋಷಿ, ಸುಧೀರ್‌ಜೋಷಿ, ಅನಂತರಾವ್ ಜೋಷಿ ಮುಂತಾದ ಪ್ರಮುಖರು ಸಹ ಬೆಳಗಾಂ ನಗರಕ್ಕೆ ಮತ್ತು ಬೆಳಗಾಂ ನಗರದ ಸುತ್ತಮುತ್ತಲಿನ ತಾಲ್ಲೂಕ್‌ಗಳಿಗೆ ಹೋಗಿ ಪ್ರೈವೇಟಾಗಿ ಮೀಟಿಂಗ್ ಮಾಡಿದ್ದಾರೆ. ಜೊತೆಗೆ ಪಬ್ಲಿಕ್ ಮೀಟಿಂಗ್‌ನಲ್ಲಿ ಭಾಷಣ ಮಾಡಿದ್ದಾರೆ. ಎಂ. ಇ. ಎಸ್. ಮುಖಂಡರುಗಳೊಡನೆ ಈ ವಿಚಾರವನ್ನು ಪ್ರಸ್ತಾಪ ಮಾಡಿ ಮಾಡಿದ್ದಾರೆ. ಇವರುಗಳು ಯಾವ ಯಾವ ತಾರೀಖುಗಳಂದು ನಮ್ಮ ರಾಜ್ಯಕ್ಕೆ ಭೇಟಿ ಕೊಟ್ಟರು ಎಂಬ ತಾರೀಖು ಸಹ ನನ್ನ ಹತ್ತಿರವಿದೆ. ಈ ಮಹನೀಯರುಗಳು ನಮ್ಮ ರಾಜ್ಯಕ್ಕೆ ಬರುವುದಕ್ಕೆ ಯಾವ ಅಭ್ಯಂತರವೂ ಇಲ್ಲ; ಇವರುಗಳು ನಮ್ಮ ರಾಜ್ಯಕ್ಕೆ ಬರಕೂಡದು ಎಂದು ನಾನು ಹೇಳುತ್ತಿಲ್ಲ, ನಮ್ಮ ಭಾರತ ದೇಶದಲ್ಲಿರುವ ಪ್ರತಿಯೊಬ್ಬ ಪ್ರಜೆಗೂ ಸಹ ಸ್ವಾತಂತ್ರ್ಯವಿದೆ. ಯಾರು ಎಲ್ಲಿಗೆ ಬೇಕಾದರೂ ಸಹ ಹೋಗಿ ಬರಬಹುದು. ಅದಕ್ಕೆ ಯಾರ ಅಡ್ಡಿಯೂ ಇಲ್ಲ: ಆದರೆ ಇವರುಗಳು ನಮ್ಮ ರಾಜ್ಯಕ್ಕೆ ಬರುವ ಉದ್ದೇಶ ಏನು? ಅವರು ಇಲ್ಲಿಗೆ ಬಂದು ಏನು ಮಾಡುತ್ತಾರೆ; ಎಂಬುದು ಮುಖ್ಯವಾದ ಅಂಶ. ಗಡಿ ಸಮಸ್ಯೆ ಬಗ್ಗೆ ಪ್ರಚೋದನೆ ಮಾಡಲು ಅವರು ಇಲ್ಲಿಗೆ ಬರುತ್ತಿದ್ದಾರೆ. ಬೆಳಗಾಂ ತಮಗೆ ಸೇರಬೇಕೆಂದು ಇವರು ಹೇಳುವುದರ ಮೂಲಕ ಇಲ್ಲಿಯ ಮರಾಠಿಗರನ್ನು ಪ್ರಚೋದನೆ ಮಾಡುತ್ತಿದ್ದಾರೆ. ಸಾಲದವನು ಬಿಟ್ಟರೂ ಸಾಕ್ಷಿಗಾರ ಬಿಡ ಎಂಬಂತೆ ಇಲ್ಲಿಯ ಮರಾಠಿಗರು ಸುಮ್ಮನಿದ್ದರೂ ಸಹ ನಮ್ಮ ಸ್ನೇಹಿತರು ಕೆಲವರು ಅವರನ್ನು ಸುಮ್ಮನೆ ಇರುವುದಕ್ಕೆ ಬಿಡುತ್ತಿಲ್ಲ. ನಮಗೆ ಈ ಗಲಾಟೆ ಸಾಕಾಗಿ ಹೋಗಿದೆ, ಕೊನೆಯದಾಗಿ ಇದು ತೀರ್ಮಾನವಾಗಿ ಹೋಗಲಿ ಎಂದು ಅವರು ಹೇಳಿದರೂ ಸಹ ಇವರು ಅವರನ್ನು ಸುಮ್ಮನೆ ಇರುವುದಕ್ಕೆ ಬಿಡುತ್ತಿಲ್ಲ;

(ಶ್ರೀ ಡಿ. ದೇವರಾಜ ಅರಸ್)

ನಾವೇನೂ ಇಲ್ಲಿಯ ಮರಾಠಿಗರನ್ನು ಕಡೆಗಣ್ಣಿನಿಂದ ನೋಡುತ್ತಿಲ್ಲ: ಬೇರೆ ಜನರನ್ನು ನೋಡಿಕೊಳ್ಳುತ್ತಿರುವಂತೆ ಇವರನ್ನು ಸಹ ನೋಡಿಕೊಳ್ಳುತ್ತಿದ್ದೇವೆ. ಇರುವ ತೊಂದರೆಗಳನ್ನು ನಿವಾರಣೆ ಮಾಡುತ್ತಿದ್ದೇವೆ ಇದು ಅವರಿಗೂ ಮನವರಿಕೆಯಾಗಿದೆ. ಆದರೂ ಕೆಲವರು ಇವರನ್ನು ಸುಮ್ಮನೆ ಇರುವುದಕ್ಕೆ ಬಿಡುತ್ತಿಲ್ಲ, ನಾವು ಹೇಳಿದಂತೆ ತಾವು ಕೇಳಬೇಕು, ಇಲ್ಲಿ ತಾವು ನರಕದಲ್ಲಿ ಇದ್ದೀರಿ, ನಾವು ಹೇಳಿದಂತೆ ಕೇಳಿದರೆ ಕೈಲಾಸಕ್ಕೆ ಕರೆದುಕೊಂಡು ಹೋಗುತ್ತೇವೆ, ಆರು ಮೈಲಿ ದೂರದಲ್ಲಿಯೇ ಕೈಲಾಸವಿವೆ ಎಂದು ಅವರಿಗೆ ಈ ನಮ್ಮ ಕೆಲವು ಸ್ನೇಹಿತರು ಹೇಳುತ್ತಿದ್ದಾರೆ. ಅದನ್ನು ಅವರ ಜೊತೆಗೆ ತೆಗೆದುಕೊಂಡು ಅದನ್ನು ಕೈಲಾಸ ಮಾಡುತ್ತಾರೇನೋ, ಈಗ ಅವರು ಇಲ್ಲಿ ನರಕದಲ್ಲಿದ್ದಾರೆಯೇ ?

SRI B. B. SAYANAK : Let the Chief Minister say that in English and not in Kannada.

SRI S. BANGARAPPA : I know that the Hon. Member Sri Sayanak knows Kannada, but he does not want to speak in Kannada.

SRI D. DEVARAJ URS : I am not accusing anybody.

SRI B. B. SAYANAK : The Chief Minister is pointing to me.

SRI D. DEVARAJ URS : The Hon. Member is trying to create a heaven where he wants to take these friends. Is he going to create the heaven ?

SRI B. B. SAYANAK : No

SRI D. DEVARAJ URS : The Hon. Member is creating hell for them. If he is not able to create the heaven, he has at least created sufficient hell for them.

ನವಂಬರ ಒಂದನೇ ತಾರೀಖಿನ ದಿವಸ ತಮಗೆ ಗೊತ್ತಿರುವ ಹಾಗೆ ನಮ್ಮ ದೇಶಾದ್ಯಂತ ನಮ್ಮ ರಾಜ್ಯದಲ್ಲಿ ಕರ್ನಾಟಕ ರಾಜ್ಯೋತ್ಸವ ಎಲ್ಲಾ ಕಡೆ ಏರ್ಪಾಟಾಯಿತು. ಅದನ್ನು ಬೆಳಗಾಂನಲ್ಲಿ ಕೂಡಾ ಏರ್ಪಾಟು ಮಾಡುವುದಕ್ಕೆ ಪ್ರಯತ್ನ ಪಟ್ಟರು. ಆದರೆ ಅದು ರಾಜ್ಯದ ಎಲ್ಲಾ ಕಡೆಗಳಲ್ಲಿಯೂ ಕೂಡಾ ಒಂದೇ ಸಾರಿ ಏರ್ಪಾಟು ಆಗಲಿಲ್ಲ. ಬೇರೆ ಬೇರೆ ಕಾಲದಲ್ಲಿ ಆ ಉತ್ಸವಗಳು

ನಡೆದಿವೆ. ಅದೇ ರೀತಿ ಡಿಶೆಂಬರ ತಿಂಗಳು 3ನೇ ತಾರೀಖು ಈ ಉತ್ಸವ ನಡೆಯಿತು. ಈ ಉತ್ಸವ ನಡೆಯಬೇಕಾದರೆ ಇದನ್ನು ತಡೆಗಟ್ಟುವುದಕ್ಕೆ ಅಲ್ಲಿಯ ಸ್ಥಳೀಯ ಎಂ. ಇ. ಎಸ್. ಮುಖಂಡರು ಮತ್ತು ಅವರ ಬೆಂಬಲಿಗರು ಅದನ್ನು ತಡೆಗಟ್ಟುವುದಕ್ಕೆ ಸರ್ವ ಪ್ರಯತ್ನ ಮಾಡಿ ಘರ್ಷಣೆ ಪ್ರಾರಂಭವಾಗಿ ಪೋಲೀಸರು ಮಧ್ಯೆ ಪ್ರವೇಶ ಮಾಡಬೇಕಾಯಿತು. ಆಗ ಪೋಲೀಸಿನವರು ಮಧ್ಯೆ ಪ್ರವೇಶಿಸಿ ಉಭಯತ್ರರನ್ನೂ ಬಂಧಿಸಿದ್ದಾರೆ. ಕನ್ನಡಿಗರನ್ನೂ ಬಂಧಿಸಿದ್ದಾರೆ, ಮರಾಠಿಗರನ್ನೂ ಬಂಧಿಸಿದ್ದಾರೆ. ಅವರು ಲಾ ಅಂಡ್ ಆರ್ಡರ್ ಮೇಂಟೇನ ಮಾಡುವ ದೃಷ್ಟಿಯಿಂದ ಮಾಡಿದರು. ಇದು ಒಂದ ದೊಡ್ಡದಾಗಿ ಕನ್ನಡಿಗರು ಮರಾಠಿಗರ ಮೇಲೆ ಹತ್ಯಾಕಾಂಡ ಮಾಡಿದ್ದಾರೆ ಪೋಲೀಸಿನವರು ಕನ್ನಡಿಗರಿಗೆ ಸಹಾಯ ಮಾಡಿದ್ದಾರೆ, ಪೋಲೀಸಿನವರು ಅವರನ್ನು ಬಹಳ ಹೊಡೆದು ಚಿತ್ರ ಹಿಂಸೆ ಮಾಡಿದ್ದಾರೆ ಎಂದು ಉತ್ಪ್ರೇಕ್ಷೆ ಮಾಡಿದರು. ಪುಡಾರಿ ಎನ್ನುವ ಒಂದು ಪತ್ರಿಕೆ ಮತ್ತು ತರುಣ ಭಾರತಿ ಎನ್ನುವ ಒಂದು ದಿನ ಪತ್ರಿಕೆಯಲ್ಲಿ ಇದನ್ನು ವಿಪರೀತವಾಗಿ ಪ್ರಚಾರ ಮಾಡಿ ಪ್ರಚೋದನೆ ಮಾಡಿ, ಗಡಿ ಹೊರಭಾಗದಲ್ಲಿ ಕೊಲ್ಲಾಪುರ ಭಾಗದಲ್ಲಿ ನಮ್ಮ ರಾಜ್ಯದ ಒಂದು ಬಸ್ಸನ್ನು ಸುಟ್ಟರು. ಇಲ್ಲಿ ಅದಕ್ಕೆ ಪ್ರತೀಕಾರ ನಮ್ಮಲ್ಲಿಯೂ ಸ್ವಲ್ಪ ಮಟ್ಟಿಗೆ ಆಗಿದೆ. ಆದರೆ ಇಲ್ಲಿ ನಡೆದಂಥಾದ್ದು ಒಂದೋ ಎರಡೋ ಇರಬಹುದು. ಆದರೆ ಬೊಂಬಾಯಿನಲ್ಲಿ ಇಚ್ಚಲ ಕರಂಜಿ, ಜಯಸಿಂಗಪುರ, ಗಡಿಂಗಲಾಗ್, ಕಾಗಲ್-ಸತಾರಿ, ಕಿರ್ಲೋಸ್ಕರವಾಡ, ಒಗಲ್‌ವಾಡ, ಸಾಂಗ್ಲಿ ಮಾಧವನಗರ, ಮುಂತಾದ ಸ್ಥಳಗಳಲ್ಲಿ ಕನ್ನಡಿಗರ ಮೇಲೆ ದೌರ್ಜನ್ಯ, ಕನ್ನಡಿಗರ ಹೋಟೇಲುಗಳು ಮೇಲೆ ಲೂಟಿಯಾಗಿದೆ. ಕೆಲವರ ಮನೆಗಳನ್ನು ಸುಡಲಾಗಿದೆ. ಕೆಲವು ಕಡೆ ಒಂದೆರಡು ಕೊಲೆ ಕೂಡ ಆಗಿದೆ. ಕೊಲ್ಲಾಪುರದಿಂದ ಈಚೆಗೆ ಕೆಲವು ಜನರನ್ನು ಓಡಿಸಿದ್ದಾರೆ. ಕೂಲಿ ಮಾಡಿ ಕೊಂಡು ಜೀವನ ಮಾಡುತ್ತಿದ್ದ ಸುಮಾರು 3700 ಜನಗಳನ್ನು ಆ ಕಡೆಯಿಂದ ಓಡಿಸಿ ಅವರು ನಮ್ಮ ರಾಜ್ಯಕ್ಕೆ ನಿರಾಶ್ರಿತರಾಗಿ ಬಂದಿದ್ದಾರೆ ಎಂದು ನಮಗೆ ಲೆಕ್ಕದಿಂದ ಗೊತ್ತಾಗುತ್ತದೆ. ಈ ರೀತಿಯಾಗಿ ಮಹಾರಾಷ್ಟ್ರದವರು ಕನ್ನಡಿಗರ ಮೇಲೆ ಹತ್ಯಾಕಾಂಡ ದೌರ್ಜನ್ಯ ಕೃತ್ಯಗಳನ್ನು ಮಾಡಿದರು. ಕೇಂದ್ರ ಸರ್ಕಾರ ಗಡಿ ಸಮಸ್ಯೆಯನ್ನು ಬಗೆಹರಿಸದೇ ವಿಳಂಬ ಮಾಡಿದೆ. ಆದ್ದರಿಂದ ಈ ರೀತಿ ಹಿಂಸಾಕೃತ್ಯಗಳನ್ನು ವಿಧ್ವಂಸಕ ಕೃತ್ಯಗಳನ್ನು ಮಾಡಿದರೆ ಕೇಂದ್ರ ಸರ್ಕಾರದವರು ಈ ಗಡಿ ಸಮಸ್ಯೆಯನ್ನು ಬೇಗ ಬಗೆಹರಿಸುತ್ತಾರೆ ಎನ್ನುವ ಒಂದು ಅಭಿಪ್ರಾಯವನ್ನು ಮಹಾರಾಷ್ಟ್ರದವರು ಇಟ್ಟುಕೊಂಡು ಹೀಗೆ ಮಾಡುತ್ತಿದ್ದಾರೆ ಎಂದು ನನ್ನ ತಿಳುವಳಿಕೆ. ಬೇರೆ ಏನೂ ಕಾರಣವಿಲ್ಲ. ಮಹಾರಾಷ್ಟ್ರದಲ್ಲಿರತಕ್ಕವರು ಎಲ್ಲಾ ಜನರೂ ಈ ರೀತಿ ಮಾಡುತ್ತಿದ್ದಾರೆ ಎಂದು ಹೇಳಿದರೆ ತಪ್ಪಾದೀತು. ಶಿವಸೇನೆ ವಿಚಾರದಲ್ಲಿ ಬಹುಮಟ್ಟಿಗೆ ಮರಾಠಿ ಭಾಷೆ ಮಾತನಾಡತಕ್ಕ ಜನಗಳಿಗೇ ಬೇಜಾರು ಪಡುತ್ತಾರೆ ಎಲ್ಲರೂ ಇದನ್ನು ಒಪ್ಪುವುದಿಲ್ಲ. ಈ ಗಡಿ ಸಮಸ್ಯೆ

(ಶ್ರೀ ಡಿ. ದೇವರಾಜ ಅರಸ್)

ಕರ್ನಾಟಕದಲ್ಲಿ ಮತ್ತು ಮಹಾರಾಷ್ಟ್ರದಲ್ಲಿ ಕೆಲವು ಮುಖಂಡರಿಗೆ ಮತ್ತು ಸರ್ಕಾರಕ್ಕೆ ಪೂರ್ತಿ ಅಲ್ಲದಿದ್ದರೂ ಕೆಲವು ಭಾಗ ಸರ್ಕಾರಕ್ಕೆ ಎಂದರೆ ಮುಖ್ಯ ಮಂತ್ರಿಗಳಿಗೆ ಬೇಕಾಗಿದೆ ಎಂದು ಒಪ್ಪಿಕೊಳ್ಳಬೇಕಾಗುತ್ತದೆ ಶಿವಸೇನೆಯವರಿಗೆ, ಕೆಲವು ಎಂ. ಇ. ಎಸ್. ಮುಖಂಡರಿಗೆ, ಮತ್ತು ಅವರ ಅನುಯಾಯಿಗಳಿಗೆ ಈ ಈ ಗಡಿ ಸಮಸ್ಯೆ ಇರತಕ್ಕದ್ದು. ಈ ಗಡಿ ಸಮಸ್ಯೆ ಇಡೀ ಮಹಾರಾಷ್ಟ್ರಕ್ಕೆ ಸಂಬಂಧಪಟ್ಟದ್ದು, ಮತ್ತು ಬೆಳಗಾವಿನಲ್ಲಿರತಕ್ಕ ಮರಾಠಿ ಭಾಷೆಯನ್ನು ಮಾತನಾಡತಕ್ಕ ಎಲ್ಲ ಜನಗಳಿಗೂ ಸಂಬಂಧಪಟ್ಟದ್ದು ಎಂದು ಹೇಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಉಭಯತ್ರರೂ ಸೇರಿ ಕೇಂದ್ರ ಸರ್ಕಾರ ಮತ್ತು ಪಾರ್ಲಿಮೆಂಟನ್ನು ಮರುಳು ಮಾಡುತ್ತಿದ್ದಾರೆ ಎನ್ನುವ ಮಾತನ್ನು ಅವರು ಹೇಳುತ್ತಿದ್ದಾರೆ. ನನ್ನ ದೃಷ್ಟಿಯಲ್ಲಿ ಈ ಗಡಿ ಸಮಸ್ಯೆಯನ್ನು ಕೆಲವು ರಾಜಕಾರಿಣಿಗಳು ಎಲ್ಲಾ ಜನರೂ ನಮ್ಮವರೇ ಎಂದು ತಿಳಿದುಕೊಂಡು ಅವರನ್ನು ಇದರಲ್ಲಿ ಬೆರೆಸಿಕೊಂಡು ರಾಜಕಾರಣವನ್ನು ಬೆಳೆಸಿದರೆ ಅದರಿಂದ ಏನು ಮಹತ್ವ ಬರುತ್ತದೆ? ಬೆಳಗಾವ್ ಪಟ್ಟಣವನ್ನು ತೆಗೆದುಕೊಂಡರೆ ನಮಗೆ ಮಹತ್ವ ಬರುತ್ತದೆ ಎಂದು ಅವರಿಗೆ ಅಭಿಪ್ರಾಯ ಇರಬಹುದು. ಕೆಲವು ರಾಜಕಾರಿಣಿಗಳು ಸ್ವಪ್ರತಿಷ್ಠೆಗಾಗಿ ದೇಶದಲ್ಲಿ ಬೇರೆ ಜನರನ್ನು ಈ ರೀತಿಯಾಗಿ ಅನ್ಯಾಯಕ್ಕೆ ಅವಮಾನಕ್ಕೆ, ತೊಂದರೆಗೆ, ಪ್ರಾಣ ಹಾನಿಗೆ, ಆಸ್ತಿ ಹಾನಿಗೆ ಮಾನಹಾನಿಗೆ ಈಡು ಮಾಡಿದ್ದಾರೆ. ಅವರು ಈ ರೀತಿ ಹಿಂಸಾಕೃತ್ಯಗಳನ್ನು ಮಾಡಿಕೊಂಡು ಹೋದರು. ಸರ್ವಪ್ರಯತ್ನದಿಂದ ಈ ಹಿಂಸಾ ಕೃತ್ಯಗಳನ್ನು ತಡೆಗಟ್ಟಬೇಕಾದರೆ ನಾವು ಶಾಂತಿಯಿಂದ ಇರಬೇಕು. ಹಿಂಸೆಯಿಂದ ಹಿಂಸೆಯನ್ನು ತಡೆಗಟ್ಟುವುದಕ್ಕಾಗುವುದಿಲ್ಲ. One cannot conquer violence by violence. One cannot conquer hatred by hatered. One can coquer hatred by love and violence by non-violence ಎಂದು ಹೇಳಿದಂತಹ ಜನ ನಾವು. ಆದರೆ ಈಗ ದೇಶದಲ್ಲಿ ನಡೆಯುತ್ತಾ ಇರತಕ್ಕ ವಿಚಾರಗಳನ್ನು ನೋಡಿದಾಗ ನನಗೆ ಏನು ಅನಿಸುತ್ತದೆ ಎಂದರೆ ಇದು ಬಹುಶಃ ಸರಿಯಲ್ಲ ಹಿಂಸೆಯನ್ನು ಹಿಂಸೆಯಿಂದಲೇ ತಡೆಗಟ್ಟಬೇಕೋ ಏನೋ ಎನ್ನತಕ್ಕಂಥಾ ಒಂದು ಪ್ರಶ್ನೆ ನಮ್ಮ ಮುಂದೆ ಎದ್ದು ನಿಂತಿದೆ. ಆದರೆ ದೇಶದಲ್ಲಿ ನಡೆಯುತ್ತಿರತಕ್ಕಂತಹ ವಿಚಾರಗಳನ್ನು ನೋಡಿದರೆ ಅದು ಸರಿಯಲ್ಲವೇನೋ ಎಂಬ ಅನುಮಾನ ನನಗೆ ಬರುತ್ತದೆ. ಇವತ್ತು ಹಿಂಸೆಯನ್ನು ಹಿಂಸೆಯಿಂದಲೇ ತಡೆಗಟ್ಟಬೇಕೆಂದು ಜನರು ಹೊರಟಿದ್ದಾರೆ. ಇದರಿಂದಾಗಿ ಅಲ್ಲಿ ಸುಮಾರು ಎರಡೂವರೆ ಕೋಟಿ ರೂಪಾಯಿ ಬೆಲೆ ಬಾಳುವಷ್ಟು ಆಸ್ತಿ ನಷ್ಟವಾಗಿದೆ ಅದರಲ್ಲಿ ಕೇಂದ್ರ ಸರ್ಕಾರದ ರೈಲ್ವೆಗೂ ಸೇರಿದ ಕೆಲವು ಆಸ್ತಿಪಾಸ್ತಿಗಳು ನಷ್ಟವಾಗಿವೆ. ಈ ರೀತಿಯ ಘಟನೆಗಳಿಂದ ಅನೇಕರು ನಿರ್ಗತಿಕರಾಗಿದ್ದಾರೆ. ಇಂಥ ದುಂಡಾವರ್ತಿಯಿಂದ ಯಾರೂ

ಗಡಿ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗುವುದಿಲ್ಲ. ಈ ಸಂದರ್ಭದಲ್ಲಿ ನನಗೆ ನಮ್ಮ ಚರಿತ್ರೆಯ ನೆನಪು ಬರುತ್ತದೆ. ಭಾರತ ದೇಶದಲ್ಲಿ ಎಲ್ಲಾ ರಾಜ್ಯಗಳಿಗೂ ಚೈನಾ ದೇಶದಲ್ಲಿದ್ದ ಚೈನಾವಾಲ್ ತರದ ಗೋಡೆಗಳನ್ನು ಹಾಕಿಬಿಟ್ಟರೆ ನಮ್ಮ ಸಮಸ್ಯೆಗಳು ಬಗೆಹರಿಯುತ್ತವೋ ಏನೊ ನಾವು ನಮ್ಮ ಇಂಥ ಸಮಸ್ಯೆಗಳನ್ನು ನ್ಯಾಯರೂಪವಾಗಿ ಬಗೆಹರಿಸುವ ಬದಲು ಹಿಂಸಾರೂಪವನ್ನು ಅನುಸರಿಸಿದರೆ ಹೇಗೆ? ಒಂದು ವೇಳೆ ಇವರು ಕೇಂದ್ರ ಸರ್ಕಾರದ ಮೇಲೆ ಒತ್ತಾಯವನ್ನು ತಂದು ಅವರಿಗೆ ಭೀತಿಯನ್ನು ಉಂಟು ಮಾಡುತ್ತೇವೆಂದು ಹೊರಟರೆ, ಇವರಿಗೆ ಎಷ್ಟು ಭೀತಿಯನ್ನು ಉಂಟು ಮಾಡುವುದಕ್ಕೆ ಶಕ್ತಿ ಇದೆಯೋ ಅಷ್ಟೇ ಪ್ರಮಾಣದಲ್ಲಿ ಮಾಡುವುದಕ್ಕೆ ಬೇರೆಯವರಿಗೂ ಶಕ್ತಿ ಇದೆ. ಬೇಕಾದರೆ ಅವರಿಗಿಂತ ಹೆಚ್ಚಾಗಿ ಇಂಥ ಕೆಲಸ ಮಾಡುವುದಕ್ಕೆ ನಮಗೆ ಶಕ್ತಿ ಇದೆ. ಆದರೆ ನಾವು ಅದಕ್ಕೆ ಕೈ ಹಾಕಲಿಲ್ಲ. ಕನ್ನಡಿಗರು ಯಾವಾಗಲೂ ಸೌಜನ್ಯತೆಯಿಂದ ಕೂಡಿದವರು. ಅದನ್ನು ದುರುಪಯೋಗ ಪಡೆದುಕೊಂಡು ಮರಾಠಿಗರು ಅದು ಕನ್ನಡಿಗರ ನಿಸ್ಸಹಾಯಕತೆ ಅಥವಾ ನಿಶ್ಶಕ್ತಿ ಎಂದು ತಿಳಿದು ಕಿರುಕುಳ ಮತ್ತು ಹಿಂಸೆಯನ್ನು ಕೊಡುವುದಾದರೆ, ಅದಕ್ಕಿಂತ ಎರಡು ಪಟ್ಟು ಹಿಂಸಾಕೃತ್ಯವನ್ನು ಮಾಡುವುದಕ್ಕೆ ಕನ್ನಡಿಗರಿಗೂ ಬರುತ್ತದೆ. ಆದರೆ ಇದರ ಪರಿಣಾಮ ಏನಾಗುತ್ತದೆ? ಮೊದಲು ಅಲ್ಲಿ ಕನ್ನಡಿಗರ ಮೇಲೆ ಹಿಂಸಾಕೃತ್ಯವನ್ನು ಎಸಗಿದರು. ಆಮೇಲೆ ಕೇರಳದವರ ಮೇಲೆ, ತಮಿಳರ ಮೇಲೆ, ಮತ್ತು ತೆಲುಗರ ಮೇಲೆ ಇಂಥ ಕೃತ್ಯಗಳನ್ನು ಎಸಗತೊಡಗಿದರು. ಇದೇ ರೀತಿ ಇಡೀ ಭಾರತ ದೇಶದಲ್ಲಿ ಎಲ್ಲಾ ಕಡೆಗಳಲ್ಲಿ ಮಾಡುವುದಕ್ಕಾಗುತ್ತದೆಯೇ? ಇವತ್ತು ಬೆಂಗಳೂರಿನಲ್ಲಾಗಲಿ, ಮಹಾರಾಷ್ಟ್ರದಲ್ಲಾಗಲಿ ಅಥವಾ ದೆಹಲಿಯಲ್ಲಾಗಲಿ— ನಾವು ಎಲ್ಲರೂ ಒಂದೇ ದೇಶದ ಜನರೆಂದು ತಿಳಿಯಬೇಕು. ನಾವು 60-70 ವರ್ಷಗಳಿಂದ ಹೋರಾಟ ಮಾಡಿ ಸ್ವಾತಂತ್ರ್ಯವನ್ನು ಗಳಿಸಿ ಈ ರೀತಿಯ ಹಿಂಸಾಕೃತ್ಯಗಳಲ್ಲಿ ತೊಡಗಿದರೆ ದೇಶಕ್ಕೆ ಎಷ್ಟು ಅನಾಹುತವಾಗುತ್ತದೆ ಎಂಬುದನ್ನು ತಿಳಿದುಕೊಳ್ಳಬೇಕಾಗುತ್ತದೆ. ಇವೊತ್ತಿನ ದಿವಸ ಇಂಥ ಕೃತ್ಯಗಳನ್ನು ಕಂಡು ಬೊಂಬಾಯಿಯಲ್ಲಿರುವ ಇತರ ಎಲ್ಲಾ ಜನರು ಒಟ್ಟುಗೂಡಿದ್ದಾರೆ. ಅದರಲ್ಲಿ ಮದ್ರಾಸಿನವರು, ಕೇರಳದವರು ಮತ್ತು ಕನ್ನಡಿಗರು——ಎಲ್ಲರೂ ಇದ್ದಾರೆ. ಅವರನ್ನೆಲ್ಲಾ ಬೊಂಬಾಯಿಯಲ್ಲಿ ಬೇಕಾದರೆ ಸೇರಿಸುತ್ತೇವೆ. ಅಲ್ಲಿರತಕ್ಕಂಥ ಯು. ಪಿ. ಯವರು, ಬಿಹಾರಿನವರು ಎಲ್ಲಗೂ ಸೇರುತ್ತಾರೆ. ಇವತ್ತು ಕನ್ನಡಿಗರ ಮೇಲೆ ಮಾಡುವಂತಹ ಕೃತ್ಯವನ್ನು ನಾಳೆಯ ದಿವಸ ತಮಿಳರ ಮೇಲೆ ಮಾಡುತ್ತಾರೆ; ಅದರನಂತರ ಕೇರಳದವರ ಮೇಲೆ ಮಾಡುತ್ತಾರೆ; ಮತ್ತೆ ಇನ್ನೊಬ್ಬರ ಮೇಲೆ ಮಾಡುತ್ತಾರೆ. ಅಗತ್ಯ ಬಿದ್ದರೆ ನಾನಂತೂ ಇದರಲ್ಲಿ ಮುಂದಾಳುತ್ವವನ್ನು ತೆಗೆದುಕೊಳ್ಳುವುದಕ್ಕೆ ತಯಾರಾಗಿದ್ದೇನೆ ಎಂದು ಘಂಟಾಘೋಷವಾಗಿ ಹೇಳುತ್ತೇನೆ. ಆದ್ದರಿಂದ ಈ ಒಂದು ಮನೋಭಾವವನ್ನು ಏನು ಇವರು

(ಶ್ರೀ ಡಿ. ದೇವರಾಜ ಅರಸ್)

ಬೆಳೆಸಿಕೊಂಡು ಬಂದಿದ್ದಾರೆ, ಅದನ್ನು ಇನ್ನು ಮೇಲಾದರೂ ಬಿಟ್ಟುಬಿಡಲಿ, ಮತ್ತು ಅದನ್ನು ಮುಂದುವರಿಸುವುದು ಬೇಡ ಎಂದು ಕೇಳಿಕೊಳ್ಳುತ್ತೇನೆ. ಮಹಾರಾಷ್ಟ್ರದ ಮುಖ್ಯಮಂತ್ರಿಯವರು ಸಹ ಇದಕ್ಕೆ ಉತ್ತೇಜನ ಕೊಡುವುದಿಲ್ಲ ವೆಂಬ ನಂಬಿಕೆ ನನಗೆ ಇದೆ. ಇದನ್ನು ಮೊನ್ನೆ ತಾನೇ ಅವರು ಶಾಸನ ಸಭೆಯಲ್ಲಿ ತಿಳಿಸಿದ್ದಾರೆ. ಕೊನೆಗೆ ಇದರಲ್ಲಿ ಪ್ರಧಾನ ಮಂತ್ರಿಯವರು ಸಹ ಮೈನಾರಿಟಿ ಕಮ್ಯುನಿಟಿಯವರಿಗೆ ರಕ್ಷಣೆ ಕೊಡಬೇಕೆಂದು ಹೇಳತಕ್ಕಂತಹ ಪರಿಸ್ಥಿತಿ ಬಂತು. ಇತ್ತೀಚೆಗೆ ಸಹ ಅಲ್ಲಲ್ಲಿ ಕೆಲವು ಹಿಂಸಾಕೃತ್ಯಗಳು ನಡೆಯುತ್ತಿವೆ ಎಂಬುದನ್ನು ತಿಳಿದುಕೊಂಡಿದ್ದೇನೆ. ಕೆಲವನ್ನು ನಾನು ಪತ್ರಿಕೆಗಳಲ್ಲಿ ಓದಿಕೊಂಡಿದ್ದೇನೆ ಮತ್ತು ಕೆಲವರು ಹೇಳುವುದನ್ನು ಕೇಳಿದ್ದೇನೆ. ಅದು ನಿಜವೋ ಸುಳ್ಳೋ ಎಂದು ಗೊತ್ತಿಲ್ಲ. ಅಂಥ ಕೃತ್ಯಗಳು ನಿಂತಿದ್ದರೆ ಬಹಳ ಸಂತೋಷ. ಅದು ನಿಲ್ಲದಿದ್ದರೆ ಅದನ್ನು ನಿಲ್ಲಿಸಬೇಕೆಂದು ನಾನು ಈ ಸಭೆಯ ಮೂಲಕ ಮಹಾರಾಷ್ಟ್ರದ ಮುಖ್ಯ ಮಂತ್ರಿಯವರಿಗೆ ಮತ್ತು ಮುಂಬಯಿಯಲ್ಲಿರತಕ್ಕಂತಹ ಶಿವಸೇನೆಗೆ ವಿನಯದಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ನಿಮ್ಮ ಮನವಿ ಸುಂಕದವನ ಮುಂದೆ ಸುಖದುಃಖ ಹೇಳಿಕೊಂಡ ಹಾಗೆ ಆಗುತ್ತದೆ.

ಶ್ರೀ ಡಿ. ದೇವರಾಜ ಅರಸ್ : ಅದನ್ನು ಸಹ ನೋಡೋಣ. ಇನ್ನೊಂದು ವಿಚಾರ ಏನೆಂದರೆ ಅಲ್ಲಿ ಹಿಂಸೆಗೆ ಹಿಂಸೆ ಮಾಡುವ ಒಂದು ಸಂಸ್ಥೆ ಎದ್ದು ಬಂದಿದೆ.

ಶ್ರೀ ವಿ. ಎನ್. ಪಾಟೀಲ್.—ಅದು ದಲಿತ ಪ್ಯಾಂತರ್ಸ್.

SRI D. DEVARAJ URS :—I am aware of it. They are also a set of people prepared to fight it out on the same basis. That is why I am appealing to them. Perhaps they will heed my appeal now. Otherwise they will face the consequences the consequences will be worse there. ಅವರು ಏನು ಮಾಡಿದ್ದಾರೆ ಅದರ ನಾಲ್ಕು ಪಟ್ಟು ಅನುಭವಿಸಬೇಕಾಗುತ್ತದೆ. ಆದ್ದರಿಂದ ಅವರು ಅದನ್ನು ಒಪ್ಪುತ್ತಾರೆಂದು ತಿಳಿಯುತ್ತೇನೆ. ಇಲ್ಲದಿದ್ದರೆ ಅವರೇ ಅದನ್ನು ಅನುಭವಿಸುವ ಸ್ಥಿತಿ ಬರುತ್ತದೆ ಅದರ ಮುಖಂಡರಾಗಿರ ತಕ್ಕವರಿಗೆ ಇದು ಎಲ್ಲಿಗೆ ಹೊರಟು ಹೋಗುತ್ತಿದೆ ಎಂಬ ಭೀತಿ ಸ್ವಲ್ಪ ಮಟ್ಟಿಗೆ ಬಂದಿದೆ ಎಂದು ಕಾಣುತ್ತದೆ. ಬೊಂಬಾಯಿಯಲ್ಲಿ ಹಿಂದಿನಿಂದಲೂ ಹೇಗೆ ನಡೆದು ಕೊಂಡು ಬಂದಿತ್ತು. ಹಾಗೆಯೇ ಮುಂದೆ ಸಹ ನಡೆದುಕೊಂಡು ಹೋಗಲಿ.

Regarding sons of the soil whether we say it or they say it or somebody else say it, it has a limited use and limited purpose only. Beyond a certain limit if you stretch it. ಅವರು ತೀರಾ ಬೇರೆ ಬೇರೆ ದುರ್ಮಾರ್ಗಗಳಿಗೆ ಹೊರಟು ಹೋಗುತ್ತಿದ್ದಾರೆ. ಇದರಿಂದ ಸಮಾಜಕ್ಕೆ ಅಘಾತವೇ ಹೊರತು ಒಳ್ಳೆಯದಲ್ಲ. ಆ ಒಂದು ವಾತಾವರಣದ ಮೇಲೆ ನಡೆಯುತ್ತಿರುವ ಅವರ ವಿದ್ಯಾಮಾನಗಳು ಈಗ ಅದು ಬಹು ದೊಡ್ಡದಾಗಿ ನಮ್ಮ ಮುಂದಿದೆ. ಅದನ್ನು ಅವರು ವಿಪರೀತವಾಗಿ ಬೆಳೆಸುವುದು ಸಲ್ಲದಂಥ ಮಾತು. ಈ ದೇಶದಲ್ಲಿ ಭಾಷಾ ಆಧಾರದ ಮೇಲೆ ಹಾಗೂ ಜಾತೀಯ ಆಧಾರದ ಮೇಲೆ ಅಸ್ತಿಯನ್ನೇ ಆಗಲೀ, ದೇಶವನ್ನೇ ಆಗಲೀ ಕೇವಲ ಸರ್ಕಾರದ ನೌಕರಿಯನ್ನಾಗಲೀ, ಅಥವಾ ಕಾರ್ಖಾನೆಗಳಲ್ಲಿ ಕೆಲಸವನ್ನಾಗಲೀ ಗಳಿಸುತ್ತೇವೆಂದು ಯಾರೇ ಹೇಳಿದರೂ ಅದು ಸ್ವಲ್ಪ ದೂರ ಅಭಿಪ್ರಾಯವಷ್ಟೇ ಹೊರತು ಅದರಿಂದ ಲಿಮಿಟೆಡ. ಪರ್ಪಸ್ ಸಹ ಏನೂ ಸಾಧನೆಯಾಗಲಾರದು. ಅದನ್ನೇ ಅವರು ಎಲ್ಲದಕ್ಕೂ ಹಚ್ಚಿಕೊಂಡು ಹೋದರೆ ಈ ದೇಶದಲ್ಲಿ ಅದರಿಂದ ಅನಾಹುತವೇ ಹೆಚ್ಚು. ಖಂಡಿತವಾಗಿ ಈ ದೇಶ ಛಿದ್ರ ಛಿದ್ರವಾಗಿ ಒಡೆದು ಹೋಗುವುದು ಖಂಡಿತ. ಬಾಲ್ಕನೈಜೇಷನ್ ಎಂದು ಏನು ಹೇಳುತ್ತಾರೋ ಆ ರೀತಿ ಅಗುತ್ತದೆ. ಆಗ ಭಾಷೆಗೆ ಒಂದು ರಾಜ್ಯ, ಜಾತಿಗೇ ಒಂದೊಂದು ರಾಜ್ಯ ಬರುವ ಪರಿಸ್ಥಿತಿ ಬರುತ್ತದೆ, ಅಂತಹ ಒಂದು ಅನಾಹುತಕ್ಕೆ ನಾವು ಎಡೆ ಕೊಡುವುದು ಬೇಡ. ಬೊಂಬಾಯಿಯಲ್ಲಿ ನಡೆಯುತ್ತಿರುವ ಪ್ರಕರಣಗಳ ಬಗ್ಗೆ ನಮಗೆ ಅನುಮಾನ ಬರುತ್ತಿದೆ. ಈ ದೇಶದಲ್ಲಿ ಎಲ್ಲೆಲ್ಲಿ ಅನ್ಯಾಯಗಳು ಆಗುತ್ತಿವೆಯೋ ಅವನ್ನು ನಾವು ಖಂಡಿಸಲೇ ಬೇಕು. ಅಲ್ಲಿ ಏನಾದರೂ ಅವರು ಇನ್ನೂ ಅನ್ಯಾಯಗಳನ್ನು ಮಾಡುತ್ತಿದ್ದರೆ, ಅವರಿಗೆ ನಾನು ಈಗಲೂ ಮನವಿ ಮಾಡಿಕೊಳ್ಳುತ್ತೇನೆ.

3-00 P.M.

ಶ್ರೀ ಎಂ. ಎಸ್. ಕೃಷ್ಣನ್.—ಆದು ಸುಂಕದವರ ಮುಂದೆ ಸುಖ ದುಃಖ ಹೇಳಿದಂತಾಗುತ್ತದೆ.

ಶ್ರೀ ಡಿ. ದೇವರಾಜ್ ಅರಸ್.—ಅವರಿಗೂ ನಾವು ಮನವಿ ಮಾಡೋಣ. ಮಹಾರಾಷ್ಟ್ರ ಮತ್ತು ಕರ್ನಾಟಕ ಗಡಿ ಸಮಸ್ಯೆಯನ್ನು ಮೇಲ್ಮಟ್ಟದಲ್ಲಿ ಚರ್ಚೆ ಮಾಡಿ ಈ ಕಾರ್ಯವನ್ನು ಬಗೆಹರಿಸೋಣ. ಚರ್ಚೆ ಮಾಡಿ ಯಾವುದು ನ್ಯಾಯವೋ ಅದಕ್ಕೆ ಎಲ್ಲರೂ ತಲೆಬಾಗೋಣ. ಅವರ ಮಾತಿಗೆ ಅವರು ತಲೆ ಬಾಗಬೇಕು. ಅವರ ಮಾತಿನಂತೆ ನಡೆಯುವುದಕ್ಕೆ ಒಪ್ಪಲೇ ಬೇಕು. ಬಹಿರಂಗವಾಗಿ ಈ ದೇಶದ ಮುಂದೆ ಆಡಿದಂಥ ಮಾತನ್ನು ಅವರು ತಪ್ಪಿಸಿಕೊಳ್ಳುವುದಕ್ಕೆ ಎಂದೂ ಪ್ರಯತ್ನ ಮಾಡಬಾರದು. ನಾವೂ ಅದಕ್ಕೆ ಅವರನ್ನು ಬಿಡುವುದಿಲ್ಲ. ಅವರು ಆಡಿದಂಥ ಮಾತಿಗೇ ಕಟ್ಟು ಬೀಳಲೇ ಬೇಕು.

(ಶ್ರೀ ಡಿ. ದೇವರಾಜ ಅರಸ್)

ಅದನ್ನು ಈಗ ಬದಲಾಯಿಸುತ್ತೇವೆ, ನಮಗೆ ಕಮಿಷನ್ ವರದಿ ಬೇಡ, ಏನು ಮಾಡುತ್ತಾರೋ ನೋಡೋಣವೆಂದರೆ, ಅಂಥಾದ್ದನ್ನು ನಾವು ಒಪ್ಪುವುದಕ್ಕೆ ಸಾಧ್ಯವಿಲ್ಲ.

ಕೆ. ಹೆಚ್. ಹನುಮೇಗೌಡ :—ಈ ವಿಚಾರವನ್ನು ಕೇಂದ್ರ ಸರಕಾರ ದವರು ಮಹಾರಾಷ್ಟ್ರದವರಿಗೆ ಏಕೆ ಹೇಳಬಾರದು ?

ಶ್ರೀ ಡಿ. ದೇವರಾಜ ಅರಸ್ :—ಈಗ ನಾವೂ ನೀವೂ ಮಾತನಾಡಿರುವ ಹಾಗೆ ನಾವು ನ್ಯಾಯ ಮಾರ್ಗದಲ್ಲಿಯೇ ಹೋಗೋಣ. ಅವರಿಗೆ ಲೆಜಟಮೇಟಾಗಿ ಸಿಗುವುದನ್ನು ಅವರು ತೆಗೆದುಕೊಳ್ಳಲಿ ನಮಗೆ ಬರತಕ್ಕಂಥಾದ್ದನ್ನು ನಾವು ತೆಗೆದು ಕೊಳ್ಳುತ್ತೇವೆ. ಅವರು ಒಂದು ದುಮಾರ್ಗದಲ್ಲಿ ಹಿಂಸಾ ಮಾರ್ಗದಲ್ಲಿ, ದೂಂಡಾ ವರ್ತಿಯಲ್ಲಿ ಹಾಗೂ ಪಾಳೆಯಗಾರಿಕೆ ಮನೋಭಾವದಿಂದ ಈ ಸಮಸ್ಯೆಯನ್ನು ಎದುರಿಸುತ್ತೇವೆ, ದಬ್ಬಾಳಿಕೆ ಮಾಡುತ್ತೇವೆಂದರೆ ಅದು ಆಗುವುದಿಲ್ಲ. ಕೇಂದ್ರದ ಒತ್ತಾಯದಂತೆ ನಡೆಯುತ್ತೇವೆಂದು ಹೇಳಿದರೆ, ಅದು ನ್ಯಾಯವಾಗಿದ್ದರೆ ಎಲ್ಲರೂ ತಲೆಬಾಗೋಣ ನ್ಯಾಯವಾದುದಕ್ಕೆ ಎಲ್ಲರೂ ತಲೆಬಾಗುತ್ತೇವೆ. ಕೇಂದ್ರ ದವರು ಬೇರೆ ಮಾತು ಹೇಳಿ, ನ್ಯಾಯವಿಲ್ಲದಿದ್ದರೆ, ಕೇಂದ್ರದವರು ಹೇಳಿ ದಾಕ್ಷಣ, ಅಂಥಾದ್ದನ್ನೂ ಸಹ ನಾವು ಖಂಡಿತವಾಗಿ ಒಪುವುದಿಲ್ಲವೆಂದು ನಾನು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳುತ್ತೇನೆ. ಆದರೆ ಮಹಾರಾಷ್ಟ್ರ ಸ್ನೇಹಿತರು ನಮ್ಮ ಸಂಖ್ಯಾಬಲ ಜಾಸ್ತಿ ಇದೆಯೆಂದು ತಿಳಿದುಕೊಂಡಿದ್ದರೆ, ಅದು ಬರೀ ಭ್ರಾಂತಿ. ಇನ್ನು ಬೇರೆ ಏನನ್ನೂ ಹೇಳುವುದಕ್ಕಾಗುವುದಿಲ್ಲ. ಯಾವಾಗಲೂ ನ್ಯಾಯಕ್ಕೆ ತಲೆಬಾಗುವುದು ಕರ್ನಾಟಕ ರಾಜ್ಯ, ಕರ್ನಾಟಕ ಸರ್ಕಾರ ಎಂಬು ದನ್ನು ಯಾರೂ ಮರೆಯಬಾರದು. ಅನ್ಯಾಯಕ್ಕೆ ಯಾವಾಗಲೂ ತಲೆಬಾಗುವು ದಿಲ್ಲ. ಆದ್ದರಿಂದ ಅವರಿಗೆ ಏನೊಂದು ಭ್ರಾಂತಿ ಇದೆಯೋ ಅದನ್ನು ಕೂಡಲೇ ಬಿಡಲಿ ನಾನು ಈಗ ನಮ್ಮ ಕನ್ನಡಿಗರಿಗೆ ಆಗಿರುವ ಅನ್ಯಾಯದ ಬಗ್ಗೆ ಹೆಚ್ಚಿಗೆ ಹೇಳುವುದಿಲ್ಲ. ನಮ್ಮ ಸ್ನೇಹಿತರು ಕೆಲವರು ಅಲ್ಲಿ ಹೋಗಿ ನೋಡಿಕೊಂಡು ಬಂದಿ ದ್ದಾರೆ. ಅನೇಕ ವಿಷಯಗಳನ್ನು ತಿಳಿದುಕೊಂಡು ಬಂದಿದ್ದಾರೆ. ಬಟ್ಟಿನಲ್ಲಿ ಇಂತಹ ಒಂದು ದೊಡ್ಡ ಅನ್ಯಾಯ ಆಗಬಾರದಾಗಿತ್ತು. ಇದು ಆಗಿದೆ. ಆಗಿ ರುವ ಅನ್ಯಾಯಗಳನ್ನು ತಡೆಗಟ್ಟಬೇಕು. ಪುನಃ ಅಂತಹ ಅನ್ಯಾಯಗಳು ಆಗ ದಂತೆ ನೋಡಿಕೊಳ್ಳಲು ಎಲ್ಲ ಪ್ರಯತ್ನಗಳನ್ನೂ ಮಾಡಬೇಕು. ಅವರ ಒಂದು ಅನ್ಯಾಯದ ದೆಸೆಯಿಂದ ಕಷ್ಟಕ್ಕೀಡಾದವರಿಗೆ ಸೂಕ್ತ ಪರಿಹಾರವನ್ನು ಕೊಡ ಬೇಕು. ಅದಕ್ಕೆ ಯಾರು ಕಾರಣರು, ಎಷ್ಟರ ಮಟ್ಟಿಗೆ ಕಾರಣರೆನ್ನುವುದನ್ನು ಕೂಡ ವಿಚಾರ ಮಾಡಿ ಅದರ ಬಗ್ಗೆ ಒಂದು ಜುಡಿಷಿಯಲ್ ಎನ್‌ಕ್ವೈರಿ ಮಾಡುವುದು

ಯೋಗ್ಯ. ಈ ಮಾತನ್ನು ನಾನು ಇವತ್ತು ಹೇಳುತ್ತಾ ಇಲ್ಲ. ಹೋದ ಸಾರಿಯೇ ನಾನು ಡೆಲ್ಲಿಗೆ ಹೋದ ಕೂಡಲೇ ಆ ಮಾತನ್ನು ಬಹಿರಂಗವಾಗಿ ಹೇಳಿದ್ದೇನೆ. ಇದೇ ಮಾತನ್ನು ಗೃಹ ಮಂತ್ರಿಗಳಿಗೂ ಕೂಡ ಅಲ್ಲಿ ಹೇಳಿದ್ದೇನೆ. ಇದರ ಬಗ್ಗೆ ಜುಡಿಷಿಯಲ್ ಎನ್‌ಕ್ವೈರಿ ಮಾಡುವುದೂ ಸೂಕ್ತವಿದೆ, ನೊಂದವರಿಗೆ ಪರಿಹಾರ ಕೊಡುವುದೂ ಕೂಡ ಸೂಕ್ತವಿದೆಯೆಂದು ಹೇಳಿದ್ದೇನೆ. ಕೇಂದ್ರ ಸರ್ಕಾರದಲ್ಲಿ ನಾನು ಈ ಮಾತನ್ನು ಹೇಳಿದಾಗ ಮಾನ್ಯ ಶ್ರೀ ನಾಯಕ್ ಅವರೂ ಸಹ ಒಪ್ಪಿದ್ದಾರೆ. ಪರಿಹಾರ ಕೊಡುವುದರಲ್ಲಿ ಅಲ್ಲಿ ಇನ್ನೂ ಅನೇಕರಿಗೆ ಕೊಟ್ಟಿಲ್ಲವೆಂಬ ವದಂತಿ ನನಗೆ ಬಂದಿದೆ. ಯಾರ್ಯಾರಿಗೆ ಪರಿಹಾರವನ್ನು ಕೊಟ್ಟಿಲ್ಲವೋ ಅವರಿಗೆ ಕೂಡಲೇ ಅದನ್ನು ಒದಗಿಸಬೇಕು, ಕೇಂದ್ರ ಸರ್ಕಾರದಲ್ಲಿ ನಮ್ಮ ಠರಾವಿನ ಪ್ರಕಾರ ನಡೆಯಬೇಕೆಂದು ಕೇಳಬೇಕು. ನಮ್ಮ ಈಗಿನ ಠರಾವಿನಲ್ಲಿರ ತಕ್ಕ ಸೂಚನೆಯ ಪ್ರಕಾರ ಕೇಂದ್ರ ಸರ್ಕಾರದವರು ತೀರ್ಮಾನ ತೆಗೆದುಕೊಳ್ಳುವ ರೀತಿಯಲ್ಲಿ ನಾವು ನಡೆಯಬೇಕು. ಆದರೆ ನಾವು ಇಲ್ಲಿಗೆ ಬಂದವರಿಗೆ ಪರಿಹಾರ ಕೊಡುವುದರಲ್ಲಿ ಹಿಂದೆ ಬಿದ್ದಿಲ್ಲ. ಕರ್ನಾಟಕ ರಾಜ್ಯದಲ್ಲಿ ಅವರಿಗೆ ಏನೇನು ಪರಿಹಾರವನ್ನು ಕೊಟ್ಟಿದ್ದೇವೋ ಅವನ್ನು ಈಗಾಗಲೇ ಹೇಳಿದ್ದೇವೆ. ಅವರಿಗೆ ಸೂಕ್ತ ಪರಿಹಾರಗಳನ್ನು ಕೊಟ್ಟಿದ್ದೇವೆ. ಇನ್ನೂ ಕೆಲವು ಪ್ರೋಸೆಸ್‌ನಲ್ಲಿದೆ. ಪೂರ್ಣವಾಗಿ ಯಾರ್ಯಾರು ನಷ್ಟಕ್ಕೊಳಗಾಗಿದ್ದಾರೋ ಅಂತಹವರನ್ನು ಹುಡುಕಿ ಹುಡುಕಿ ಪರಿಹಾರಗಳನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಅದರಂತೆಯೇ ಅವರ ಸಹ ಪರಿಹಾರಗಳನ್ನು ಅಲ್ಲಿಯೂ ಕೊಡಲಿ, ಅವರ ಲೆಕ್ಕದಲ್ಲಿ ನಮ್ಮವರ ಸಂಖ್ಯೆ ಕಡಿಮೆ ಇದೆಯೋ, ಗೊತ್ತಿಲ್ಲ. ನಮ್ಮಲ್ಲಿ ಇನ್ನೂ ಅನೇಕರು ಅಲ್ಲಿಗೆ ಹೋಗುವುದಕ್ಕೆ ಪ್ರಯತ್ನ ಪಟ್ಟಿಲ್ಲ. ಅದಕ್ಕಾಗಿ ನಮ್ಮ ಅಧಿಕಾರಿಗಳೂ, ಮತ್ತು ಮಹಾರಾಷ್ಟ್ರದ ಅಧಿಕಾರಿಗಳೂ ಉಭಯತ್ರರೂ ಸೇರಿ ಪರಸ್ಪರ ಚರ್ಚೆ ಮಾಡಿ ಇಲ್ಲಿಂದ ಅಲ್ಲಿಗೆ ಹೋಗುವುದಕ್ಕೂ ಮತ್ತು ಅಲ್ಲಿಂದ ಇಲ್ಲಿಗೆ ಬರುವುದಕ್ಕೂ ಅನೇಕ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಕೆಲವಾರು ಜನರು ಇಲ್ಲಿಂದ ಈಗಾಗಲೇ ಅಲ್ಲಿಗೆ ಹೋಗಿದ್ದಾರೆ. ಇನ್ನೂ ಬಹು ಜನರು ಇನ್ನೂ ಅಲ್ಲಿಗೆ ಹೋಗಬೇಕಾಗಿದೆ. ಅವರು ಅಲ್ಲಿಗೆ ಹೋಗಿ ಸಮಾಧಾನವಾಗಿ ನೆಲೆ ಮಾಡತಕ್ಕಂಥ ಒಂದು ವಾತಾವರಣವನ್ನು ಮಹಾರಾಷ್ಟ್ರದ ಜನರು ಹಾಗೂ ಮಹಾರಾಷ್ಟ್ರ ಸರಕಾರ ಕಲ್ಪಿಸಿಕೊಡಲಿ. ಅಲ್ಲಿನವರಿಗೆ ಪರಿಹಾರವನ್ನೂ ಸಹ ಒದಗಿಸಲಿ.

ಇನ್ನು ನಿನ್ನೆ ಈ ಸಭೆಯಲ್ಲಿ ನಡೆದಂಥ ಘಟನೆ ಸರಿಯಲ್ಲ ರಾಜ್ಯಪಾಲರು ಭಾಷಣ ಮಾಡುತ್ತಿರುವಾಗ ಎಂ. ಇ. ಎಸ್. ಪಕ್ಷದ ಕೆಲವು ಸ್ನೇಹಿತರು ಗಡಿ ಸಮಸ್ಯೆ ಬಗೆಹರಿಯಲಿಲ್ಲ, ಎಲ್ಲಿಯವರೆಗೆ ಈ ಒಂದು ಗಡಿ ಸಮಸ್ಯೆ ನಿರ್ಣಯವಾಗುವುದಿಲ್ಲವೋ ಅಲ್ಲಿಯವರೆಗೆ ನಿಮ್ಮ ಭಾಷಣ ಕೇಳುವುದಕ್ಕೆ ನಮಗೆ ಇಷ್ಟವಿಲ್ಲವೆಂದು ಕೆಲವಾರು ಸ್ಲೋಗನ್‌ಗಳನ್ನು ಅವರ ಒಂದು ಮಾತಿನಲ್ಲಿ ಹೇಳಿಕೊಂಡು ಹೊರಟರು. ನಾನು ಅವರಲ್ಲಿ

(ಶ್ರೀ ಡಿ. ದೇವರಾಜ ಅರಸ್)

ಕೇಳುವುದಿಷ್ಟೇ. ಸುಮನೆ ಎಲ್ಲವನ್ನೂ ಮಹಾರಾಷ್ಟ್ರಕ್ಕೇ ತೆಗೆದುಕೊಳ್ಳುತ್ತೇವೆಂದು ಹೇಳುತ್ತಿದ್ದಾರೆ. ಅದು ಆಗದು. ಇನ್ನು ಮುಂದಾದರೂ ಆ ಒಂದು ಭ್ರಾಂತಿಯನ್ನು ಬಿಡಲಿ. ಆ ರೀತಿ ಹೇಳತಕ್ಕವರು ಬೇಕಾದರೆ ನನ್ನ ಜೊತೆಯಲ್ಲಿ ಬರಲಿ. ಅಲ್ಲಿಯವರು ಏನು ಹೇಳುತ್ತಾರೆಂಬುದನ್ನು ಕೇಳಲಿ ಅಲ್ಲಿ ಅನೇಕರು ನನ್ನ ಹತ್ತಿರ ಬಂದು ಇವರನ್ನು ನಾವೇ ಹೊಡೆದಟ್ಟುತ್ತೇವೆಂದು ಹೇಳಿದ್ದನ್ನು ಅವರೂ ಕೇಳಿದ್ದಾರೆ. ನಾವೂ ಸಹ ಅದರಂತೆ ಈಗಿರತಕ್ಕ ನಾಲ್ಕೈದು ಜನರನ್ನು ಈ ಅಸೆಂಬ್ಲಿಗೆ ಬರ ಮಾಡುತ್ತೇವೆ. ಅವರು ನಮ್ಮಲ್ಲಿಗೆ ಬಂದು ಬಿಡಲಿ.

ಶ್ರೀ ಕೋಣಂದೂರು ಲಿಂಗಪ್ಪ :- ಬೊಂಬಾಯಿಯಲ್ಲ ನಮ್ಮವರು ಶಿವ ಸೇನೆಯವರೊಡನೆ ಒಪ್ಪಂದ ಮಾಡಿದಂತೆ ಮಾಡುತ್ತಿರಾ ?

ಶ್ರೀ ಡಿ. ದೇವರಾಜ್ ಅರಸ್ :—ನೀವು ಎಲ್ಲಕ್ಕೂ ಬಹಳ ದೂರ ಹೋಗಬೇಡಿ. ಅವರು ಬಂದರೆ ಬರಲಿ. ಒಂದು ವೇಳೆ ಅವರು ಬಿಡದೇ ಹೋದರೆ ನಾವು ಬಿಡಿಸುತ್ತೇವೆ. ಈಗಲಾದರೂ ಅವರು ಚೆನ್ನಾಗಿ ತಿಳಿದುಕೊಳ್ಳಲಿ. ನಾವು ಮತ್ತೆ ಮತ್ತೆ ಈ ಮಾತನ್ನು ಹೇಳಬೇಕಾದ ಅಗತ್ಯವಿಲ್ಲ. ಇಲ್ಲಿ ಇವರು ಬಹಳ ಸಣ್ಣ ಸಂಖ್ಯೆಯಲ್ಲಿ ಇದ್ದಾರೆಂದು ಇವರ ಮೇಲೆ ಯಾವ ಒಂದು ದೌರ್ಜನ್ಯ ಮನೋಭಾವವನ್ನು ನಾವು ತೋರಿಸುತ್ತಾ ಇಲ್ಲ. ಇವರಿಗೆ ಇಲ್ಲಿ ಸಾಕಷ್ಟು ಗೌರವ ಕೊಡಬೇಕು ಎಂಬ ಬಗ್ಗೆ ನಮಗೆ ಹೆಚ್ಚಿನ ವಿಶ್ವಾಸವಿದೆ. ನಾವು ಹೋಗತಕ್ಕ ರೀತಿ ರಾಜಕೀಯದಲ್ಲಿ ಎಲ್ಲರೂ ಒಪ್ಪುವ ಹಾಗೆ ಇರಬೇಕು. ಆ ರೀತಿ ಮಾಡದೆ ನಾವು ಎಲ್ಲವನ್ನೂ ತೆಗೆದುಕೊಳ್ಳುತ್ತೇವೆ, ಅದನ್ನು ತೆಗೆದುಕೊಳ್ಳುತ್ತೇವೆ, ಇದನ್ನು ತೆಗೆದುಕೊಳ್ಳುತ್ತೇವೆಂದು ಈ ರೀತಿ ಮಾತನಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಅವರು ಇನ್ನೊಂದು ಕಣ್ಣನ್ನು ಹುಟ್ಟಿಸಿಕೊಂಡರೂ ಬೆಳಗಾಂನ್ನು ಆವರು ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

You cannot take it, my dear friends. You won't have Belgaum :

SRI B. B. SAYANAK : The Hon'ble Chief Minister is challenging; let us see. We are prepared to give a challenge even to the Prime Minister.

SRI D. DEVARAJ URS : I have already seen such challenges. M.E.S. people have given enough challenges.

Those challenges won't work. Belgaum is with us since 17 years after integration; it was in Karnataka previously and it is going to be in Karnataka. ನಾವು ನಿಮ್ಮನ್ನು ಅಟ್ಟುವುದಿಲ್ಲ. ನೀವೂ ಇರ್ರಿ ನಮ್ಮ ಜೊತೆಯಲ್ಲೀ.

I want you to be with us. But, if you do not want to remain with us, I cannot help. I can only request you to be with us.

ಶ್ರೀ ಎಸ್. ಬಂಗಾರಪ್ಪ :—ನಮ್ಮ ಎಂ. ಇ. ಎಸ್ ಪಕ್ಷದ ಸದಸ್ಯರಿಗೆ ಈ ಗಡೀ ಪ್ರಶ್ನೆ ಕೇಂದ್ರ ಸರ್ಕಾರದಿಂದ ಪರಿಹಾರವಾಗಬೇಕೆಂದು ತಿಳಿದಿದ್ದಾಗ್ಯೂ ಇವರೇಕೆ ಹೀಗೆ ಪದೇ ಪದೇ ಈ ಗಲಾಟೆಗಳನ್ನು ಎಬ್ಬಿಸುತ್ತಿದ್ದಾರೆ?

ಶ್ರೀ ಡಿ. ದೇವರಾಜ ಅರಸ್ :— That is also a point. ನಾವು ಹಿಂದಿನ ಚರಿತ್ರೆಗಳನ್ನು ನೋಡಿದರೆ ಈ ಗಲಾಟೆಗಳೇ ಇರಲಿಲ್ಲ. ಈ ಪುಣ್ಯಾತ್ಮರುಗಳು ಹುಟ್ಟಿ ಬಂದಮೇಲೆ ಈ ಗಲಾಟೆಗಳೆಲ್ಲ ಪ್ರಾರಂಭವಾದವು. ಆ ಶಿವಾಜಿ ಬಗ್ಗೆ ಆತನ ತಂದೆಯು ಬಗ್ಗೆ ಕನ್ನಡಿಗರಿಗೆಲ್ಲಾ ಬಹಳ ಅಭಿಮಾನವಿದೆ, ವಿಶ್ವಾಸವಿದೆ, ಅಪಾರ ಗೌರವವಿದೆ. ಆ ಶಿವಾಜಿ ತಂದೆ ಷಹಜಿ ಅವರ ಗೋರಿ ಸಹಾ ನಮ್ಮ ರಾಜ್ಯದಲ್ಲಿದೆ. ಇವರೀರ್ವರ ಸಾಹಸದ ಕಾರ್ಯಗಳ ಬಗೆ ನಮಗೆಲ್ಲರಿಗೂ ಮೆಚ್ಚಿಗೆ, ಗೌರವ, ಭಕ್ತಿ ವಿಶ್ವಾಸಗಳು ಇವೆ. ಈ ದಿವಸ ದೇವರ ಫೋಟೋ ಇಟ್ಟುಕೊಂಡು ಪೂಜೆ ಮಾಡತಕ್ಕ ಪೂಜಾರಿಗೇ ದೇವರಲ್ಲಿ ಭಕ್ತಿ ವಿಶ್ವಾಸಗಳು ಇವೆ, ಇನ್ನು ಬಾಕಿ ಯಾರಿಗೂ ಇರುವುದಿಲ್ಲ ಎಂಬ ಊಹೆ ಸರಿಯಾದ್ದಲ್ಲ. ನಮ್ಮ ಈ ಎಂ. ಇ. ಎಸ್. ಸದಸ್ಯರಿಗೆ ಆ ಹಿಂದಿನ ಚರಿತ್ರೆಯನ್ನು ಸರಿಯಾಗಿ ಓದಿ ಅರ್ಥಮಾಡಿಕೊಂಡಿಲ್ಲ ಎಂಬುದು ಇದರಿಂದಲೇ ವೇದ್ಯವಾಗುತ್ತಿದೆ.

ಶ್ರೀ ಎಸ್. ಹಮೀದ್‌ಷಾ :—ನಮ್ಮ ಬೆಂಗಳೂರು ನಗರದಲ್ಲಿ ಒಂದು ಕಾನ್‌ಸ್ಟಿಟ್ಯುಯೆನ್ಸಿಗೆ ಶಿವಾಜಿನಗರ ಎಂದು ಹೆಸರನ್ನಿಟ್ಟಿದ್ದೇವೆ. ಅಷ್ಟೇ ಅಲ್ಲದೆ ಈ ನಗರದಲ್ಲಿ ಸಿನೀಮಾ ಮಂದಿರವೊಂದಕ್ಕೆ ಕೂಡ ಶಿವಾಜಿ ಟಾಕೀಸ್ ಎಂದು ಹೆಸರಿಡಲಾಗಿದೆ....ಹೀಗೆ ಇನ್ನೂ ಅನೇಕ ಇವೆ.

ಶ್ರೀ ಡಿ. ದೇವರಾಜ ಅರಸ್:—ಬಹಳ ಹಿಂದಿನಕಾಲದಿಂದಲೂ ಆ ಶಿವಾಜಿ ಮತ್ತು ಆತನ ತಂದೆ ಇವರಿಬ್ಬರ ಚರಿತ್ರೆ ನಮ್ಮ ಕರ್ನಾಟಕದ ಇತಿಹಾಸಕ್ಕೆ ಬಹಳ ಹೊಂದಿಕೊಂಡಿದೆ. ಆದರೆ ಇವರಂತೆ ಆ ಮಹರಾಷ್ಟ್ರದಲ್ಲಿರತಕ್ಕ ಎಲ್ಲ ಜನತೆಯೂ ಆಗಿದ್ದರೆ ಅವರಿಗೆ ಅಲ್ಲಿ ಇಷ್ಟುಕಾಲ ಉಳಿಯುವುದಕ್ಕೆ ಸಾಧ್ಯವಿರುತ್ತಿರಲಿಲ್ಲ.

(ಶ್ರೀ ಡಿ. ದೇವರಾಜ ಅರಸ್)

ಕನ್ನಡಿಗರೂ ಮತ್ತು ಮಹಾರಾಷ್ಟ್ರೀಯರೂ ಬಹಳ ವರ್ಷಗಳ ಕಾಲದಿಂ ಒಂದು ಹೊಂದಾವಣಿಕೆಯಿಂದ ನಡೆದುಕೊಂಡು ಬಂದಿರುವುದರಿಂದ ನಾವು ಈ ಮಹನೀಯರಿಗೆ ಹೇಳುತ್ತಿರುವುದೇನೆಂದರೆ—ನೀವು ಇನ್ನಾದರೂ ನಿಮ್ಮ ಮೂರ್ಖತನವನ್ನು ಬಿಟ್ಟು ಬಿಡಿ, ಹಿಂದೆ ಏನು ಉಭಯತ್ರಯರೂ ಒಂದು ತೀರ್ಮಾನಕ್ಕೆ ಬಂದು ಆ ಒಂದು ಕಮಿಷನ್ನನ್ನು ನೇಮಕ ಮಾಡಿತು ಅದರಂತೆ ಉಭಯತ್ರಯರೂ ಅವರವರ ಮಾತಿನ ಪ್ರಕಾರ ನಡೆಯುವುದು ಒಳ್ಳೆಯದೆಂದು ಹೇಳುತ್ತಿದ್ದೇನೆ. ಅಷ್ಟೇ ಅಲ್ಲದೆ ಇಂಥ ಒಂದು ಸುಗಮವಾದ ವಾತಾವರಣವನ್ನು ಅಲ್ಲಗಳೆದು ಇವರು ಅಲ್ಲಿಯ ಜನರನ್ನು ಗುಂಪುಕಟ್ಟಿಕೊಂಡು ಬಂದು ಇಲ್ಲಿ ಗಲಭೆನಡೆಸುವುದು ಸಾಧುವಾದುದಲ್ಲ ಎಂದು ನಾನು ಅವರಲ್ಲಿ ಕಳಕಳಿಯಿಂದ ಮನವಿಮಾಡಿಕೊಳ್ಳುತ್ತೇನೆ.

ಮತ್ತೆ ನಮ್ಮ ವಿರೋಧಪಕ್ಷದ ನಾಯಕರು ಅವರ ತಿದ್ದುಪಡಿಯಲ್ಲಿ ಹೀಗೆ ಹೇಳಿದ್ದಾರೆ :—

The Hon'ble the Leader of the Opposition has suggested two amendments to the Motion: (1) In line 4 of para one the words 'and others' to be substitued by the words 'with the connivance of the Maharashtra Government'. I would only appeal to my friend on the opposite side that we may not go to the extent of saying that it is with the connivance of the Maharashtra Government. So, I request him to withdraw that amendment. The second amendment is that the words 'prevail upon the Maharashtra Government' shall be deleted. By accepting this amendment it will mean that the Central Government will have to appoint a Judicial Enquiry. That is the position. I do not know the legal position whether the Central Government can appoint a Judicial Enquiry for this. That is way I was cautious enough to say: "requests the Central Government to prevail upon the Maharashtra Government to institute a judicial enquiry." In the course of the debate I will let you know what is the constitutional position I have a doubt that the Centre may not have the authority to do it directly. I will come to that later on At least so far as the first amendment is concerned, I would request you to kindly

withdraw it, We are functioning as two different Govenments It may not be proper for me and the Opposition Leader to attribute any motive. With these words I commend this Resolution for the acceptance of the House.

Sri M. S. KRISHNAN : If it is a fact-and it is a fact that the Maharashtra Government supported Shiv Sena you have to strongly condemn it.

ಶ್ರೀ ಡಿ. ದೇವರಾಜ ಅರಸ್.– ಅವರ ಕಾಂಗ್ರೆಸ್ ಘಟಕದಲ್ಲಿ ಅಂದರೆ ಬಿ. ಪಿ. ಸಿ. ಸಿ. ಘಟಕದ ಪ್ರಕಾರ ಚುನಾವಣೆಗೆ ಬೇರೆ ಪಕ್ಷದ ಜೊತೆ ಅವರು ಸೇರಿದ್ದ ವಿಚಾರದಲ್ಲಿ ನಾನು ಹಿಂದೆಯೇ ಪತ್ರಿಕೆಗಳಲ್ಲಿ ನನ್ನ ನಿಲುವು ಏನೆಂಬ ಬಗ್ಗೆ ಹೇಳಿಕೆಯನ್ನು ಕೊಟ್ಟಿದ್ದೇನೆ That does not necessarily mean that the Government of Maharasthra was behind it. You cannot come to that conclusion straight away. Out of negliegence they might have allowed these people to carry on

ಶ್ರೀ ಎಂ ಎಸ್. ಕೃಷ್ಣನ್.— ಕಳೆದ ಜನವರಿ ತಿಂಗಳಲ್ಲಿ ಬೊಂಬಾಯಿನಲ್ಲಿ ಹಿಂದೆ ಪ್ರೊಸೆಷನ್ನುಗಳು ನಡೆದಾಗ ಅಲ್ಲಿ ಗಲಭೆಗಳು ನಡೆದ ಕಾಲದಲ್ಲಿ ಅಲ್ಲಿಯ ನಾಯಕ್ ಪೋಲೀಸಿನವರು ಶಿವಸೇನೆಗೆ ಸೇರಿದ ಯಾರೊಬ್ಬರಿಗೂ ಏಟನ್ನು ಕೊಡದೆ ಕೇವಲ ಕನ್ನಡಿಗರಿಗೇ ಏಟು ಕೊಡಲು ಕಾರಣವೇನು" ಏಕೆ ಹೊಡೆದಿದ್ದಾರೆ?

SRI D. DEVARAJ URS —I would request the hon. members to hear me patiently. Supposing the Police which belongs to Maharashtra Government has acted in a particular manner, which is for all purposees appear to be partial. May be it is a fact.

SRI M. S. KRISHNAN :—Under the direction of Sri V P. Naik Government-

SRI D DEVARAJ URS :—I do not know whether it is a fact The one thing I know is the Police of any State, whether it is Maharashtra State or Karnataka State or some other State have the constitutional right and obligation to act indenpendently. The Police need

(SRI D. DEVARAJ URS)

not take orders from the Government or the Minister to maintain law and order. This should be properly understood by all of us. According to the I.P.C. or the Cr. P. C. the Police have been given powers. Under these provisions, they can straightaway act upon it. While so acting, they might have discriminated. That is possible. That does mean or goes to prove that it is the directive of the Minister or the Chief Minister. That is my point.

SRI V. L. PATIL: That is a very intelligent way of arguing a case.

SRI D. DEVARAJ URS: That is how the Government functions. The IGP an act independently as long as he is within the ambit of the IPC or Cr. P C which have given him powers. Besides, there are Supreme Court decisions on this. The Executive cannot interfere with the discretion of the Police. Supposing the Police have acted partially towards Siva Sena, how can I believe that the Chief Minister or other Minister has given instructions to the Police to act in a particular manner?

With these few words, I commend this motion for the acceptance of the House

SRI B. B. SAYANAK: How many hours have been allotted for the motion?

MADAM SPEAKER: We have to complete the discussion on this motion today itself.

‡ ಶ್ರೀ ಹೆಚ್. ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಸಭಾಧ್ಯಕ್ಷಿಣಿಯವರೇ, ಈಗ ಸಭೆಯ ಮುಂದೆ ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವ ನಿರ್ಣಯವನ್ನು ನಾನು ಸ್ವಾಗತಿಸುತ್ತೇನೆ. ಅದನ್ನು ಸ್ವಾಗತಿಸುವ ಕಾಲದಲ್ಲಿ ನಾನು ಕೊಟ್ಟಿರತಕ್ಕ ತಿದ್ದುಪಡಿಗಳನ್ನು ಮಾನ್ಯ ಮುಖ್ಯ ಮಂತ್ರಿಗಳು ಒಪ್ಪಿಕೊಳ್ಳಬೇಕೆಂದು ಹೇಳುತ್ತೇನೆ. ಹಾಗೆ ಹೇಳುವುದಕ್ಕೆ ಸಕಾರಣಗಳಿದ್ದರೆ, ಅದಕ್ಕೆ ಆಧಾರವಾಗಿ ಎಲ್ಲ ಮಾಹಿತಿಗಳನ್ನೂ ಒದಗಿಸಿದರೆ ಅವರು ನಾನು ಕೊಟ್ಟಿರ

ತಕ್ಕ ತಿದ್ದುಪಡಿಗಳನ್ನು ಅಂಗೀಕಾರ ಮಾಡಲಿಕ್ಕೆ ತಮ್ಮ ಪಕ್ಷದ ಎಲ್ಲ ಸದಸ್ಯರಿಗೆ ಸೂಚನೆಗಳನ್ನು ಕೊಡಬೇಕೆಂದು ತಮ್ಮ ಮೂಲಕ ಕಳಕಳಿಯ ಪ್ರಾರ್ಥನೆ ಮಾಡುತ್ತೇನೆ.

ಮಾನ್ಯ ಸಭಾಧ್ಯಕ್ಷಿಣಿಯವರೇ, ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ ಒಂದು ಮಾತನ್ನು ಸ್ಪಷ್ಟೀಕರಣ ಮಾಡಿದರು. ಅದು ಮೆಚ್ಚುವಂಥ ಮಾತು. ಗಡಿ ಸಮಸ್ಯೆ ಕೆಲವು ರಾಜಕೀಯ ಮುಖಂಡರುಗಳಿಂದ ಪ್ರಚೋದಿಸಲ್ಪಟ್ಟಿದೆ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಗಡಿ ಸಮಸ್ಯೆಯನ್ನು ಇಡೀ ಮಹಾರಾಷ್ಟ್ರದ ಎಲ್ಲ ಜನ ಸ್ವಾಗತ ಮಾಡುತ್ತಿಲ್ಲ, ಕೇವಲ ಕೆಲವು ಹಿತಾಸಕ್ತಿಗಳು, ರಾಜಕಾರಣಿಗಳು ಈ ಸಮಸ್ಯೆಯನ್ನು ಜೀವಂತವಾಗಿ ಉಳಿಸಲು ಪ್ರಯತ್ನ ಮಾಡುತ್ತಿದ್ದಾರೆ ಎನ್ನುವುದು ನೂರಕ್ಕೆ ನೂರರಷ್ಟು ಸತ್ಯ. ಇದಕ್ಕೆ ಮೂಲ ಕಾರಣವನ್ನು ನಾನು ಹೇಳಿದರೂ ಮಾನ್ಯ ಮುಖ್ಯ ಮಂತ್ರಿಗಳು ಅನ್ಯಥಾ ಭಾವನೆ ಮಾಡಿಕೊಳ್ಳಬಾರದು. ಗಡಿ ಸಮಸ್ಯೆಯನ್ನು ಕಳೆದ 17 ವರ್ಷಗಳಿಂದ ಅಂತಿಮ ವಾಗಿ ಕೇಂದ್ರ ಸರ್ಕಾರ ಪರಿಹರಿಸದೆ, ಆ ಜವಾಬ್ದಾರಿಯನ್ನು ನಿರ್ವಹಣೆ ಮಾಡ ದಿರುವುದರಿಂದ ಈ ಸಮಸ್ಯೆ ಜೀವಂತವಾಗಿ ಉಳಿಯುವುದಕ್ಕೆ ಕಾರಣವಾಗಿದೆ ಮತ್ತು ಎಲ್ಲ ಅನಾಹುತಕ್ಕೂ ಕೇಂದ್ರ ಸರ್ಕಾರವೇ ಹೊಣೆ. ನಾನು ಮಹಾಜನ್ ಕಮಿಷನ್ ವರದಿಯ ಬಗ್ಗೆಯಾಗಲೀ. ಗಡಿ ನಿಲುವಿನ ಬಗ್ಗೆಯಾಗಲೀ ನನ್ನ ಭಾಷಣ ದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಚ್ಛೆ ಪಡುವುದಿಲ್ಲ. ಆ ಸಂದರ್ಭ ಬಂದಾಗ ಮಾತನಾಡುತ್ತೇನೆ ಆದರೆ ಈ ಹೊತ್ತು ರಾಷ್ಟ್ರದಲ್ಲಿ ನಾವು ಭಾರತೀಯರು ಎಂದು ತಲೆಯೆತ್ತಿ ಬಾಳುವುದಕ್ಕೆ ಅವಕಾಶವಿಲ್ಲದಂಥ ಪರಿಸ್ಥಿತಿಯಾಗಿದೆ. ಪರಿಸ್ಥಿತಿ ಎಲ್ಲಿಗೆ ಹೋಗಿದೆಯೆಂದರೆ ಈ ಹೊತ್ತು ಕರ್ನಾಟಕ ರಾಜ್ಯದವರಿರಲಿ, ದಕ್ಷಿಣ ರಾಜ್ಯಗಳಲ್ಲಿರುವವರು ಯಾರೇ ಆಗಲಿ, ಬೊಂಬಾಯಿ ನಗರದಲ್ಲಿ ಸುರಕ್ಷಿತವಾಗಿ ಬಾಳಲಿಕ್ಕೆ ಸಾಧ್ಯವಿಲ್ಲ ಎನ್ನುವ ಮಟ್ಟಕ್ಕೆ ಹೋಗಿದ್ದೇವೆ. ಸಹೋದರ ಭಾವನೆ ಯಿಂದ ರಾಷ್ಟ್ರದ ಪ್ರತಿಯೊಬ್ಬ ನಾಗರಿಕ ರಾಷ್ಟ್ರದ ಯಾವುದೇ ಭಾಗದಲ್ಲಿ ಬಾಳುವುದಕ್ಕೆ ಅವಕಾಶವಿಲ್ಲದಂಥ ಪರಿಸ್ಥಿತಿಯನ್ನು ತಂದೊಡ್ಡಿಕೊಂಡಿದ್ದೇವೆ. ಇದಕ್ಕೆ ಕೇಂದ್ರದ ಅಲಕ್ಷ್ಯ ಮನೋಭಾವವೇ ಕಾರಣ ಎಂದು ಹೇಳಬೇಕಾಗಿದೆ. ಇನ್ನಾದರೂ ಇದಕ್ಕೆ ಒಂದು ಅಂತಿಮ ತೀರ್ಮಾನವನ್ನು ಕೊಟ್ಟರೆ ಬಹಳ ಒಳ್ಳೆ ಯದು. ಸುಮ್ಮನೆ ಕಾಲವನ್ನು ದೂಡುವುದಕ್ಕೆ ಬದಲು ಎಷ್ಟು ಜಾಗ್ರತೆ ಸಾಧ್ಯವೋ ಅಷ್ಟು ಜಾಗ್ರತೆ ಈ ವಿಚಾರದಲ್ಲಿ ಅಂತಿಮ ನಿರ್ಣಯ ತೆಗೆದುಕೊಳ್ಳು ವುದು ಒಳ್ಳೆಯದು. ಈ ದಿಸೆಯಲ್ಲಿ ಮುಖ್ಯಮಂತ್ರಿಗಳು ಕೂಡ ಕೆಲಸ ಮಾಡು ತ್ತಿದ್ದಾರೆ, ಇನ್ನೂ ಹೆಚ್ಚು ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆನ್ನುವ ಮಾತನ್ನು ಹೇಳುತ್ತೇನೆ. ಇದರಲ್ಲೆ ಪಕ್ಷ ರಾಜಕಾರಣವನ್ನು ಒಡ್ಡುವುದಕ್ಕೆ ಇಚ್ಛೆ ಪಡುವುದಿಲ್ಲ. ಮುಖ್ಯಮಂತ್ರಿಗಳು ಮಾತನಾಡುವಾಗ ಶ್ರೀ ಸಯನಕ್ ಅವರು ಪ್ರಧಾನ ಮಂತ್ರಿಗಳಿಗೆ ಹೇಳಿ ಎಂದರು. ಪ್ರಧಾನ ಮಂತ್ರಿಗಳು ದೊಡ್ಡವರಲ್ಲ.

(ಶ್ರೀ ಹೆಚ್. ಡಿ. ದೇವೇಗೌಡ)

ಪ್ರಧಾನ ಮಂತ್ರಿಗಳು ದೇಶದ ಜನರ ಇಂಗಿತವನ್ನು ಅರಿತು ನಡೆದುಕೊಳ್ಳುವುದು ಒಳ್ಳೆಯದು. ಪ್ರಧಾನ ಮಂತ್ರಿಗಳು ಒಂದು ಕಟ್ಟುಪಾಡಿಗೆ ಬಿದ್ದಿದ್ದಾರೆ. ಅದನ್ನು ಅವರು ಕಿತ್ತೊಗೆಯದೆ ಇದ್ದರೆ ಉಗ್ರವಾಗಿ ನಡೆದುಕೊಳ್ಳಬೇಕಾಗುತ್ತದೆ. ಕನ್ನಡ ಜನರ ಹಿತಾಸಕ್ತಿಗಳನ್ನು, ಕನ್ನಡ ನೆಲದ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವ ಕಾಲದಲ್ಲಿ ಪಕ್ಷ ರಾಜಕಾರಣ ಯಾರಿಗೂ ಬೇಕಾಗಿಲ್ಲ. ಪ್ರಧಾನ ಮಂತ್ರಿಗಳು ಕಟ್ಟುಪಾಡಿಗೆ ಬಿದ್ದಿರತಕ್ಕದ್ದು ಇದೆ. ಮಹಾಜನ್ ಕಮಿಷನ್ ಶಿಫಾರಸುಗಳನ್ನು ಅನುಷ್ಠಾನಕ್ಕೆ ತರುವುದರಲ್ಲಿ ಅವರು ವಿಫಲಗೊಂಡಿರತಕ್ಕ ಸಂದರ್ಭದಲ್ಲಿ ಕೇಂದ್ರ ಸರ್ಕಾರವೇ ಗಡಿ ವಿವಾದದ ಸಂಬಂಧದಲ್ಲಿ ನಡೆಯುತ್ತಿರುವ ಎಲ್ಲ ಅನಾಹುತಗಳಿಗೂ ಹೊಣೆಯನ್ನು ಹೊರಬೇಕಾಗಿದೆ. ಕೇಂದ್ರ ಸರಕಾರದ ನಂತರ ಶಿವಸೇನೆ ಬರುತ್ತದೆ.

ಮಾನ್ಯ ಸಭಾಧ್ಯಕ್ಷಿಣಿಯವರೇ, ಮಹಾರಾಷ್ಟ್ರದ ವಿಧಾನ ಪರಿಷತ್ತಿನ ಉಪ ಸಭಾಪತಿಯವರ ಅಪ್ಪನ ಆಸ್ತಿಯಲ್ಲ ಬೆಳಗಾಂ. ಸೌಜನ್ಯತೆಗೂ ಒಂದು ಮಿತಿ ಇದೆ. ಅವರು ಸೌಜನ್ಯದ ಪರಿಮಿತಿಯನ್ನು ಮೀರಿ ಅವರು ಯಾವ ಮಟ್ಟಕ್ಕೆ ಹೋಗಿದ್ದಾರೆಂದರೆ, ಅದರ ಎಲ್ಲೆಯನ್ನು ಮೀರಿ ಎಲ್ಲಿಯವರೆಗೆ ಹೋಗಿದ್ದಾರೆನ್ನುವುದಕ್ಕೆ ಹೇಳಬೇಕೆಂದರೆ, ಬೆಳಗಾಂ ಶ್ರೀಮಾನ್ ದೇವರಾಜಅರಸ್ ಅವರ ಅಪ್ಪನ ಆಸ್ತಿಯಲ್ಲ ಎಂದು ಹೇಳಿದ್ದಾರೆ. ಬಹುಶಃ ವಿಧಾನಪರಿಷತ್ತಿನ ಉಪಾಧ್ಯಕ್ಷರಾಗಿ ಅಂಥ ಮಾತನ್ನು ಆಡತಕ್ಕದ್ದರ ಔಚಿತ್ಯವನ್ನು ನಾನು ಪ್ರಶ್ನೆ ಮಾಡಬೇಕಾಗುತ್ತದೆ. ನಾನು ಗಂಭೀರವಾಗಿ ಒಂದು ಎಚ್ಚರಿಕೆಯನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಇಂಥ ಪ್ರಚೋದನೆಯ ಮಾತುಗಳಿಂದ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಿಲ್ಲ. ಮುಖ್ಯಮಂತ್ರಿಯವರನ್ನು ಏನಾದರೂ ಅಂದರೆ ಬಹುಶಃ ಕರ್ನಾಟಕದ ಜನತೆ ಸಹಿಸಿಕೊಳ್ಳುತ್ತದೆ ಎನ್ನುವುದಕ್ಕೆ ನಾನು ಸಿದ್ಧನಿಲ್ಲ. ಈ ಸಮಸ್ಯೆಯನ್ನು ಬಗೆಹರಿಸತಕ್ಕ ಕಾಲದಲ್ಲಿ ಒಂದು ಎಚ್ಚರಿಕೆಯನ್ನು ಕೊಡುವುದಕ್ಕೆ ಇಚ್ಛೆ ಪಡುತ್ತೇನೆ. ಬಹುಶಃ ಕನ್ನಡಿಗರ ಮೈಯಲ್ಲೇ ಕೊನೆಯ ರಕ್ತಕಣವಿರುವವರೆಗೂ ಎಲ್ಲ ರೀತಿಯ ಹೋರಾಟವನ್ನೂ ಒಕ್ಕೊರಲಿನಿಂದ ಮಾಡುವುದಕ್ಕೆ ಸಿದ್ಧರಾಗಿದ್ದೇವೆ ಎನ್ನುವುದನ್ನು ಮಹಾರಾಷ್ಟ್ರದ ಮುಖಂಡರುಗಳಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಈ ಸಮಸ್ಯೆ ಹೇಗೆ ಪ್ರಾರಂಭವಾಯಿತು ಎನ್ನುವುದಕ್ಕೆ ನವಂಬರ್ ತಿಂಗಳಲ್ಲಿ ರಾಜ್ಯೋತ್ಸವ ದಿನಾಚರಣೆ ಮಾಡುವುದಕ್ಕೆ ಪ್ರಯತ್ನಪಟ್ಟ ಮೇಲೆ ಗಲಾಟೆಯಾಗುವುದಕ್ಕೆ ಪ್ರಾರಂಭವಾಯಿತು ಎಂದು ಮುಖ್ಯ ಮಂತ್ರಿಗಳು ಹೇಳಿದರು. ಅದಲ್ಲ. ನಾನು ತಿಳಿದಿರುವುದರಲ್ಲಿ ಮಹಾರಾಷ್ಟ್ರದ ವಿಧಾನಸಭೆ ಪ್ರಾರಂಭವಾದ ದಿವಸದಿಂದಲೇ ಪ್ರಾರಂಭವಾಯಿತು. ಈ ಒಂದು ಘಟನೆಯ ಬುನಾಧಿ ಮಹಾರಾಷ್ಟ್ರದ ಮುಖ್ಯ ಮಂತ್ರಿಯವರನ್ನು ಘೇರಾವೋ ಮಾಡಿದರು.

ಅದರಿಂದ ಆಂಧ್ರ ಎರಡು ಭಾಗಗಳಾಯಿತು. ಈ ನಮ್ಮ ಸರ್ಕಾರದ ನಿಲುವನ್ನು ನಾನು ಒಪ್ಪುತ್ತೇನೆ. ಬೊಂಬಾಯಿ ಪಟ್ಟಣವನ್ನು ಮಹಾರಾಷ್ಟ್ರದವರೇ ಕಟ್ಟಿದ್ದಲ್ಲ. ದೇಶದ ನಾನಾ ಭಾಗಗಳ ಜನ ಬೊಂಬಾಯನ್ನು ಒಂದು ಪಟ್ಟಣವನ್ನಾಗಿ ಮಾಡಿದ್ದಾರೆ. ಅದರ ಪ್ರಶಸ್ತಿಯನ್ನು ಹೆಚ್ಚಿಸುವುದಕ್ಕೆ ಅವರು ಕಾರಣರಾಗಿದ್ದಾರೆ. ತಮಿಳುನಾಡಿನ ಜನ ಬೊಂಬಾಯಿನಲ್ಲಿದ್ದಾರೆ. ಗುಜರಾತಿನ ಜನ ಬೊಂಬಾಯಿನಲ್ಲಿದ್ದಾರೆ. ಕರ್ನಾಟಕ ಮತ್ತು ಕೇರಳದ ಜನ ಬೊಂಬಾಯಿನಲ್ಲಿದ್ದಾರೆ. ಇಡೀ ರಾಷ್ಟ್ರದ ನಾನಾಭಾಗದ ಜನ ಬೊಂಬಾಯಿನಲ್ಲಿ ನೆಲಸಿರುವಾಗ ಅಲ್ಲಿ ಶಿವಸೇನೆಯವರು ಈ ರೀತಿ ದುಷ್ಕೃತ್ಯಗಳನ್ನು ನಡೆಸಿದರೆ ಅದು ದೇಶದ ಹಿತದೃಷ್ಟಿಯಿಂದ ಬಹಳ ಅನಾನುಕೂಲವಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಈಗ ಮಾನ್ಯ ಸ್ನೇಹಿತರಾದ ಶ್ರೀಮಾನ್ ಸೈನಕ್ ಅವರು ಮಾತನಾಡುವಾಗ ಕರ್ನಾಟಕದಲ್ಲಿ ಮಹಾರಾಷ್ಟ್ರದವರಿಗೆ ಆದ ಕಿರುಕುಳದ ಬಗ್ಗೆ ಮಾತನಾಡಿದರೇ ಹೊರತು ಮಹಾರಾಷ್ಟ್ರದವರಿಂದ ಕನ್ನಡಿಗರಿಗೆ ಆದಂತಹ ಕಿರುಕುಳದ ಬಗ್ಗೆ ತೊಂದರೆಯ ಬಗ್ಗೆ ಸ್ವಲ್ಪವೂ ಹೇಳಲಿಲ್ಲ. ಶಿವಸೇನೆಯವರು ಮಾಡಿರತಕ್ಕ ಕೆಲಸ ಖಂಡನೀಯವಾದುದು. ಶ್ರೀಮಾನ್ ಸೈನಕ್ ಅವರು ಬೆಳಗಾಮಿನ ಪೋಲೀಸ್ ಡೆಪ್ಯುಟಿ ಕಮೀಷನರ್ ಗರುಡಾಚಾರ್ ಅವರ ಬಗ್ಗೆ ಮಾತನಾಡಿದಾರೆ. ಶ್ರೀಮಾನ್ ಗರುಡಾಚಾರ್ ಅವರು ಬೆಂಗಳೂರು ನಗರದಲ್ಲಿ 7—8 ವರ್ಷ ಕೆಲಸ ಮಾಡಿದ ಅನುಭವ ನಮಗೆ ಇದೆ. ಅವರು ಇಲ್ಲಿ ಇದ್ದಾಗ ಯಾವುದೇ ಪಕ್ಷವನ್ನು ವಹಿಸಿ ಕೆಲಸವನ್ನು ಮಾಡುತ್ತಿರಲಿಲ್ಲ. ಆದರೆ ಮಹಾರಾಷ್ಟ್ರ ಏಕೀಕರಣ ಸಮಿತಿಯ ಸದಸ್ಯರಾದ ಶ್ರೀಮಾನ್ ಸೈನಕ್ ಅವರು ಅವರ ಬಗ್ಗೆ ಹೇಳುತ್ತಿರುವುದು ಬಹಳ ಶೋಚನೀಯವಾದುದು. ಶಿವಸೇನೆಯವರಿಂದ ಕನ್ನಡಿಗರಿಗೆ ತೊಂದರೆ ಬಂದರೆ ಕನ್ನಡಿಗರು ಸುಮ್ಮನೆ ಇರುವುದಕ್ಕೆ ಆಗುವುದಿಲ್ಲ. ಗಾಜಿನ ಮನೆಯಲ್ಲಿ ವಾಸ ಮಾಡತಕ್ಕ ಮಹಾರಾಷ್ಟ್ರೀಯರು ಕನ್ನಡ ರಾಜ್ಯದಲ್ಲಿ ದಾಂಧಲೆ ಮಾಡುವುದಾದರೆ ಅದು ತಿರುಗುಬಾಣವಾಗಿ ಕಷ್ಟವಾಗುತ್ತದೆ ಎಂದು ನಾನು ಎಂ. ಇ. ಎಸ್. ಸದಸ್ಯರಿಗೆ ಎಚ್ಚರಿಕೆಯನ್ನು ಕೊಡುತ್ತೇನೆ. ಬೆಂಗಳೂರು ನಗರಕ್ಕೆ ಕೂಡ ಬೊಂಬಾಯಿನ ಹಾಗೆ ಅನೇಕ ರಾಜ್ಯಗಳಿಂದ ಜನ ಬಂದು ವಾಸವಾಗಿದ್ದಾರೆ. ಬೆಂಗಳೂರಿನಲ್ಲಿ ತಮಿಳುನಾಡಿನವರು ಇದ್ದಾರೆ. ಆಂಧ್ರದವರು ಇದ್ದಾರೆ. ಕೇರಳದವರು ಇದ್ದಾರೆ. ಆದರೆ ಬೆಂಗಳೂರಿನಲ್ಲಿ ಕನ್ನಡಿಗರಿಗೆ ಆಗಿರುವಷ್ಟು ಅನ್ಯಾಯ ಬೇರೆ ಎಲ್ಲೂ ಆಗಿಲ್ಲ. ನಮ್ಮ ರಾಜ್ಯದಲ್ಲಿ ಸ್ಥಾಪನೆ ಮಾಡಿರತಕ್ಕ ಕೇಂದ್ರ ಸರ್ಕಾರದ ಕಾರ್ಖಾನೆಗಳಲ್ಲಿ ತಮಿಳುನಾಡು, ಆಂಧ್ರ ಮುಂತಾದ ಕಡೆಗಳಿಂದ ಬಂದವರಿಗೆ ಅನೇಕರಿಗೆ ಉದ್ಯೋಗವನ್ನು ಕೊಟ್ಟಿದ್ದಾರೆ. ಆದರೆ ನಮ್ಮವರು ಸೌಜನ್ಯದಿಂದ ಅದನ್ನು ಸಹಿಸಿಕೊಂಡು ಬಂದಿದ್ದಾರೆ. ಶಿವಸೇನೆಯವರ ಹಾವಳಿ ಹೆಚ್ಚಾದರೆ ಕನ್ನಡಿಗರಿಗೆ ಸುಮ್ಮನೆ ಇರುವುದಕ್ಕೆ ಆಗುವುದಿಲ್ಲ ಎಂದು ನಾನು ಸ್ಪಷ್ಟವಾಗಿ ಹೇಳ

ಬೇಕಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡುತ್ತಾ ಇದಕ್ಕೆ ಇರತಕ್ಕ ಹಿನ್ನೆಲೆಯನ್ನು ಪೂರ್ಣವಾಗಿ ಕೊಟ್ಟಿದ್ದಾರೆ ನಾನು ಸ್ಪಷ್ಟವಾಗಿ ಹೇಳುವುದಾದರೆ ಇದು ಮಹಾರಾಷ್ಟ್ರದ ಜನತೆಯ ಬೆಂಬಲದಿಂದ ಆಗಿರತಕ್ಕದ್ದಲ್ಲ ಎಂದು ಜನಗಳ ಅಭಿಮತ ಇದೆ. ಕೆಲವು ನಾಯಕರು ತಮ್ಮ ನಾಯಕತ್ವದ ಸ್ಥಾನದ ಉಳಿವಿಗೋಸ್ಕರ ಇದನ್ನು ಈ ಒಂದು ಪರಿಸ್ಥಿತಿಗೆ ತೆಗೆದುಕೊಂಡು ಬಂದಿದ್ದಾರೆ. ಈ ಪರಿಸ್ಥಿತಿಯನ್ನು ಬಹಳ ದೂರ ತೆಗೆದುಕೊಂಡು ಹೋಗುವುದು ಬಹಳ ಕಷ್ಟ ಎಂದು ಮಹಾರಾಷ್ಟ್ರದವರಿಗೆ ಹೇಳಬೇಕಾಗುತ್ತದೆ. ಈ ಶಿವಸೇನೆ ಸರ್ಕಾರದ ಒಂದು ಬೆಂಬಲ ಇರತಕ್ಕ ಸೃಷ್ಟಿ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಶಿವಸೇನೆಯ ಅಕೃತ್ಯಗಳಿಂದ ಇಡೀ ರಾಷ್ಟ್ರಕ್ಕೇ ತೊಂದರೆಯಾಗುತ್ತದೆ. ಕೇಂದ್ರ ಸರ್ಕಾರದವರು ಈ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳದಿದ್ದರೆ ಅದರ ಪರಿಣಾಮ ಇಡೀ ರಾಷ್ಟ್ರದ ಮೇಲೆ ಉಂಟಾಗುತ್ತದೆ. ಅನೇಕ ಕಷ್ಟಸುಖಗಳು ಈ ದೇಶದಲ್ಲಿ ಉಂಟಾಗುತ್ತವೆ ಎಂದು ನಾನು ಹೇಳುತ್ತೇನೆ. ಒಂದು ವಿಚಾರವನ್ನು ಕೆಲವರು ಹೇಳುತ್ತಿದ್ದಾರೆ. ಅದೇನೆಂದರೆ ಮಹಾಜನ್ ಕಮಿಷನ್ನಿನ ರಿಪೋರ್ಟ್ ಮಹಾರಾಷ್ಟ್ರದವರಿಗೆ ಬೇಡವಿದ್ದರೆ ನಮಗೂ ಬೇಡ ಹಿಂದೆ ಇದ್ದ ಸ್ಥಿತಿಯಲ್ಲಿಯೇ ಇರೋಣ ಎನ್ನತಕ್ಕಂಥ ವಾದ ಕೆಲವು ಕಡೆ ಇದೆ ಆದರೆ ಗಡಿ ಬಗ್ಗೆ ಸ್ವಲ್ಪ ವಿಚಾರಗಳನ್ನು ತಿಳಿದುಕೊಂಡಿರತಕ್ಕವರು ಹೇಳುವ ಪ್ರಕಾರ ನಮ್ಮ ನಿಲುವಿಗೆ ಸ್ವಲ್ಪ ತೊಂದರೆಯಾಗುತ್ತದೆ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಸ್ಟೇಟಸ್ ಕೋ ಮೆಂಟೇನ್ ಮಾಡುವುದಾದರೆ ಮಹಾರಾಷ್ಟ್ರದವರಿಗೆ ಅನುಕೂಲ ಮಾಡಿ ಕೊಟ್ಟ ಹಾಗಾಗುತದೆ. ಮಹಾಜನ್ ಕಮಿಷನ್ ರಿಪೋರ್ಟ್ ಮೂಲೆಗೆ ಹೋಯಿತು. ಪುನಃ ಈ ಗಡಿ ಸಮಸ್ಯೆಯನ್ನು ಬೇರೆ ರೀತಿಯಲ್ಲಿ ತೆಗೆದುಕೊಂಡು ಬರುವುದಕ್ಕೆ ಅನುಕೂಲವಾಗುತ್ತದೆ. ಸ್ಟೇಟಸ್‌ಕೋ ಮೇಂಟೇನ್ ಮಾಡುವುದು ಮಹಾರಾಷ್ಟ್ರದವರ ಕೈ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಸ್ಟಾಟಸ್ಕೂ ತೆಗೆದುಕೊಂಡು ಬಂದರೆ ನಮ್ಮ ಕಾಸರಗೋಡಿನ ಪ್ರಶ್ನೆಯೂ ಹೋಗುತ್ತದೆ ಮತ್ತು ಮಹಾಜನ್ ವರದಿಯೂ ಮೂಲೆಗೆ ಹೋಗುತ್ತದೆ. ಆದ್ದರಿಂದ ಸ್ಟಾಟಸ್ಕೋ ಇಟ್ಟರೆ ಮಹಾರಾಷ್ಟ್ರೀಯರಿಗೆ ಅನುಕೂಲವಾಗುವ ರೀತಿಯಲ್ಲಿ ಮಾಡಬಾರದೆಂಬ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ.

ಇನ್ನು ಅನೇಕ ಸಂದರ್ಭಗಳಲ್ಲಿ ಮಹಾರಾಷ್ಟ್ರದಲ್ಲಿರತಕ್ಕಂತಹ ಕನ್ನಡಿಗರಿಗೆ ಅಲ್ಲಿ ಬಹಳ ಕಿರುಕುಳವನ್ನು ಕೊಡುತ್ತಿದ್ದಾರೆ. ಮಹಾರಾಷ್ಟ್ರದಲ್ಲಿ ಇರತಕ್ಕಂತಹ ಕನ್ನಡಿಗರಿಗೆ ಆಫೀಸುಗಳಲ್ಲಿ ಟರ್ಮಿನೇಶನ್ ನೋಟೀಸನ್ನು ಸಹ ಕೊಡುತ್ತಿದ್ದಾರೆಂದು ನನಗೆ ತಿಳಿದು ಬಂದಿದೆ. ಈ ರೀತಿ ಆಗದ ಹಾಗೆ ನೋಡಿಕೊಳ್ಳಬೇಕೆಂದು ಮಹಾರಾಷ್ಟ್ರದವರಿಗೆ ತಿಳಿಸಬೇಕು. ಇವತ್ತು ಮಹಾರಾಷ್ಟ್ರದಲ್ಲಿ ಒಂದೂ ದೇಶವು ಒಂದು ಪ್ರಜಾಪ್ರಭುತ್ವ ರಾಷ್ಟ್ರವಾಗಿದೆ ಎಂಬುದನ್ನು ಮರೆತು, ಹಿಂದಿನ ಶಿವಾಜಿ ಕಾಲದ ರಾಜ್ಯವಾಗಿಯೇ ಉಳಿದಿದೆ ಎಂದು ತಿಳಿದುಕೊಂಡು ಹಾಗೆ ಕಾಣುತ್ತದೆ.

(ಶ್ರೀ ಟಿ. ಆರ್ ಶಾಮಣ್ಣ)

ಆದ್ದರಿಂದ ಇದನ್ನು ಮುಂದುವರಿಸಿಕೊಂಡು ಹೋಗದ ಹಾಗೆ ನಾವು ನೋಡಿಕೊಳ್ಳಬೇಕಾಗಿದೆ. ನಮ್ಮ ಮುಖ್ಯ ಮಂತ್ರಿಯವರು ಇವತ್ತು ಒಂದು ಸ್ಪಷ್ಟವಾದ ನಿಲುವನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ರಾಷ್ಟ್ರದ ಹಿತದೃಷ್ಟಿಯಿಂದ ನಮ್ಮ ರಾಜ್ಯದ ಜನತೆಗೆ ಅನ್ಯಾಯವಾಗದ ಹಾಗೆ ನೋಡಿಕೊಳ್ಳುತ್ತಾರೆಂದು ನಾನಾದರೂ ಭಾವಿಸಿದ್ದೇನೆ. ಇವತ್ತು ಏನೊಂದು ಅವರು ನಮ್ಮ ಕನ್ನಡ ಜನತೆಯ ಹಿತದೃಷ್ಟಿಯಿಂದ ಹೋರಾಟ ಮಾಡಿ ಕೆಲಸ ಮಾಡುತ್ತೇವೆ ಎಂದು ಹೇಳಿದರೋ, ಅದು ಕೇವಲ ಬಾಯಿ ಮಾತಾಗಿ ಉಳಿಯದೆ ಅದನ್ನು ಕಾರ್ಯಗತ ಮಾಡುವುದಕ್ಕೆ ಅವರು ಸರ್ವ ಪ್ರಯತ್ನ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ಕೊನೆಯದಾಗಿ ಶಿವಸೇನೆಯ ಧಾಳಿ ಮತ್ತು ಗೂಂಡಾಗಿರಿ ನಿಲ್ಲದೆ ಹೋದರೆ ರಾಷ್ಟ್ರದಲ್ಲಿಯೇ ಒಂದು ದೊಡ್ಡ ಅಂದೋಲನ ನಡೆಯುವ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಯವರು ಪ್ರಧಾನ ಮಂತ್ರಿಯವರಲ್ಲಿ ಮತ್ತು ಕೇಂದ್ರದ ನಾಯಕರಲ್ಲಿ ಮೈಸೂರು ಜನತೆಯ ಹಿತದೃಷ್ಟಿಯಿಂದ ಮತ್ತು ಕನ್ನಡಿಗರ ಹಿತರಕ್ಷಣೆಯನ್ನು ಮಾಡುವ ಕಾರ್ಯದಲ್ಲಿ ಆದಷ್ಟು ಬೇಗನೆ ಸೂಕ್ತ ಕ್ರಮ ತೆಗೆದುಕೊಂಡು ಹೋರಾಟ ಮಾಡುತ್ತಾರೆಂದು ತಿಳಿದು ಮಾನ್ಯ ಮುಖ್ಯ ಮಂತ್ರಿಯವರು ಮಂಡಿಸಿರತಕ್ಕಂತಹ ನಿರ್ಣಯಕ್ಕೆ ಬೆಂಬಲ ಮತ್ತು ನಮ್ಮ ಪೂರ್ಣವಾದ ಸಹಕಾರ ಇರುತ್ತದೆ ಮತ್ತು ಇದರಲ್ಲಿ ಧೈರ್ಯವಾಗಿ ಅವರು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

‡ SRI SUBASH ASTURE :—Mr. Deputy Speaker, Sir, while supporting the motion moved by the Hon. Chief Minister, I would like to say a few words regarding the Mahajan Commission Report and the atrocities committed by the Maharashtrians on the Kannada speaking people in different parts of Maharashtra and Bombay City.

First of all, the Maharashtrians must know that Bombay City is not built within these 18 years alone; it has got its own long history. It is a cosmopolitan city built by the people from all over India irrespective of their language and culture. Today, if perchance Bombay City is the capital of Maharashtra, the so called Shiv Sainiks should not think that it is their birth right only

to stay there and that all other people, especially the lingusitic minorities have no such rights at all. When I minutely observe the activities of these Shiv Sainiks, I remember the historic Pindaries who were there during the Maharashtrian regime about 300 years ago. They are actually repeating the activities of those pindaries who were specially brought up by the then regime to loot the area where the Maharashtra army conquered. The pindaries were famous and were nourished by the then Government to loot the people and give a share of it to the Chieftains or the rulers. These Shiv Sainiks are actually following the footsteps of these Pindaries. It is shame that they have adopted this mean method to loot and harass the linguistic minorities in Bombay City and other parts of Maharashtra. The Hon. member Sri Sayanak was very vehement about the killing of two persons at Athani, but he has forgotten under what circumstances that happened. When the people were going in a procession to register their protest against the atrocities committed in Kolhapur and elsewhere, an excise contractor s son shot one person with a revolver. Then the mob was enraged and the incident took place.

SRI P. A. PAWASHE.—In self protection he did it

SRI SUBASH ASTURE.—The Hon. Member is so very particular about a minor incident at Athani but he has not expressed any sympathy for the many people who have been killed in Bombay and for the looting of many houses there.

SRI B. B. SAYANAK:—They have taken two lives at Athani and let him not defend like that.

SRI SUBASH ASTURE:—I come from the border area and I know what the Hon. Member and his friends are doing there.

Coming to the Mahajan Commission Report, when I was a student in the Intermediate class, we have opposed

(SRI SUBASH ASTURE)

the appointment of the Mahajan Commission and I remember very well that for opposing the appointment of this commission, I was imprisoned for three days. In spite of opposition, the Central Government and the Maharashtra Government wanted to appoint a commission at the eleventh hour to give a finality to this long-pending issue. The then Chief Minister Sri Nijalingappa accepted it and the Mahajan Commission was appointed. When the report of that Commission was published, the very Maharashtrians who were so vehemently urging the appointment of the Commission went back on their words and refused to accept the verdict of the commission when they saw they had no chance of getting Belgaum City which was the bone of contention.

MR. DEPUTY SPEAKER —Just a casual reference may be all right instead of going into the details.

SRI SUBASH ASHTURE :—The people in my area are concerned that once the Mahajan Commission Report is not accepted, naturally the issue will be reopened and there may be a chance of another commission being appointed. I thank the Chief Minister because he has very clearly stated that there is no scope for the appointment of such a commission.

SRI KAGODU THIMMAPPA :—He has not made that statement.

SRI SUBASH ASHTURE :—After the statement of the Chief Minister there is no scope for such misgivings and therefore our people in the border area need not be bothered about it.

With these words I thank the Chair and conclude my speech.

†ಶ್ರೀ ಸಿ. ಬೈರೇಗೌಡ (ವೇಮಗಲ್): ಸನ್ಮಾನ್ಯ ಉಪಾಧ್ಯಕ್ಷರೇ, ಈ ದಿನ ಈ ಸಭೆಯ ಮುಂದೆ ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕದಲ್ಲಿ ಮತ್ತು ಮಹಾರಾಷ್ಟ್ರದಲ್ಲಿ ನಡೆದಂಥ ಕೆಲವು ಘಟನೆಗಳ ಬಗ್ಗೆ ಒಂದು ನಿರ್ಣಯವನ್ನು ತಂದಿದ್ದಾರೆ, ಅದನ್ನು ನಾನು ಸ್ವಾಗತಿಸುತ್ತೇನೆ. ಆ ರೀತಿ ಸ್ವಾಗತಿಸುತ್ತಾ ಈಗ ಈ ಒಂದು ನಿರ್ಣಯವನ್ನು ಯಾವ ಒಂದು ಪರಿಸ್ಥಿತಿಯಲ್ಲಿ ತರುವಂಥಾದ್ದಾಗಿದೆಯೆಂಬುದನ್ನು ಈಗ ನಾನು ಹೇಳಬೇಕಾಗಿದೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಕುಳಿತಿರತಕ್ಕ ಜಾಗದಲ್ಲಿ, ಕಾಂಗ್ರೆಸ್ ಪಕ್ಷ ಬಿಟ್ಟು ಕಾಂಗ್ರೆಸ್ ಪಕ್ಷದ ಮುಖ್ಯ ಮಂತ್ರಿಗಳು ಬಿಟ್ಟು ಮತ್ತೆ ಯಾರೂ ಕೂಡ ಕೂತಿರಲಿಲ್ಲ. ಅದೇ ರೀತಿ ಮಹಾರಾಷ್ಟ್ರದಲ್ಲಿಯೂ ಕೂಡ ಮಹಾರಾಷ್ಟ್ರ ಮುಖ್ಯ ಮಂತ್ರಿಗಳು ಕೂತುಕೊಳ್ಳುತ್ತಾ ಇರತಕ್ಕ ಜಾಗದಲ್ಲಿ ಅಲ್ಲಿರತಕ್ಕ ಕಾಂಗ್ರೆಸ್ ಪಕ್ಷದ ಕಡೆಯವರನ್ನು ಬಿಟ್ಟು ಮತ್ತೆ ಯಾರು ಕುಳಿತುಕೊಳುತ್ತಿರಲಿಲ್ಲ. ಅದೇ ರೀತಿಯಲ್ಲಿ 1947ನೇ ಇಸವಿಯಿಂದ ಈ ದಿನದವರೆಗೆ ಕೇಂದ್ರ ಸರ್ಕಾರದಲ್ಲಿಯೂ ಕೂಡ ಕಾಂಗ್ರೆಸ್ ಪಕ್ಷದ ಪ್ರಧಾನ ಮಂತ್ರಿಗಳು ಬಿಟ್ಟು ಮತ್ತೆ ಯಾರೂ ಕೂತಿರಲಿಲ್ಲ. ಇವತ್ತಿನ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಮಹಾರಾಷ್ಟ್ರ ಸರ್ಕಾರದಲ್ಲಿ ನಡೆದಿರತಕ್ಕ ಘಟನೆಗಳ ಬಗ್ಗೆ ನ್ಯಾಯ ವಿಚಾರಣೆಯಾಗಬೇಕು, ಅಷ್ಟೇ ಅಲ್ಲದೆ ಅಲ್ಲಿ ನೊಂದವರಿಗೆ ಪರಿಹಾರ ಕೊಡಬೇಕೆಂದು ಹೇಳುತ್ತಾ ಇದ್ದಾರೆ. ಇದರ ಬಗ್ಗೆ ನನ್ನ ಅಭಿಪ್ರಾಯದಲ್ಲಿರುವ ಒಂದು ಮಾತನ್ನು ಹೇಳುವುದಾದರೆ, ಇದು ಒಂದು ನಾಟಕ. ಇಂತಹ ಒಂದು ನಾಟಕಕ್ಕೂ ಕೂಡ ಕೆಲವು ಸಂದರ್ಭಗಳಲ್ಲಿ ನಮ್ಮ ಒಂದು ಬೆಂಬಲವನ್ನು ಕೊಡಬೇಕಾಗುತ್ತದೆ. ಆದರೆ ಇಲ್ಲಿ ಮುಖ್ಯವಾಗಿ ನಡೆದಿರತಕ್ಕಂಥಾದ್ದು ಏನೆಂದರೆ, ಮಹಾರಾಷ್ಟ್ರದಲ್ಲಿ ಪೆಡಂಭೂತವಾಗಿ ಬೆಳೆದಿರತಕ್ಕ ಶಿವಸೇನೆಯವರ ದೌರ್ಜನ್ಯ. ಈ ಶಿವಸೇನೆ ಯಾರ ಶಿಶು ಎಂದರೆ, ಇದು ಮಹಾರಾಷ್ಟ್ರದಲ್ಲಿ ಮಾನ್ಯ ಶ್ರೀ ಚವಾಣರು ಗೃಹಮಂತ್ರಿಯಾಗಿದ್ದಾಗ ಅವರ ಒಂದು ಅನೈತಿಕ ಸಂಬಂಧವಾಗಿ ಜನಿಸಿದಂಥ ಕೂಸು. ಆ ಒಂದು ಶಿವಸೇನೆಯೇ ಇವತ್ತು ಬೆಳೆದು ಬಂದಿದೆ. ಸಾಕಷ್ಟು ಸಮಸ್ಯೆಗಳನ್ನು ಕಾಂಗ್ರೆಸ್ ಪಕ್ಷ 1947ನೇ ಇಸವಿಯಿಂದ ಎದುರಿಸಬೇಕಾಗಿ ಬಂದಿದ್ದರೂ ಸಮಯ ಬಂದಾಗ ಹೆಚ್ಚು ಶಕ್ತಿಯನ್ನು ಉಪಯೋಗಿಸದೇ ಇರುವ ಸಂದರ್ಭವೂ ಉಂಟು. ಸಾದಕವಾಗದೇ ಇರುವ ಸಂದರ್ಭವೂ ಉಂಟು. ಮೊನ್ನೆ ಬೊಂಬಾಯಿನಲ್ಲಿ ಗಲಭೆಗಳು ನಡೆದಾಗ, ಎಡಶಕ್ತಿಗಳ ಬೆಂಬಲವಿತ್ತು. ಮತ್ತು ಅಲ್ಲಿ ಚುನಾವಣೆಗಳಲ್ಲಿ ಎಡಶಕ್ತಿಗಳ ಬೆಂಬಲದಿಂದ ಮತ್ತು ಭಾರತ ಕಮ್ಯೂನಿಸ್ಟ್ ಪಕ್ಷದ ಬೆಂಬಲದಿಂದಲೇ ಎಡಶಕ್ತಿಗಳಿಗೆ ಜಯ ಆಗಿರಬಹುದು.

ಶ್ರೀ ಡಿ. ದೇವರಾಜ ಅರಸ್:- ಎಡಪಕ್ಷಕ್ಕೆ ಜಯ ಏಕೆಂದರೆ ಸೌತ್ ಇಂಡಿಯನ್ ಅವರು ಓಟು ಮಾಡಲಿಲ್ಲ. ಇಲ್ಲದೇ ಹೋದರೆ ಅವರು ಎಲ್ಲಿ ಗೆಲ್ಲುತ್ತಿದ್ದರು ?

ಶ್ರೀ ಸಿ. ಬೈರೇಗೌಡ:- ಅಲ್ಲಿ ಕಾಂಗ್ರೆಸ್ ಪಕ್ಷ ಬಿಟ್ಟು ಬೇರೆ ಪಕ್ಷವಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಅಲ್ಲಿನ ಚುನಾವಣೆಯಲ್ಲಿ ಶಿವಸೇನೆಯವರ ಸಹಕಾರ ಬೇಕಾಗಿತ್ತು. ಅವರಿಂದ ಓಟು ಅವರಿಗೆ ಬೇಕಾಗಿತ್ತು. ಸಂದರ್ಭ ಸಾಧಕವಾದ ನಿಲುವನ್ನು ತಾಳದೇ ಇದ್ದುದರಿಂದಲೇ ಅವರು ಸೋತಿದ್ದಾರೆ. ಅಲ್ಲಿ ಎಡಶಕ್ತಿಗಳು ಪಡೆದಿರುವ ಜಯವೇ ಈಗ ಎತ್ತಿ ತೋರಿಸುತ್ತಿದೆ. ಅಂತಹ ಸಂದರ್ಭ ಸಾಧಕ ವಾತಾವರಣದಿಂದ ಇಂತಹ ಒಂದು ಶಕ್ತಿಗಳನ್ನು ಬೆಳೆಸಿಕೊಂಡು ಹೋಗುವ ವಿಚಾರವನ್ನು ಅವರು ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರದವರೂ ಕೂಡ ನೇರವಾಗಿ ಒಂದು ಕ್ರಮವನ್ನು ತೆಗೆದುಕೊಳ್ಳುವ ಒಂದು ಗುರುತರವಾದ ಜವಾಬ್ದಾರಿಯನ್ನು ಹೊಂದಿದ್ದರೂ ಸುಮಾರು 17 ವರ್ಷಗಳಿಂದ ಈ ಒಂದು ಸಮಸ್ಯೆಯನ್ನು ಬಗೆಹರಿಸಲು ಈ ದೇಶದ ಆಡಳಿತವನ್ನು ಆಳುತ್ತಾ ಇರತಕ್ಕ ಕಾಂಗ್ರೆಸ್ ಪಕ್ಷಕ್ಕೆ ಬಿಡುವಿಲ್ಲ, ಆಲೋಚನೆ ಇಲ್ಲ, ಇನ್ನೂ ಸಾಧ್ಯವಾಗಿಲ್ಲ. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಈಗ ಇರತಕ್ಕ ಮಹಾಜನ ಕಮಿಷನ್ ವರದಿ, ಅದಕ್ಕೂ ಮುಂಚೆ ಫಜಲಾಲಿ ಕಮಿಷನ್ ವರದಿ, ಅದಕ್ಕೂ ಮುಂಚೆ ಪಾಠಸ್ಕರ್ ಫಾರ್ಮುಲ ಇಂತಹ ಯಾವುದಾದರೂ ಒಂದು ವರದಿಯ ಆಧಾರದ ಮೇಲೆ ಒಂದು ತೀರ್ಮಾನ ಮಾಡಬಹುದಾಗಿತ್ತು. ಸಂದರ್ಭ ಬಂದಾಗ ಇವುಗಳಲ್ಲಿ ಯಾವುದಾದರೂ ಒಂದು ವೈಜ್ಞಾನಿಕವಾದ ಒಂದು ಆಧಾರದ ಮೇಲೆ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಕೇಂದ್ರ ಸರ್ಕಾರದವರು ಇದುವರೆಗೆ ಪ್ರಯತ್ನಪಟ್ಟಿಲ್ಲ. ಒಟ್ಟಿನಲ್ಲಿ ಈ ದೇಶದಲ್ಲಿ ಎಡಶಕ್ತಿಗಳೇನಾದರೂ ಬೆಳೆದು ಬಂದರೆ ನಿಜವಾಗಿಯೂ ಅದರಿಂದ ದೇಶಕ್ಕೆ ಆಪತ್ತು ಉಂಟು. ಅಂತಹ ಒಂದು ಶಕ್ತಿಯನ್ನು ಉಪಯೋಗಿಸುವ ತಂತ್ರ ಈಗ ಅಲ್ಲಿ ನಡೆಯುತ್ತಿದೆ. ನಾನು ಮೊದಲೇ ಹೇಳಿದ ಹಾಗೆ ಕೇಂದ್ರ ಸರ್ಕಾರದವರು ಯಾವಾಗಲೋ ಈ ಒಂದು ಸಮಸ್ಯೆಯನ್ನು ಬಗೆಹರಿಸಬಹುದಾಗಿತ್ತು. ಅದನ್ನು ಇದುವರೆಗೆ ಅವರು ಮಾಡಲಿಲ್ಲ. ಈ ಶಿವಸೇನೆ ಫ್ಯಾಸಿಸ್ಟ್ ಶಕ್ತಿಗಳಾಗಿವೆ. ಈ ದೇಶದಲ್ಲಿ ಅವರದು ಇನ್ನೂ ಇತರ ಸಮಸ್ಯೆಗಳೂ ಬಹಳವಾಗಿವೆ. ಆದರೆ ಇವರು ಈ ಒಂದು ಸಮಸ್ಯೆಯನ್ನು ಬಗೆಹರಿಸುತ್ತಾರೆಂಬ ನಂಬಿಕೆಯೂ ಸಹ ನನಗಿಲ್ಲ. ಕಾರಣ ಮಲಗಿ ನಿದ್ರೆ ಮಾಡುವ ಶಕ್ತಿಗಳನ್ನು ಎಬ್ಬಿಸಿ ಅವರಿಂದ ಹೆಚ್ಚು ಪ್ರಯೋಜನವನ್ನು ಪಡೆಯಬೇಕು. ಈ ದೇಶದಲ್ಲಿ ಆರ್ಥಿಕ ಮುಗ್ಗಟ್ಟು ಬಹಳ ಭೀಕರವಾಗಿ ನಡೆಯುತ್ತಿದೆ. ಕಾರ್ಮಿಕವರ್ಗ ಮತ್ತು ಶ್ರಮಜೀವಿ ವರ್ಗಗಳು ಒಗ್ಗಟ್ಟಾಗುತ್ತಿರುವ ಪರಿಸ್ಥಿತಿಯಲ್ಲಿ ಈ ದೇಶದ ಜನರ ಮನೋಭಾವವನ್ನು ಬೇರೆ ಕಡೆ ತಿರುಗಿಸುವುದಕ್ಕೆ ಇಂತಹ ಒಂದು ಕುತಂತ್ರಗಳು ಆಡಳಿತ ಪಕ್ಷದವರಿಂದ ಈ ದೇಶದಲ್ಲಿ ನಡೆಯುತ್ತಿದೆ. ಅವರು ಅದಕ್ಕೆ ಬೇಕಾದಂಥ ಸಾಧನೋಪಾಯಗಳನ್ನು ನಡೆಸುತ್ತಿದ್ದಾರೆ. ಪುನಃ ಅವರು ಒಗ್ಗಟ್ಟಾಗಬಾರದೆಂದು ಅನೇಕ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಈ ದೇಶದಲ್ಲಿ

ಆರ್ಥಿಕ ಮುಗ್ಗಟ್ಟನ್ನು ಬಗೆಹರಿಸುವುದಕ್ಕೆ, ಇವರಿಗೆ ಇಷ್ಟವಿಲ್ಲ, ಸಾಧ್ಯವಿಲ್ಲ. ಇದರ ಬಗ್ಗೆ ಮಾಡಬೇಕಾದ ಕುತಂತ್ರಗಳನ್ನು ಶಿವಸೇನೆಯ ಮೂಲಕ ಮಾಡಲು ಪ್ರಯತ್ನ ಮಾಡುತ್ತಿದ್ದಾರೆ ಈ ದೇಶದಲ್ಲಿ ಪ್ರಧಾನ ಮಂತ್ರಿಗಳು ಮಹಿಳೆಯಾಗಿದ್ದಾರೆ. ಈ ದೇಶದಲ್ಲಿ ಪ್ರಧಾನ ಮಂತ್ರಿಗಳು ಮಹಿಳೆಯಾಗಿದ್ದಾರೆ. ಅಂದ ಮೇಲೆ ಅನೇಕ ಮಹಿಳೆಯರು ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ಮೆರವಣಿಗೆಯಲ್ಲಿ ಬೆತ್ತಲೆಯಲ್ಲಿ ಬಂದರೆಂದರೆ ಇದಕ್ಕಿಂತ ಹೀನಾಯವಾದ ದೃಶ್ಯ ಮತ್ತು ಅಂಥಾದ್ದನ್ನು ಕಾಣುವಂಥ ದೌರ್ಭಾಗ್ಯ ನಮ್ಮ ಜನಗಳಿಗೆ ಒದಗಿದುದು ಬಹಳ ದುರದೃಷ್ಟಕರ: ಅನೀತಿಯುತವಾದದೆಂದು ನಾನು ಹೇಳಬೇಕಾಗಿದೆ. ಇದು ಎಂತಹ ದೌರ್ಭಾಗ್ಯವೆಂಬುದನ್ನು ನಾವೆಲ್ಲರೂ ಯೋಚನೆ ಮಾಡಬೇಕಾಗಿದೆ. ಮಾನ್ಯ ಶ್ರೀ ದೇವೇಗೌಡರೂ ಕೂಡ ಈ ಒಂದು ನಿರ್ಣಯದ ಬಗ್ಗೆ ಒಂದು ತಿದ್ದುಪಡಿಯನ್ನು ಕಳುಹಿಸಿದ್ದಾರೆ ಅದಕ್ಕೂ ಕೂಡ ನಾನು ಸ್ವಾಗತ ಮಾಡುತ್ತೇನೆ. ಕಾರಣವೇನೆಂದರೆ, ಮಾನ್ಯ ಮುಖ್ಯಮಂತ್ರಿಗಳು ಅದನ್ನು ನೇರವಾಗಿ ಹೇಳುವುದು ಬೇಡ, ಪರೋಕ್ಷವಾಗಿ ಹೇಳೋಣವೆಂದು ತಿಳಿಸಿದರು. ಆದರೆ ನಡೆದಿರುವ ಕೃತ್ಯಗಳು ನಿಜವಾಗಿರುವಾಗ, ಅವರ ಮುಖಕ್ಕೆ ನೇರವಾಗಿ ಹೇಳುವುದು ಎಲ್ಲರ ಜವಾಬ್ದಾರಿಯುತ ಕರ್ತವ್ಯವಾಗಿರಬೇಕು. ಅಂತಹ ಒಂದು ನಿಲುವನ್ನು ಮಾನ್ಯ ಮುಖ್ಯಮಂತ್ರಿಗಳು ಈ ಸಂದರ್ಭದಲ್ಲಿ ತಾಳಬೇಕು. ಕೊನೆಯದಾಗಿ ಇವತ್ತಿನ ದಿವಸ ಮಾನ್ಯ ಮುಖ್ಯಮಂತ್ರಿಗಳು ತಂದಿರತಕ್ಕ ನಿರ್ಣಯ, ಮಹಾರಾಷ್ಟ್ರದಲ್ಲಿ ಏನು ನಡೆಯಿತು, ಅದರ ಬಗ್ಗೆ ನ್ಯಾಯಾಂಗ ವಿಚಾರಣೆಯಾಗಬೇಕೆಂದು ಇದರಲ್ಲಿ ನಮೂದಾಗಿದೆ. ಇಂತಹ ದುಷ್ಟಶಕ್ತಿಗಳು ಅವು ಯಾವ ಕಡೆಯಲ್ಲಿಯೋ ಇರಲಿ ಅವರು ಈಗ ನಡೆಸಿರತಕ್ಕ ದುಷ್ಕೃತ್ಯಗಳ ಬಗ್ಗೆ ನ್ಯಾಯಾಂಗ ತನಿಖೆ ಆಗಲೇ ಬೇಕೆಂದು ಸರ್ಕಾರಕ್ಕೆ ಒತ್ತಾಯಪಡಿಸಿ ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

5-30 P. M.

*ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಮಾನ್ಯ ಉಪಾಧ್ಯಕ್ಷರೇ, ಈ ದಿವಸ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಏನೆಂದು ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ ಮತ್ತು ಅದೇ ಸಂಬಂಧದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ದೇವೇಗೌಡರೇನು ಒಂದು ತಿದ್ದುಪಡಿಯನ್ನು ಸೂಚಿಸಿದ್ದಾರೆ ಇವೆರಡನ್ನೂ ನಾನು ಸ್ವಾಗತ ಮಾಡುತ್ತಾ ಎರಡು ಮಾತುಗಳನ್ನು ಹೇಳ ಬಯಸುತ್ತೇನೆ.

ಮೊಟ್ಟ ಮೊದಲನೆಯದಾಗಿ ನಾನು ಈಗ ಆ ಮಹಾಜನ್ ವರದಿಯ ಬಗ್ಗೆ ಏನನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ಈ ಮಹಾಜನ್ ವರದಿಯನ್ನು ಒಳ್ಳೆ

(ಶ್ರೀ ಕೋಣಂದೂರು ಲಿಂಗಪ್ಪ)

ಹೊಕ್ಕು ನೋಡಿದರೆ ನಮಗೆ ಇದರಿಂದ ಬಹಳ ನಷ್ಟವಾಗುತ್ತದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಆ ಮಹಾರಾಷ್ಟ್ರೀಯರು ಕರ್ನಾಟಕದಿಂದ ಅವರಿಗೆ 216 ಹಳ್ಳಿಗಳು ಬರಬೇಕೆಂದು ಹೇಳಿದ್ದರೂ ಈ ವರದಿಯಲ್ಲಿ ನಮ್ಮಿಂದ ಅವರಿಗೆ 264 ಹಳ್ಳಿಗಳನ್ನು ಕೊಡಬೇಕೆಂದು ಹೇಳಿದೆ. ಈ 264 ಗ್ರಾಮಗಳಲ್ಲಿ ಬಹಳ ಫಲವತ್ತಾದ ಪ್ರದೇಶಗಳನ್ನು ಒಳಗೊಂಡ ನಂದಗಡ್, ಖಾನಾಪುರ ಮತ್ತು ನಿಪ್ಪಾಣಿ ಈ ಪ್ರದೇಶಗಳೂ ಸೇರಿರುತ್ತವೆ. ಇನ್ನು ನಮ್ಮ ಕರ್ನಾಟಕದವರು ಮಹಾರಾಷ್ಟ್ರದಿಂದ ನಮ್ಮ ರಾಜ್ಯಕ್ಕೆ 260 ಗ್ರಾಮಗಳು ಬರಬೇಕೆಂದು ಹೇಳಿದ್ದರೆ ಈ ವರದಿಯಲ್ಲಿ ನಮಗೆ 247 ಗ್ರಾಮಗಳನ್ನು ಕೊಡುವಂತೆ ಹೇಳಿದೆ ಈ ಒಂದು ಏರುಪೇರಿನಿಂದ ನಮ್ಮ ರಾಜ್ಯಕ್ಕೆ ವರ್ಷಂಪ್ರತಿ ಮೂರು ಕೋಟಿ ರೂಪಾಯಿಗಳು ನಷ್ಟವಾಗುತ್ತವೆ ಇಷ್ಟಾಗಿದ್ದರೂ ಕೂಡಾ ಕನ್ನಡಿಗರಾದ ನಾವು ಈ ವರದಿಯನ್ನು ಅನುಮೋದಿಸುತ್ತಿದ್ದೇವೆ. ಕಾರಣ ಯಾವುದಾದರೊಂದು ರೀತಿಯಿಂದ ಈ ತಿಕ್ಕಾಟವನ್ನು ಮುಗಿಸಬೇಕೆಂಬುದು ನಮ್ಮ ನಿಲುವು. ಇನ್ನು ಆ ಕಾಸರಗೋಡಿನ ಬಗ್ಗೆ ನಮ್ಮ ಸರ್ಕಾರ ಇಲ್ಲಿಯವರೆಗಾದರೂ ಒಂದು ಖಚಿತವಾದ ನಿಲುವನ್ನು ಇನ್ನೂ ತಾಳದಿರುವುದು ದೇಶದ ದುರ್ದೈವ. ಇನ್ನೂ ಈ ವಿಚಾರದಲ್ಲಿ ಈ ಎರಡು ಸರ್ಕಾರಗಳ ನಡುವೆ ಪ್ರೇಮಪತ್ರಗಳ ವ್ಯವಹಾರ ನಡೆಯುತ್ತಿದೆ. ಇದು ಖಂಡಿತ ಸರಿಯಾದುದಲ್ಲ. ಮಾನ್ಯ ಮುಖ್ಯಮಂತ್ರಿಗಳು ತಾವೇ ಸ್ವತಃ ತಿರುವನಂತಪುರಕ್ಕೆ ಹೋಗಿ ಅಲ್ಲಿನ ಮುಖ್ಯಮಂತ್ರಿಯವರೊಂದಿಗೆ ಕುಳಿತು ಇದನ್ನು ಬಗೆಹರಿಸಬೇಕೆಂದು ನಾನು ಇವರನ್ನು ಒತ್ತಾಯ ಮಾಡುತ್ತೇನೆ.

ಇನ್ನು ನಾನೀಗ ಆ ಶಿವಸೇನೆಯು ಆ ಮುಂಬೈ ನಗರದಲ್ಲಿ ನಡೆಸಿರತಕ್ಕ ಆ ರಾಕ್ಷಸೀ ಕೃತ್ಯಗಳ ಬಗ್ಗೆ ಹಾಗೂ ಆ ಕೊಲ್ಲಾಪುರ ಇತ್ಯಾದಿ ಸ್ಥಳಗಳಲ್ಲಿ ನಡೆಸಿರತಕ್ಕ ಹೇಯ ದೌರ್ಜನ್ಯಗಳ ಬಗ್ಗೆ ಆ ನೋವನ್ನು ಅನುಭವಿಸಿರತಕ್ಕವರ ವಿಚಾರಗಳನ್ನೆಲ್ಲಾ ಹೇಳುವುದಕ್ಕೆ ಹೊರಟರೆ ಅದಕ್ಕೆ ಪಾರವೇ ಇಲ್ಲ. ಆದರೆ ಅದನ್ನು ಸ್ವತ: ಅನುಭವಿಸಿರತಕ್ಕವರ, ಆ ಕೃತ್ಯಗಳನ್ನು ಕಣ್ಣಾರನೋಡಿದವರ ಮತ್ತು ಆ ರಾಕ್ಷಸೀ ಕೃತ್ಯಗಳ ರಾದ್ಧಾಂತವನ್ನೆಲ್ಲಾ ನಾನು ನನ್ನ ಬುದ್ಧಿಪೂರ್ವಕವಾಗಿ ಕೇವಲ ಕೆಲವೇ ಮಾತುಗಳಲ್ಲಿ ಸಂಯಮ ದೃಷ್ಟಿಯಿಂದ ಹೇಳುವುದಕ್ಕೆ ಇಚ್ಛಿಸುತ್ತೇನೆ. ಈ ಶಿವಸೇನೆ ಎಂಬ ರಾಷ್ಟ್ರಘಾತುಕ ಶಕ್ತಿ 1966 ನೇ ಇಸವಿಯಲ್ಲಿ ಶ್ರೀ ವೈ. ಬಿ. ಚವಾಣ್ ಮತ್ತು ಶ್ರೀ ಎಸ್. ಕೆ. ಪಾಟೀಲ್ ಇವರು ರಾಜ್ಯದ ಮುಖಂಡ ವ್ಯಕ್ತಿಗಳಾಗಿದ್ದಾಗ_ಅವರ ಮುಖಂಡತ್ವವನ್ನು ಮತ್ತಷ್ಟು ಹೆಚ್ಚಿಸಿಕೊಳ್ಳುವುದಕ್ಕೆ ಮತ್ತು ತಮ್ಮ ಬೊಜ್ಜನ್ನು ಇನ್ನಷ್ಟು ಬೆಳೆಸಿಕೊಳ್ಳುವುದಕ್ಕೆ ಶ್ರೀಮಂತರ ವರ್ಗಗಳನ್ನು ಮತ್ತಷ್ಟು ಬೆಳೆಸುವುದಕ್ಕೆ ಮತ್ತು ಅಲ್ಲಿ ಬೆಳೆಯುತ್ತಿದ್ದ ಆ ಸೋಷಿಯಲಿಸ್ಟ್ ಮತ್ತು ಕಮ್ಯೂನಿಸ್ಟ್ ಪಕ್ಷಗಳನ್ನು ಹತ್ತಿಕ್ಕುವುದಕ್ಕೆ ಈ

ಪಕ್ಷದ ಸಂಘಟನೆಯನ್ನು ಅವರು ಮಾಡಿದರು. ಈಗಾಗಲೇ ಈ ಶಿವಸೇನೆಯು ವರ್ತನೆ ಆ ಡಾಂಗೆಯವರ ಬಗ್ಗೆ ಯಾವರೀತಿ ವರ್ತಿಸಿತೆಂಬುದನ್ನು ಏನು ಶ್ರೀಮಾನ್ ಕೃಷ್ಣನ್ ಅವರು ಹೇಳಿದರು ಅದು ಅಕ್ಷರಶಃ ನಿಜ ಅದನ್ನು ನಾನೂ ಅನುಮೋದಿಸುತ್ತೇನೆ. ಈ ದಿವಸ ಆ ಮುಂಬೈ ನಗರದಲ್ಲಿ ಕಾರ್ಮಿಕರ ಹಿತ ರಕ್ಷಣೆಗಾಗಿ ಸತತವಾಗಿ ಶ್ರಮಿಸುತ್ತಿರುವ ನಮ್ಮ ಅನ್‌ಕ್ರೌಂಡ್ ಕಿಂಗ್ ಶ್ರೀ ಜಾರ್ಜ್ ಫರ್ನಾಂಡೀಸ್ ಅವರನ್ನೂ ಮತ್ತು ಅಲ್ಲಿರತಕ್ಕ ಕನ್ನಡಿಗರನ್ನೂ ಹತ್ತಿಕ್ಕಲು ಈ ಶಿವ ಸೇನೆಯು ಹೆಸರಿನಲ್ಲಿ ಆ ಜನರು ಹುಚ್ಚುನಾಯಿಗಳಂತೆ ನಮ್ಮ ಜನರಮೇಲೆ ಬೀಳು ತ್ತಿದ್ದಾರೆ. ಇಂಥಾ ಒಂದು ದುಷ್ಟಶಕ್ತಿಯನ್ನು ರಾಷ್ಟ್ರಘಾತುಕ ಶಕ್ತಿಯನ್ನು ಹತ್ತಿಕ್ಕುವ ವಿಚಾರದಲ್ಲಿ ಆ ಕೇಂದ್ರ ಸರ್ಕಾರ ಮತ್ತು ಆ ಮಹಾರಾಷ್ಟ್ರ ಸರ್ಕಾರ ಗಳೆರಡೂ ಹಿಂದೆಬಿದ್ದಿವೆ.ಕರ್ತವ್ಯಲೋಪ ಮಾಡಿದೆ. ಆ ಮಹಾರಾಷ್ಟ್ರ ಸರ್ಕಾರ ಈ ಶಿವಸೇನೆಗೆ ಅಪ್ರತ್ಯಕ್ಷವಾಗಿ ಬೆಂಬಲ ನೀಡುತ್ತಿದೆಯೆಂಬುದಾಗಿ ಕಂಡುಬರುತ್ತಿದೆ. ಆ ಮುಂಬೈನಲ್ಲಿ ಆ ಶಿವಸೇನೆ ನಡೆಸಿದಂಥ ಅಕೃತ್ಯಗಳು, ರಾಕ್ಷಸೀ ಕೃತ್ಯಗಳು ನಮ್ಮ ಕನ್ನಡ ನಾಡಿನಲ್ಲಿ ಎಲ್ಲಿಯೂ ನಡೆದಿರುವುದಿಲ್ಲ. ಆ ಮುಂಬೈ ನಗರವಾದರೂ ಕೇವಲ ಆ ಮಹಾರಾಷ್ಟ್ರೀಯರ ಸೃಷ್ಟಿಯಲ್ಲ. ಆ ಮುಂಬೈ ನಗರದ ಸ್ವಾತಂತ್ರ್ಯ ದಲ್ಲಿ ಚಳವಳಿಯನ್ನು ನಡೆಸಿದವರಲ್ಲಿ ಬಹಳ ಪ್ರಾಮುಖ್ಯರಾದವರೆಂದರೆ ದಕ್ಷಿಣ ಕನ್ನಡದ ಭಾರತೀಯರು. ಈ ಅಂಶವನ್ನು ನಮ್ಮ ಎಂ. ಇ. ಎಸ್. ಸದಸ್ಯರು ಮನಗಾಣಬೇಕು. ಆ ಫಜಲಾಲಿ ಕಮಿಷನ್ನಿನವರು ವಿದರ್ಭವನ್ನು ಒಂದು ಪ್ರತ್ಯೇಕ ರಾಜ್ಯವಾಗಿ ಮಾಡಿ ಮುಂಬೈಯನ್ನು ಗುಜರಾತಿಗೆ ಸೇರಿಸಿದ್ದಾಗ ಇದರ ಸ್ವಾತಂತ್ರ್ಯಕ್ಕಾಗಿ ಉಗ್ರ ಹೋರಾಟ ನಡೆಸಿದವರು ದಕ್ಷಿಣ ಭಾರತದ ಕನ್ನಡಿಗರು. ಆ ದಿವಸ ಅಲ್ಲಿ ಒಂದು ಪ್ರಕ್ಷುಬ್ಧ ಪರಿಸ್ಥಿತಿ ಉಂಟಾಗಿದ್ದಾಗ ಆ ದಿವಸ ಮುಂಬೈನ ಮೇಯರಾಗಿದ್ದ ಪುಪ್ಪಳ ಮತ್ತು ಕಾಂಗ್ರೆಸ್ ಸದಸ್ಯ ಎಂ ಸಿ.ಭರೊಸಿಚ್ ಇತ್ಯಾದಿ ಯವರು ತಮ್ಮ ಸ್ಥಾನಗಳಿಗೆ ರಾಜೀನಾಮೆ ಕೊಟ್ಟು ಹೊರಗೆ ಬಂದರು. ಹೀಗೆ ಆ ದಿವಸ ಅಲ್ಲಿ ಹೋರಾಟ ನಡೆಸಿದವರಲ್ಲಿ ಬರೀ ಮಹರಾಷ್ಟ್ರೀಯರೇ ಅಲ್ಲದೆ ಅವರ ಜೊತೆಯಲ್ಲಿ ನಮ್ಮ ಕನ್ನಡಿಗರೂ ವಿಶೇಷವಾಗಿ ಹೋರಾಟ ನಡೆಸಿದ್ದಾರೆ. ಆದುದರಿಂದ ಈ ದಿವಸ ನಮ್ಮ ಕನ್ನಡಿಗರಿಗೆ ಆ ಮುಂಬೈ ಬಗ್ಗೆ ಹೆಚ್ಚಿನ ಹಕ್ಕು ಇರುವುದರಿಂದ ಆ ಮುಂಬೈ ನಗರವನ್ನು ಕೇಂದ್ರಾಡಳಿತಕ್ಕೆ ಒಪ್ಪಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಹಾಗೆ ಮಾಡದಿದ್ದರೆ ಮುಂದೆ ಅಲ್ಲಿ ಕನ್ನಡಿಗ ರಿಗೆ ಈ ಮಹಾರಾಷ್ಟ್ರೀಯರಿಂದ ಆಗಬಹುದಾದ ರಾಕ್ಷಸೀ ದೌರ್ಜನ್ಯಗಳನ್ನು ತಪ್ಪಿಸುವುದಕ್ಕೆ ಸಾಧ್ಯವಿರುವುದಿಲ್ಲ. ಆದುದರಿಂದ ಈಗಿನಿಂದಲೇ ಈ ಶಿವಸೇನೆಯ ರಾಕ್ಷಸೀ ಕೃತ್ಯಗಳ ನರ್ತನವನ್ನು ದಮನ ಮಾಡುವುದಕ್ಕೆ ಕೇಂದ್ರ ತಕ್ಕ ಕ್ರಮ ಗಳನ್ನು ಕೈಗೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಈ ಹಿಂದೆ ಆ ಮಹಾರಾಷ್ಟ್ರೀಯರೇನು ದೌರ್ಜನ್ಯದ ರಾಕ್ಷಸೀಕೃತ್ಯಗಳನ್ನು ನಡೆಸಿದ್ದಾರೆ ಅಂಥ

(ಶ್ರೀ ಕೋಣಂದೂರು ಲಿಂಗಪ್ಪ)

ನೀಚಕೃತ್ಯಗಳನ್ನು ನಡೆಸಲು ಕನ್ನಡಿಗರು ಎಂದೂ ತಯಾರಿಲ್ಲ. ಅದರೆ ಕೆಲವು ಮಹಾರಾಷ್ಟ್ರೀಯ ಮುಖಂಡರು ಅಂದರೆ ಎಂ. ಇ. ಎಸ್. ಸದಸ್ಯರು ಕಳೆದ ಡಿಶಂಬರಲ್ಲಿ ಬೆಳಗಾವಿನಲ್ಲಿ ನಡೆದ ಘಟನೆಯ ಬಗ್ಗೆ ಹೇಳಿದರು. ಆದರೆ ಅವರೇಕೆ ಅದಕ್ಕೆ ಹಿಂದೆ ನವಂಬರಲ್ಲಿ ನಡೆದ ಘಟನೆಯ ವಿಚಾರವನ್ನು ಎತ್ತಲಿಲ್ಲ? ನಾನು ಇಲ್ಲಿಗೆ ಕೆಲವು ದಿನಗಳ ಹಿಂದೆ ಬೆಳಗಾಂಗೆ ಅಲ್ಲಿಯ ಯುವಕ ಸಂಘದ ಆಶ್ರಯದಲ್ಲಿ ಏರ್ಪಡಿಸಲಾಗಿದ್ದ ಒಂದು ಸಭೆಯನ್ನು ಉದ್ದೇಶಿಸಿ ಮಾತನಾಡು ವುದಕ್ಕೆ ಹೋಗಿದ್ದೆ. ಅಗ ಅಲ್ಲಿ ಸುಮಾರು 18-20 ಸಾವಿರ ಜನರು ಸೇರಿದ್ದರು. ಅಲ್ಲಿ ನನಗೆ ಖಚಿತವಾಗಿ ತಿಳಿದು ಬಂದ ಒಂದು ಅಂಶವೇನೆಂದರೆ ಈ ಗಡೀ ಸರಹದ್ದಿ ನಲ್ಲಿರತಕ್ಕ ಅಂದರೆ ನಮ್ಮ ರಾಜ್ಯದಲ್ಲಿರತಕ್ಕ ಆ ಮರಾಠಿಯವರಿಗೆ ಕನ್ನಡಿಗರಿಂದ ಯಾವ ತೊಂದರೆಗಳೂ ಆಗುತ್ತಿಲ್ಲವಾದರೂ, ಈ ಮಹಾರಾಷ್ಟ್ರ ಏಕೀಕರಣ ಪಕ್ಷದ ಸದಸ್ಯರು ಬಂದು ಆ ಏನೂ ತಿಳಿಯದ ಜನರಿಗೆ ಅಲ್ಲಸಲ್ಲದ್ದನ್ನು ಹೇಳಿ ಅವರನ್ನು ತಪ್ಪುದಾರಿಗೆ ಎಳೆಯುತ್ತಿದ್ದಾರೆಂಬುದಾಗಿ ತಿಳಿಯಿತು ಹಾಗೆ ನನಗೆ ತಿಳಿದು ಬಂದ ವಿಷಯ ಸರಿಯಲ್ಲ ಎಂದು ಸವಾಲು ಮಾಡತಕ್ಕವರು ಯಾರಿದ್ದರೂ ಬಂದು ಈ ವೇದಿಕೆಯ ಮೇಲೆ ನಿಂತು ಮಾತನಾಡಲು ಕರೆಯಿತ್ತೆ. ಅಲ್ಲಿ ಅನೇಕ ಈ ಮಹಾರಾಷ್ಟ್ರ ಏಕೀಕರಣ ಪಕ್ಷದ ಸದಸ್ಯರಿದ್ದರು. ಆದರೆ ಒಬ್ಬರೂ ಅಲ್ಲಿ ಬಂದು ಮಾತನಾಡಲಿಲ್ಲ. ವಾಸ್ತವಾಂಶಗಳು ಹೀಗಿದ್ದರೂ ಆ ಮರಾಠಿಗರು ನಡೆಸತಕ್ಕ ರಾಕ್ಷಸೀ ಕೃತ್ಯಗಳಿಗೆ ಕೊನೆಮೊದಲೇ ಇಲ್ಲದಂತಾಗಿದೆ. ಆದರೆ ಅವರು ಆ ಬೈ ಎಲೆಕ್ಷನ್ ವಿಚಾರದಲ್ಲಿ ಏನು ಹೇಳಿದ್ದಾರೆ ಅದು ಸತ್ಯಕ್ಕೆ ದೂರವಾದ ವಿಚಾರ.

Madam Speaker in the Chair

ಅಲ್ಪಸಂಖ್ಯಾತರು ಯಾರಿದ್ದಾರೆ. ಅವರಬಗ್ಗೆ ಒಂದು ಕಮಿಷನ್ ಕೇಂದ್ರ ಸರ್ಕಾರದಲ್ಲಿದೆ. ಅವರ ವರದಿಯನ್ನು ಜಾರಿಗೆ ಕೊಡುವುದಕ್ಕೆ ಬೇಕಾದಂಥ ಅಧಿಕಾರವನ್ನು ಒದಗಿಸಿಕೊಡಬೇಕೆಂದು ನಾನು ಕೇಳಿ ಕೊಳ್ಳುತ್ತೇನೆ. ಹಾಗೆಯೇ ನಮ್ಮ ರಾಜ್ಯದಲ್ಲಿಯೂ ಕೂಡ ಇರತಕ್ಕ ಅಲ್ಪಸಂಖ್ಯಾ ತರ ತೊಂದರೆಗಳನ್ನು ನಿವಾರಣೆ ಮಾಡಿ ಅವರಿಗೆ ರಕ್ಷಣೆಯನ್ನು ಕೊಡುವುದಕ್ಕಾಗಿ ಭಾಷಾ ಅಲ್ಪ ಸಂಖ್ಯಾತರ ಹಿತರಕ್ಷಣಾ ಸಮಿತಿಯನ್ನು ಸರ್ಕಾರದ ವತಿಯಿಂದ ಮಾಡಿ ಅವರನ್ನು ರಕ್ಷಣೆ ಮಾಡದೇ ಹೋದರೆ ಯಾವ ರಾಜ್ಯವೂ ಸರಿಯಾಗಿ ಇರಲಿಕ್ಕೆ ಸಾಧ್ಯವಿಲ್ಲ. ನಮ್ಮ ರಾಜ್ಯದಲ್ಲಿಯೂ ಅಲ್ಪ ಸಂಖ್ಯಾತರು ಇದ್ದಾರೆ. ಅದರಲ್ಲೇ ಕೇವಲ ಮರಾಠಿ ಜನರು ಮಾತ್ರ ಬರುವುದಿಲ್ಲ. ಉರ್ದು, ತಮಿಳು, ತೆಲುಗು ಹೀಗೆ ಬೇರೆ ಬೇರೆ ಭಾಷೆಯನ್ನಾಡುವ ಜನರಿದ್ದಾರೆ. ಅವರೆಲ್ಲರ ಹಿತ ಸಂರಕ್ಷಣೆಯಾಗಬೇಕು. ಮಾನ್ಯ ಸದಸ್ಯರಾದ ಸುಬ್ಬಯ್ಯಶೆಟ್ಟರು ಮಾತನಾಡು

ವಾಗ ಮಹಾಜನ್ ಕಮಿಷನ್ ರಚನೆ ಮತ್ತು ಅದರ ವರದಿ ಬಂದಾಗ ಶ್ರೀ ವೀರೇಂದ್ರಪಾಟೀಲರು ಮುಖ್ಯಮಂತ್ರಿಗಳಾಗಿದ್ದರು ಮತ್ತು ಶ್ರೀ ನಿಜಲಿಂಗಪ್ಪ ನವರು ಅಖಿಲಭಾರತ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದರೆಂದೂ ಅವರು ಪ್ರಭಾವವನ್ನು ಬೀರಿ ಸಮಸ್ಯೆಯನ್ನು ಬಗೆಹರಿಸಬಹುದಾಗಿತ್ತೆಂದೂ ಹೇಳಿದರು. ನಾನು ಇನ್ನೂ ಒಂದು ಮಾತನ್ನು ಹೇಳುತ್ತೇನೆ, ಅಂದಿನಿಂದ ಇಂದಿನವರೆಗೂ ಶ್ರೀಮತಿ ಇಂದಿರಾಗಾಂಧಿಯವರೇ ಪ್ರಧಾನ ಮಂತ್ರಿಗಳಾಗಿದ್ದಾರೆ. ಒಟ್ಟಿನಲ್ಲಿ 25—26 ವರ್ಷಗಳಿಂದಲೂ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದೆ. ರಾಜ್ಯಗಳ ಪುನರ್ವಿಂಗಡಣೆ ಯಾದ ನಂತರ 16 ವರ್ಷಗಳ ಇತಿಹಾಸವನ್ನು ನೋಡಿದರೆ ಎರಡೂ ಕಾಂಗ್ರೆಸ್ ಪಕ್ಷಗಳು ಸಮಸ್ಯೆಯನ್ನು ಬಗೆಹರಿಸದೆ ಇಂಥ ಭಾವುಕತೆಗಳಲ್ಲಿ ತೊಡಗಿದ್ದಾರೆ ಮತ್ತು ನಿಜವಾದ ಸಮಸ್ಯೆಯನ್ನು ಮುಚ್ಚುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇಂಥ ಒಂದು ತಂತ್ರ ಕಾಂಗ್ರೆಸ್ ರಾಜಕಾರಣದಲ್ಲಿ ಮೈಗೂಡಿಕೊಂಡು ಬಂದಿದೆ. ಆದುದರಿಂದ ಜನಸಾಮಾನ್ಯರ ವಿಚಾರಗಳೇನಿವೆ ಅದರ ಬಗ್ಗೆ ಇವರು ಗಮನ ಹರಿಸುವುದನ್ನು ಬಿಟ್ಟಿದ್ದಾರೆ. ಮಹಾರಾಷ್ಟ್ರದಲ್ಲಿ ಶಿವಸೇನೆ ಎನ್ನತಕ್ಕದ್ದು ಏನಿದೆ ಅವರ ಧ್ವಂಸವಾಗಬೇಕಾಗಿದೆ. ಈಚೆಗೆ ಮಹಾರಾಷ್ಟ್ರದ ಮುಖ್ಯ ಮಂತ್ರಿಗಳೂ ಹಾಗೂ ಪ್ರಧಾನ ಮಂತ್ರಿಗಳೂ ಅಲ್ಪ ಸಂಖ್ಯಾತರ ಹಿತರಕ್ಷಣೆಯ ಬಗ್ಗೆ ಹೇಳಿದ್ದಾರೆ. ಅವರು ಇದ ವರೆಗೂ ಆ ರೀತಿ ಏಕೆ ಹೇಳಲಿಲ್ಲ? ಕೇರಳ ಸರ್ಕಾರ ಮತ್ತು ಅಲ್ಲಿನ ಶಾಸನ ಸಭೆಯವರು ತೆಗೆದುಕೊಂಡ ನಿಲುವಿಗೆ ನಾನು ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಒಬ್ಬನ ಕೊಲೆಯಾದುದಕ್ಕೆ ಅವರು ಅಷ್ಟು ಬಹಿರಂಗವಾಗಿ ಪ್ರತಿಭಟನೆಯನ್ನು ಮಾಡಿದರು. ನಮ್ಮಲ್ಲಿ ನೂರಾರು ಜನರ ಕೊಲೆಯಾಗಿದೆ, ಕೋಟ್ಯಾಂತರ ರೂಪಾಯಿ ಲೂಟಿಯಾಗಿದೆ. ಅಲ್ಲಿನ ದಾರುಣ ಚಿತ್ರವನ್ನು ನೋಡಿದರೆ ಯಾರು ಆ ಕೆಲಸವನ್ನು ಮಾಡಿದ್ದಾರೆ, ಯಾರು ಆ ಕೆಲಸಕ್ಕೆ ಪ್ರಚೋದನೆ ಮಾಡಿದ್ದಾರೆ. ಅವರ ಬಗ್ಗೆ ತಕ್ಕ ಕ್ರಮವನ್ನು ತೆಗೆದು ಕೊಳ್ಳಲೇಬೇಕು. ನಮ್ಮ ಕನ್ನಡದ ಜನರಿಗೆ ಸಿಟ್ಟೇ ಬರುವುದಿಲ್ಲ. ಯಾವತ್ತೋ ಸ್ವಲ್ಪ ಸ್ವಲ್ಪ ಸಿಟ್ಟು ಬರುತ್ತದೆ.

ಕನ್ನಡ ಚಳುವಳಿಗಾರರದು ಫ್ಯಾಸಿಸ್ಟ್ ಆರ್ಗನೈಜೇಷನ್ ಎಂದು ಹೇಳಿದರು. ಈ ಸಮಯದಲ್ಲಿ ಮಾನ್ಯ ವಾಟಾಳ್ ನಾಗರಾಜ್ ಅವರು ಇರ ಬೇಕಾಗಿತ್ತು. ಶಿವಸೇನೆಯಂತೆ ಕನ್ನಡ ಚಳುವಳಿಗಾರರು ಫ್ಯಾಸಿಸ್ಟ್ಸ ಆಗಿದ್ದರೆ ಈ ಹೊತ್ತಿನ ದಿವಸ ಶ್ರೀ ಪ್ಲಾನ್ ಸಯನಕ್ ಅವರು ಬೆಂಗಳೂರು ನಗರಕ್ಕೆ ಬರುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ ಮತ್ತು ಇಲ್ಲಿ ಬದುಕಿರಲಿಕ್ಕೆ ಸಾಧ್ಯವಾಗುತ್ತಿರ ಲಿಲ್ಲ. ಈ ಮಾತನ್ನು ಅವರು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕು. ಕನ್ನಡ ಚಳುವಳಿಗಾರರು ಫ್ಯಾಸಿಸ್ಟ್ಸ ಅಲ್ಲ. ಹಾಗೇನಾದರೂ ಆದರೆ ಈ ಹೊತ್ತು ನಗರದಲ್ಲಿರುವ ಮಹಾರಾಷ್ಟ್ರ ಮಂಡಲ ಧೂಳೀಪಟವಾಗಿ ಹೋಗುತ್ತಿತ್ತು,

(ಶ್ರೀ ಕೋಣಂದೂರು ಲಿಂಗಪ್ಪ)

ಹಾಗೆಯೇ ಮಹಾರಾಷ್ಟ್ರ ಬ್ಯಾಂಕ್ ಇವುಗಳನ್ನೆಲ್ಲ ಧ್ವಂಸ ಮಾಡುವುದಕ್ಕೆ ಸಾಧ್ಯವಿತ್ತು. ನಾವು ಅಂಥ ಕೀಳು ಕೃತ್ಯಗಳಿಗೆ ಕೈ ಹಾಕುವಂಥ ಜನರಲ್ಲ, ಅಂಥ ಹುಚ್ಚುನಾಯಿಗಳಲ್ಲ. ನಮ್ಮ ಕನ್ನಡ ಜನತೆಯ ಒಳ್ಳೆಯದನ್ನು, ಔದಾರ್ಯ ವನ್ನು ನಮ್ಮ ದೌರ್ಬಲ್ಯವೆಂದು ತಿಳಿದುಕೊಂಡರೆ ಅದು ಅವರ ಅವಿವೇಕದ ಪರಮಾವಧಿ ಎಂದು ಹೇಳದೆ ಗತಿ ಇಲ್ಲ ಬೊಂಬಾಯಿನಲ್ಲಿರುವ ಶಿವಸೇನೆಗೆ ಉತ್ತರವಾಗಿ 'ದಲಿತ್ ಪ್ಯಾಂಥರ್ಸ್' ಎಂದು ಮಾಡಿರುವುದನ್ನು ನಾನು ಸಂಪೂರ್ಣವಾಗಿ ಸಮರ್ಥನೆ ಮಾಡುತ್ತೇನೆ. ಅದೇ ಅವರಿಗೆ ಸರಿಯಾದ ಉತ್ತರ. ಶಿವಸೇನೆಯಲ್ಲಿರುವವರು ಬಹಳ ಕಡಿಮೆ ಜನ. ಆದರೆ ಸಣ್ಣ ಗಲಾಟೆ ಮಾಡುವುದಕ್ಕೆ ಎಷ್ಟು ಜನ ಬೇಕು? ಒಳಗೆ ನುಗ್ಗಿ ಕನ್ನಡ ಜನರ ಮನೆ ಲೂಟಿ ಮಾಡಿ, ಹೋಟಲ್ ಲೂಟಿ ಮಾಡಿ ಜನರಿಗೆ ಬೇಕಾದಷ್ಟು ಅನ್ಯಾಯ ಮಾಡುತ್ತಿದ್ದರೂ ಕೂಡ ಅಲ್ಲಿನ ಪೋಲೀಸರು ನೋಡುತ್ತಿರುತ್ತಾರೆ. ಮಹಾತ್ಮ ಗಾಂಧೀಜಿಯವರನ್ನು ಯಾರು ಗುಂಡಿಕ್ಕಿ ಕೊಂದರು ಎನ್ನುವುದು ಎಲ್ಲರಿಗೂ ಗೊತ್ತು. ಮಹಾರಾಷ್ಟ್ರೀಯ ರಲ್ಲಿ ಕೆಲವು ಜನ ದ್ರೋಹಿಗಳು ವಿಧ್ವಂಸಕಾರಕ ಕೃತ್ಯಗಳಲ್ಲಿ ತೊಡಗಿದ್ದರೆ ಭಾರತ ಸರ್ಕಾರದವರು ಏನು ಕೈಗೊಂಡಿದ್ದಾರೆಂದು ಕೇಳುತ್ತೇನೆ. ಶಿವಸೇನೆಯವರು ಅಷ್ಟೊಂದು ಸಂಘಟನೆ ಮಾಡಿಕೊಂಡು ಪ್ರದರ್ಶನ ಮಾಡುವುದಕ್ಕೆ ಹಣ ಎಲ್ಲಿಂದ ಬರುತ್ತಿದೆ? ಇವರಿಗೆ ಯಾರು ಹಣವನ್ನು ಕೊಡುತ್ತಿದ್ದಾರೆ? ಇದರ ಬಗ್ಗೆ ಕೂಡ ಪರಿಶೀಲನೆ ಆಗಬೇಕು ಆ ದೃಷ್ಟಿಯಿಂದ ಕೇಂದ್ರ ಸರ್ಕಾರದವರು ನ್ಯಾಯಾಂಗ ವಿಚಾರಣೆ ಮಾಡಬೇಕು ಎನ್ನುವ ಮಾತನ್ನು ಶ್ರೀ ದೇವೇಗೌಡರು ಏನು ಹೇಳಿದ್ದಾರೆ ಅದನ್ನು ಒಪ್ಪಿ ಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಶರಣಪ್ಪ (ದೇವದುರ್ಗ) ಸನ್ಮಾನ್ಯ ಅಧ್ಯಕ್ಷರೇ, ಈ ದಿನ ಸಭೆಯ ಮುಂದೆ ಮಾನ್ಯ ಮುಖ್ಯ ಮಂತ್ರಿಗಳು ತಂದಂಥ ನಿರ್ಣಯವನ್ನು ಮತ್ತು ಮಾನ್ಯ ವಿರೋಧಪಕ್ಷದ ನಾಯಕರಾದ ದೇವೇಗೌಡರು ಸೂಚಿಸಿರುವ ತಿದ್ದುಪಡಿಯನ್ನು ಎರಡನ್ನೂ ಸಮರ್ಥನೆ ಮಾಡುತ್ತ ಒಂದೆರಡು ಮಾತುಗಳನ್ನು ತಮ್ಮ ಮುಂದೆ ಹೇಳುವುದಕ್ಕೆ ನಿಂತಿದ್ದೇನೆ. ಭಾಷಾವಾರು ತಳಹದಿಯ ಮೇಲೆ ಇಡೀ ಭಾರತ ಚಿತ್ರ ಬದಲಾವಣೆಯಾಗುವುದಕ್ಕೆ 1956 ರಿಂದ ಪ್ರಾರಂಭವಾಯಿತು. ಆ ಕಾಲಕ್ಕೆ ಫಜಲ್ ಅಲಿ ಕಮಿಷನ್ ವರದಿಯ ಆಧಾರದ ಮೇಲೆ ಎಸ್. ಆರ್. ಸಿ. ಆಕ್ಟ್ ಆಯಿತು ಎರಡೂ ರಾಜ್ಯಗಳಿಗೆ ಸಂಬಂಧಪಟ್ಟ ಹಾಗೆ ಏನಾದರೂ ಅಲ್ಪ ಸ್ವಲ್ಪ ಗಡಿ ಸಮಸ್ಯೆಗಳಿದ್ದರೆ, ಅಲ್ಪಸ್ವಲ್ಪ ಹೊಂದಾಣಿಕೆ ಬೇಕಾಗಿದ್ದರೆ ಆ ರಾಜ್ಯಗಳ ಸರ್ಕಾರಗಳು ಸಮಾಲೋಚನೆಯಿಂದ ಪರಿಹಾರ ಮಾಡಿಕೊಳ್ಳಬೇಕು ಎನ್ನುವ ಒಂದು ವಿಚಾರವನ್ನು ಕೊಟ್ಟಿದ್ದಾರೆ. ಆದರೆ ಮಹಾರಾಷ್ಟ್ರದ ಜನರು ಗಡಿ ಸಮಸ್ಯೆಯ ವಿಚಾರವನ್ನು ತೆಗೆದುಕೊಂಡು ನಮ್ಮ ಗಡಿ ಪ್ರದೇಶದಲ್ಲಿ ತಂಟೆ

ಮತ್ತು ಗಲಾಟೆ ಮಾಡಲಿಕ್ಕೆ ಪ್ರಯತ್ನ ಮಾಡಿದರು. ಕೊನೆಗೆ ಕೇಂದ್ರ ಸರ್ಕಾರದ ಕೆಲವೊಂದು ರಾಜಕಾರಣಿ ಪ್ರಮುಖರು ಕೂಡಿ ಒಂದು ಪರಿಹಾರ ವನ್ನು ಹುಡುಕಿ ಒಂದು ಕಮಿಷನ್ ಮಾಡಿದರೆ ಒಳ್ಳೆಯದು ಎನ್ನುವ ಅಭಿಪ್ರಾಯಕ್ಕೆ ಬಂದು ಮಹಾಜನ್ ಕಮಿಷನ್ ನೇಮಕವನ್ನು ಮಾಡಿ ಆ ಕಮಿಷನ್ ಕೊಡುವ ವರದಿಯನ್ನು ಎರಡೂ ರಾಜ್ಯಗಳು ಒಪ್ಪಬೇಕು ಎನ್ನುವ ನಿರ್ಣಯಕ್ಕೆ ಬಂದರು. ಕೊನೆಗೆ ಕಮಿಷನ್ ವರದಿ ತಮಗೆ ವಿರೋಧವಾಗಿದೆ ಎಂದು ಕಂಡು ಬಂದ ಕಾರಣದಿಂದ ಮಹಾರಾಷ್ಟ್ರ ಜನರು ಮಹಾಜನ್ ಕಮಿಷನ್ ವರದಿಯನ್ನು ಒಪ್ಪಲಿಲ್ಲ ಎನ್ನುವುದನ್ನು ಮಾನ್ಯ ಮುಖ್ಯ ಮಂತ್ರಿಗಳು ಸವಿಸ್ತಾರವಾಗಿ ಹೇಳಿ ದ್ದಾರೆ. ಮಹಾಜನ್ ಕಮಿಷನ್ ವರದಿಯ ಬಗ್ಗೆ ನಮ್ಮ ಕರ್ನಾಟಕ ರಾಜ್ಯ ವಿಧಾನ ಸಭೆಯಲ್ಲಿ ಚರ್ಚೆಯಾಗಿ ತಂಡತಂಡವಾಗಿ ಸರ್ವಸದಸ್ಯರ ನಿಯೋಗವು ಡೆಲ್ಲಿಗೆ ಹೋಗಿದ್ದು ಮಹಾಜನ್ ಕಮಿಷನ್ ವರದಿಯನ್ನು ಕೇಂದ್ರ ಸರ್ಕಾರ ಒಪ್ಪಲೇಬೇಕು ಎಂದು ತಿಳಿಸಿದೆ.

ಈಗ ಕೆಲವು ಮಿತ್ರರು ಹೇಳಿದಂತೆ ಶ್ರೀ ವೀರೇಂದ್ರ ಪಾಟೀಲರವರೂ ಸುಮ್ಮನೆ ಕುಳಿತಿಲ್ಲ. ಶ್ರೀ ನಿಜಲಿಂಗಪ್ಪನವರೂ ಸುಮ್ಮನೆ ಕುಳಿತಿಲ್ಲ ಹಾಗೇ ಶ್ರೀ ದೇವರಾಜ ಅರಸ್‌ರವರೂ ಸುಮ್ಮನೆ ಕುಳಿತಿಲ್ಲ. ಇಂತಹ ವಿಚಾರಗಳ ಬಗ್ಗೆ ಒಬ್ಬರ ಮೇಲೆ ಇನ್ನೊಬ್ಬರು ಈ ರೀತಿ ಟೀಕಾ ಮಾಡುವುದು ಸರಿಯಲ್ಲ. ಮತ್ತು ಇದರಿಂದೇನೂ ಪ್ರಯೋಜನವಾಗುವುದಿಲ್ಲ. ಇವೊತ್ತು ಮಹಾರಾಷ್ಟ್ರದಲ್ಲಿ ಶಿವಸೇನೆ ಎನ್ನುವ ಹೆಸರಿನಲ್ಲಿ ಅಲ್ಲಿನ ಕನ್ನಡಿಗರ ಮೇಲೆ ದೌರ್ಜನ್ಯ ನಡೆಸಿ ಧಾಳಿ ಮಾಡಿ ಅಲ್ಲಿದ್ದ ಕನ್ನಡಿಗರ ಆಸ್ತಿಪಾಸ್ತಿಗಳನ್ನು ಲೂಟಿ ಮಾಡಿ ಬಹಳಷ್ಟು ಅನಾಹುತ ಮಾಡಿದ್ದಾರೆ. ಇದರಿಂದ ಬಹಳಷ್ಟು ನಷ್ಟವಾಗಿದೆ. ಇದನ್ನರಿತು ನಮ್ಮ ರಾಜ್ಯ ಸರಕಾರದವರು ಇಲ್ಲಿ ತಂದಿರುವ ಠರಾವು ಸರಿಯಾಗಿದೆ. ಸಭೆ ಇದಕ್ಕೆ ಪೂರ್ಣ ಬೆಂಬಲ ಕೊಡಬೇಕೆಂದು ಹೇಳುತ್ತೇನೆ. ಇದಕ್ಕೆ ನಮ್ಮ ರಾಜ್ಯದ ಹಿಂದಿನ ಇತಿಹಾಸ ಇಲ್ಲಿ ಹೇಳಬೇಕಾಗಿದೆ. 1947ರಲ್ಲಿ ನಾವು ಹೈದರಾಬಾದು ರಾಜ್ಯದಲ್ಲಿದ್ದಾಗ ಶಿವಸೇನೆಯಂತೆ ಅಲ್ಲಿ ರಜಾಕರರ ಹಾವಳಿ ಹೆಚ್ಚಾಗಿತ್ತು, ರಜಾಕರರಲ್ಲಿ ಖಾಸಿಂ ರಜ್ವಿ ಎನ್ನುವವನು ಬಹಳ ದೊಡ್ಡ ಪುಡಾರಿಯಾಗಿದ್ದ. ಇದರಿಂದಾಗಿ ಆಗ ಅಲ್ಲಿನ ಜನರ ಮೇಲೆ ಬೇಕಾದಷ್ಟು ಹಾನಿಯನ್ನು ಮಾಡು ತ್ತಿದ್ದ. ಆಗ ಕೇಂದ್ರ ಸರಕಾರದಲ್ಲಿದ್ದ ಗೃಹ ಮಂತ್ರಿಗಳಾದ ಶ್ರೀ ಸರದಾರ ವಲ್ಲಭಾಯಿ ಪಟೇಲರವರು ಹೈದರಾಬಾದಿಗೆ ಮೂರು ದಿನಗಳ ಕಾಲ ಕೇಂದ್ರದ ಪೋಲೀಸು ಪಡೆಯನ್ನು ಕಳುಹಿಸಿ ರಜಾಕರರನ್ನೆಲ್ಲಾ ನಾಶ ಮಾಡಿ ಅಲ್ಲಿನ ಜನತೆಗೆ ಅನುಕೂಲಗಳನ್ನು ಮಾಡಿಕೊಟ್ಟರು. ಇದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದು ಹಿಂದೆ ಯಾವ ರೀತಿ ರಜಾಕರರ ಹಾವಳಿಯನ್ನು ಹಿಂದಿನ ಹೈದ್ರಾಬಾದು ಪ್ರಾಂತದಲ್ಲಿ ಕೇಂದ್ರದವರು ತಪ್ಪಿಸಲು

(ಶ್ರೀ ಶರಣಪ್ಪ)

ಸಹಾಯ ಮಾಡಿದರೋ ಅದರಂತೆ ಇಂದು ಮಹಾರಾಷ್ಟ್ರದಲ್ಲಿರುವ ಶಿವಸೇನೆಯನ್ನು ದಮನ ಮಾಡಲು ಕೇಂದ್ರ ಸರಕಾರ ತೀವ್ರವಾಗಿ ಗಮನ ಕೊಡಬೇಕೆಂದು ಅವರಲ್ಲಿ ಒತ್ತಾಯ ಮಾಡಬೇಕು. ಇದಕ್ಕಾಗಿ ಇಲ್ಲಿ ತಂದಿರುವ ನಿರ್ಣಯವನ್ನು ಸರ್ವ ಸದಸ್ಯರೂ ಒಪ್ಪಿಕೊಳ್ಳಬೇಕು. ಇದಕ್ಕೆ ಕರ್ಣಾಟಕದ ಹಿತದೃಷ್ಟಿಯಿಂದ ಬೆಂಬಲ ಕೊಡಬೇಕು ಇದರ ಜೊತೆಗೆ ಶ್ರೀ ದೇವೇಗೌಡರು ತಂದಿರುವ ತಿದ್ದುಪಡಿಯೂ ಸೂಕ್ತವಾಗಿದೆ ಇದರ ಬಗ್ಗೆ ಕೂಡ ಮುಖ್ಯಮಂತ್ರಿಗಳು ವಿಚಾರ ಮಾಡಿ ತಿದ್ದುಪಡಿಯೊಂದಿಗೆ ಇಲ್ಲಿರುವ ನಿರ್ಣಯವನ್ನು ಎಲ್ಲರೂ ಒಪ್ಪಬೇಕೆಂದು ಹೇಳಿ ನನಗೆ ಇಷ್ಟು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಸ್. ವೈ ಪಾಟೀಲ್ : (ಸಿಂಧಗಿ) ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇಂತಹ ಒಂದು ಠರಾವನ್ನು ತಂದು ನಮ್ಮ ಕನ್ನಡಿಗರಿಗೆ ಬಹಳ ದೊಡ್ಡ ಉಪಕಾರ ಮಾಡಿದ್ದಾರೆ. ಇದರ ಸಲುವಾಗಿ ನಾನು ಅವರನ್ನು ಅಭಿನಂದಿಸುತ್ತೇನೆ ಮತ್ತು ಅವರು ಬಹಳ ಒಳ್ಳೆಯ ಮಾತುಗಳನ್ನು ಹೇಳಿದರು. ಪ್ರೈಂ ಮಿನಿಸ್ಟರು ಇದರ ಬಗ್ಗೆ ತೀವ್ರ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇದರ ಇತಿಹಾಸ ಬಹಳ ದೊಡ್ಡದು ನಾನು ಹಿಂದಿನ ಮುಂಬಯಿ ಸರಕಾರದ ವಿಧಾನ ಸಭೆಯಲ್ಲಿ ಮೆಂಬರಾಗಿದ್ದೆ. ಆಗಿನ ಸರಕಾರದಲ್ಲಿ ಆಗ ಹತ್ತು ಕೋಟಿ ರೂಪಾಯಿಗಳಷ್ಟು ಸರ್‌ಪ್ಲಸ್ ಬಡ್ಜೆಟ್ಟು ಇತ್ತು. ಆಗ ಅಲ್ಲಿದ್ದ ಮಂತ್ರಿಗಳಾಗಿದ್ದ ಶ್ರೀ ಮೊರಾರ್ಜಿ ದೇಸಾಯಿಯವರು ಒಂದು ಮಾತು ಹೇಳಿದರು. ಮಹಾರಾಷ್ಟ್ರದ ಜನರಲ್ಲಿ ಯಾರೇ ಇರಲಿ ಅವರಿಗೆಲ್ಲ ಸಹಾಯ ಮಾಡಬೇಕು. ಇಲ್ಲಿ ಶಿವಸೇನೆ ಇಲ್ಲವೇ ಬೇರೆ ಜನರು ಎಂದು ವಿಚಾರ ಮಾಡುವುದು ಮೂರ್ಖತನವಾದೀತು ಎಂದು ಒಮ್ಮೆ ಹೇಳಿದ್ದರು. ಯಾರಿಗೂ ನಾನು ಸಮರ್ಥನೆ ಮಾಡುವುದಿಲ್ಲ. ದೇಶದ ಜನತೆಗೆ ಒಳ್ಳೆಯದನ್ನು ಮಾಡಬೇಕೆಂದು ಹೇಳಿದರು. ಅದರಂತೆ ನಮ್ಮ ರಾಜ್ಯ ಸರಕಾರದ ಮುಖ್ಯಮಂತ್ರಿಗಳಾದ ಶ್ರೀ ದೇವರಾಜ ಅರಸ್‌ರವರು ಕೂಡ ಶೂರರಿದ್ದಾರೆ. ಆದರೆ ಅವರಿಗೆ ಮಹಾರಾಷ್ಟ್ರದ ಸರಕಾರದಲ್ಲಿ ತಮ್ಮ ಪಾರ್ಟಿಯವರ ಸರಕಾರವೇ ಇದೆ ಎಂದು ಅವರಿಗೆ ಒಂದು ರೀತಿಯ ಮೋಹವಾಗಿದೆ. ಈ ದೃಷ್ಟಿಯಿಂದ ನಾನು ಹೇಳುವುದು ಇದರಲ್ಲಿ ಶ್ರೀ ವೀರೇಂದ್ರ ಪಾಟೀಲರವರು ಹೇಳಲಿಲ್ಲ, ಶ್ರೀ ದೇವರಾಜ ಅರಸ್‌ರವರು ಹೇಳಲಿಲ್ಲ ಎಂದು ಹೇಳುವುದು ಸರಿ ಕಾಣುವುದಿಲ್ಲ, ಇದರಲ್ಲಿ ಎಲ್ಲರ ಕರ್ತವ್ಯವೂ ಇದೆ. ನಾವು ಮೊದಲಿಗೆ ಮಹಾಜನ್ ಕಮಿಷನ್ ಮಾಡುವುದಕ್ಕೆ ಒಪ್ಪಿರಲಿಲ್ಲ. ಬಹಳ ಒತ್ತಾಯದಿಂದಾಗಿ ಮಹಜನ್ ಕಮಿಷನ್ ವಿಂದು ಮಾಡಿದ ಮೇಲೆ ಇದನ್ನು ಪ್ರೈಂ ಮಿನಿಸ್ಟರವರು ಒಪ್ಪಲೇಬೇಕು ಎಂದು ಹೇಳುತ್ತಿರುವುದು. ಇದರಲ್ಲಿ ಮೆಜಾರಿಟಿ ಯಾವ ಕಡೆಗಿದೆಯೋ ಎಂದು ಇದನ್ನು ನೋಡಲು ಹೋಗುತ್ತ ಇರುವುದು

ಸರಿಯಲ್ಲ. ಯಾವ ರೀತಿ ಪೋಲೀಸು ಇಲಾಖೆಯ ಮುಖ್ಯಾಧಿಕಾರಿಯಾಗಿರುವವರು ಎಂದರೆ ಐ. ಜಿ. ಯವರು ಒಂದು ಮರ್ಡರು ಕೇಸು ಬಂದಾಗ ಇದರಲ್ಲಿ ಪೋಲೀಸರ ವರದಿ ಬಂದಿಲ್ಲ ಇನ್ನಾವುದೋ ವಿವರ ಬರಲಿಲ್ಲ ಎಂದು ತಡ ಮಾಡುತ್ತಾ ಹೋಗುವುದಿಲ್ಲ ಅವರೇ ಖುದ್ದಾಗಿ ಜಾಗ್ರತೆ ತನಿಖೆ ಮುಗಿಸಿ ಕಾರ್ಯ ಮಾಡಲೇ ಬೇಕಾಗುತದೆ ಅದರಂತೆ ನಮ್ಮ ಪ್ರಧಾನಿಯವರು ಇನ್ನು ಹೆಚ್ಚು ತಡ ಮಾಡದೆ ಯಾರ ಮೇಲೂ ಹೇಳದೆ ಮಹಜನ್ ಕಮಿಷನ್ ಒಪ್ಪಿದ್ದೇವೆ ಎಂದು ಕೇಂದ್ರದವರು ಆದೇಶವನ್ನು ಕಳುಹಿಸುವುದೊಂದೇ ಇದಕ್ಕಿರುವ ಮಾರ್ಗ. ಇದರಲ್ಲಿ ಶ್ರೀ ವೀರೇಂದ್ರ ಪಾಟೀಲರವರು ಹೇಳಲಿಲ್ಲ, ಶ್ರೀ ನಿಜಲಿಂಗಪ್ಪನವರು ಹೇಳಲಿಲ್ಲ. ಶ್ರೀ ದೇವರಾಜ ಅರಸ್‌ರವರು ಹೇಳಲಿಲ್ಲ ಎಂದು ಒಬ್ಬರ ಮೇಲೆ ಇನ್ನೊಬ್ಬರನ್ನು ಇಲ್ಲಿ ಹೇಳುವುದಕ್ಕಿಂತ ಈಗ ನಮ್ಮ ಶಕ್ತಿ ಯಾವ ರೀತಿ ಇದೆ ಎನ್ನುವುದನ್ನು ಪ್ರದರ್ಶಿಸುವ ಕಾಲ ಬಂದಿದೆ. ಇವೊತ್ತು ಕೇಂದ್ರದವರಿಗೆ ನಮ್ಮ ರಾಜ್ಯ ಸರಕಾರ ಕೇವಲ ಒಂದು ಸಲಹೆ ಮಾಡುವುದೊಂದೇ ಎಂದು ತಿಳಿದಿರಬಹುದು. ಆದರೆ ಇಂದು ಶ್ರೀ ದೇವರಾಜ ಅರಸ್‌ರವರಲ್ಲಿ ಕೇಳಿಕೊಳ್ಳುವುದು ನಿಮ್ಮ ಕಾಂಗ್ರೆಸ್ ಪಾರ್ಟಿಯವರೇ ಸರ್ಕಾರ ನಡೆಸುತ್ತಿರುವಾಗ ಅವರ ಮೇಲೆ ಸಾಕಷ್ಟು ಒತ್ತಾಯ ಬೇಗನೆ ತಂದು ಇದನ್ನು ಬಗೆಹರಿಸಲೇಬೇಕು. ಇಂದು ಮಹಾರಾಷ್ಟ್ರದಲ್ಲಿರುವ ಶಿವಸೇನೆಯಿಂದ ಅಪಾರವಾದ ಅನಾಹುತಗಳಾಗಿವೆ. ಹೆಣ್ಣು ಮಕ್ಕಳ ಮಾನಾಪಹರಣಗಳು ನಡೆದಿವೆ. ಇವನ್ನೆಲ್ಲಾ ತಡೆಗಟ್ಟುವುದು ಕೇಂದ್ರದ ಹಾಗೂ ರಾಜ್ಯ ಸರಕಾರಗಳ ಜವಾಬುದಾರಿ ಇದರಲ್ಲಿದೆ ಶಿವಸೇನೆ ಈ ರೀತಿ ಹಾನಿ ಮಾಡುತ್ತಾ ಹೋದರೆ ಮುಂದೆ ಇದು ಎಂದೆಂದಿಗೂ ಉಳಿಯದಂತೆ ಮಾಡಲು ನಮ್ಮ ಜನರಲ್ಲಿ ಸಾಕಷ್ಟು ಶಕ್ತಿ ಇದೆ. ಶಿವಸೇನೆಯ ಅನಾಹುತಗಳನ್ನು ತಡೆಗಟ್ಟಲು ಕೇಂದ್ರ ಸರಕಾರ ಆದೇಶ ಕಳುಹಿಸಬೇಕೆಂದು ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು ತಂದಿರುವ ನಿರ್ಣಯದಲ್ಲಿದೆ. ಇದನ್ನು ಕೇಂದ್ರ ಸರಕಾರ ಬೇಗನೆ ಅರಿತು ತಕ್ಕ ಕ್ರಮಗಳನ್ನು ಈ ಕೂಡಲೇ ತೆಗೆದುಕೊಳ್ಳಬೇಕು. ಇಂದು ಕೇಂದ್ರ ಸರಕಾರಕ್ಕೆ ಕರ್ನಾಟಕ ರಾಜ್ಯಸರಕಾರದವರು ಕೊನೆ ಎಚ್ಚರಿಕೆ ಕೊಡುತ್ತಿದ್ದೇವೆ ಎಂದು ಸ್ಪಷ್ಟವಾಗಿ ತಿಳಿಸಬೇಕು. ಇನ್ನು ಮುಂದೆ ಇಂತಹ ಅನಾಹುತಗಳಾಗಲು ಅವಕಾಶ ಕೊಟ್ಟರೆ ಶಿವಸೇನೆ ಎನ್ನುವುದು ಎಂದೆಂದಿಗೂ ಉಳಿಯುವುದಿಲ್ಲ. ಇದನ್ನು ಮುಂಬಯಿ ಸರಕಾರ ಅರಿಯಬೇಕು. ಇದರ ಬಗ್ಗೆ ಈಚೆಗೆ ಮುಂಬಯಿನಲ್ಲಿ ಶ್ರೀ ಎಸ್. ಕೆ. ಪಾಟೀಲರು ಭಾಷಣ ಮಾಡಲು ಒಂದು ಸಭೆಯಲ್ಲಿ ಎದ್ದು ನಿಂತಾಗ ಆ ಸಭೆಯಲ್ಲಿ ಜನರ ಮೇಲೆ ಕಲ್ಲು ಎಸೆಯತಕ್ಕದ್ದು ಸರಿಯಾದ ಮಾರ್ಗವಲ್ಲ ಇದರ ಬಗ್ಗೆ ಬೇರಾವ ಸಲಹೆಯನ್ನು ನಮ್ಮ ಮುಖ್ಯಮಂತ್ರಿಗಳು ಒಪ್ಪಲು ತಯಾರಿಲ್ಲ ಎಂದು ಸ್ಪಷ್ಟವಾಗಿ ಅವರಿಗೆ ತಿಳಿಸಲೇಬೇಕು. ಈ ದೃಷ್ಟಿಯಿಂದ ಕೇಂದ್ರದವರು ಇನ್ನು ತಡ ಮಾಡದೆ ಮಹಾಜನ್ ಕಮಿಷನ್ ವರದಿಯನ್ನು ಪೂರ್ಣವಾಗಿ ಒಪ್ಪಲಾಗಿದೆಯೆಂದು ಎಲ್ಲ ರಾಜ್ಯಗಳಿಗೂ ಅವರ ಒಪ್ಪಿಗೆಯನ್ನು

(ಶ್ರೀ ಎಸ್. ವೈ. ಪಾಟೀಲ್)

ಬೇಗನೆ ಕಳುಹಿಸುವುದೊಂದೇ ಇದಕ್ಕಿರುವ ಮಾರ್ಗ. ಮೊದಲು ನಮ್ಮ ರಾಜ್ಯದವರು ಕೂಡ ಇಂತಹ ಕಮಿಷನ್ ಮಾಡಲು ಒಪ್ಪಿರಲಿಲ್ಲ. ಕೇಂದ್ರದವರ ಒತ್ತಾಯದಿಂದ ಒಪ್ಪಬೇಕಾಗಿ ಬಂತು. ಹೀಗಿರುವಾಗ ಇದನ್ನು ಒಪ್ಪುವ ಜವಾಬುದಾರಿ ಪೂರ್ಣವಾಗಿ ಕೇಂದ್ರಸರಕಾರದ ಮೇಲೇ ಇದೆ. ಹಿಂದೆ ಮಹಾತ್ಮಾ ಗಾಂಧಿಯವರು ದಂಡಿಯಲ್ಲಿ ಉಪ್ಪಿನ ಸತ್ಯಾಗ್ರಹ ಮಾಡಿದ ಕಾಲದಲ್ಲಿ ಇಡೀ ಸರಕಾರದ ಮೇಲೆ ಯಾವ ರೀತಿ ಧೈರ್ಯದಿಂದ ಮುನ್ನುಗ್ಗಿದರು ಅದೇ ರೀತಿ ಇಂದು ನಮ್ಮ ಕರ್ಣಾಟಕ ಸರಕಾರದವರು ಯಾರ ಒತ್ತಾಯಕ್ಕೂ ಮಣಿಯದೆ ಮುನ್ನುಗ್ಗಬೇಕು ಮತ್ತು ಶಿವಸೇನೆಯಿಂದಾಗುತ್ತಿರುವ ಅನ್ಯಾಯಗಳನ್ನು ತಡೆಗಟ್ಟಲೇಬೇಕು. ಇದರಲ್ಲಿ ಯಾವ ಪಾರ್ಟಿಯ ಪ್ರಶ್ನೆಯೂ ಬರುವುದಿಲ್ಲ. ಇದನ್ನು ಪಕ್ಷಾತೀತವಾದ ಪ್ರಶ್ನೆ ಎಂದು ಎಲ್ಲರೂ ಮನಗಾಣಬೇಕು. ಆದರೆ ನಮ್ಮ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಮಾನ್ ದೇವರಾಜಅರಸ್ ರವರಿಗೆ ಕೇಂದ್ರ ಸರಕಾರದ ಒಂದು ಮಾಯಾ ಬಂದು ಅವರನ್ನು ಆವರಿಸಿದೆ ಮಹಾರಾಷ್ಟ್ರ ಸರಕಾರದವರು ಹಿಂದೆ ಕುರುಕ್ಷೇತ್ರ ಯುದ್ಧದ ಕಾಲದಲ್ಲಿ ಭೀಷ್ಮ ಶರಸನ್ಯಾಸವನ್ನು ತೆಗೆದುಕೊಂಡು ಅರ್ಜುನನಿಗೆ ಒಂದು ರೀತಿಯ ಮಾಯಾ ಆವರಿಸಿದಂತೆ ಅರ್ಜುನನಂತಿರುವ ನಮ್ಮ ಶ್ರೀ ದೇವರಾಜ ಅರಸ್‌ರವರಿಗೆ ಮಾಯಾ ಬಂದಿದೆ. ಮಹಾರಾಷ್ಟ್ರದಲ್ಲಿ ಶಿವಸೇನೆಯವರು ಹೆಂಗಸರ ಮಾನಾಪಹರಣ ಮಾಡಿದ್ದಾರೆ. ಇಂದು ರಾಜ್ಯಕ್ಕೆ ತಾಯಿಯಾಗಿರುವಂಥ ಪ್ರಧಾನಿಯವರಿಗೆ ಇದು ದೊಡ್ಡ ಅವಮಾನವಲ್ಲವೇ? ಹಿಂದೆ ಲೋಕಮಾನ್ಯ ತಿಲಕ್‌ರವರು ಕೂಡ ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಜನತೆಗೆ ಸರಿಯಾದ ಎಚ್ಚರಿಕೆಯನ್ನು ನೀಡಿದ್ದರು. ಇಂದು ಮುಂಬಯಿಯಲ್ಲಿ ಶಿವಸೇನೆಯಿಂದ ಆಗಿರುವ ಅನಾಹುತಗಳು ಅಷ್ಟಿಷ್ಟಲ್ಲ. ಪರದೇಶದಿಂದ ಬಂದಿರುವ ನಮ್ಮ ಜನರ ಮೇಲೆ ಇಂತಹ ದಬ್ಬಾಳಿಕೆ ನಡೆಸುವುದನ್ನು ಇನ್ನು ಮುಂದೆ ಯಾರೂ ಸಹಿಸುವುದಿಲ್ಲ. ಇದನ್ನು ಅವರಿಗೆ ಚೆನ್ನಾಗಿ ತಿಳಿಯುವಂತೆ ಒತ್ತಿ ತಿಳಿಸಬೇಕಾದ್ದು ನಮ್ಮಗಳೆಲ್ಲರ ಕರ್ತವ್ಯ. ಇಂದು ದೆಹಲಿಯಲ್ಲಿ ಕುಳಿತುಕೊಂಡು ಮುಂಬಯಿ ರಾಜ್ಯಕ್ಕೆ ಆದೇಶ ಕಳುಹಿಸಿದರೆ ಅವರೇನೂ ಹೆದರುವುದಿಲ್ಲ. ಇಲ್ಲಿರುವ ಮಾನ್ಯ ಸದಸ್ಯರಾದ ಶ್ರೀ ನಯನಕ್ ರವರು 1956 ರಿಂದಲೂ ಹೇಳುತ್ತಿದ್ದಾರೆ ನಾವು ಯಾರಿಗೂ ಹೆದರುವುದಿಲ್ಲ ಎಂದು. ಇಂದು ಹೆಣ್ಣು ಮಕ್ಕಳಿಗೆ ಅವಮಾನ ಮಾಡಿರುವುದು ನಮ್ಮ ರಾಷ್ಟ್ರಕ್ಕೆ ಅಪಮಾನ ಮಾಡಿದಂತಾಗಿದೆ ಹಾಗೂ ರಾಷ್ಟ್ರದ ಉನ್ನತ ನಾಯಕರಿಗೂ ಅಪಮ್ಮಾನ ಮಾಡಿದಂತಾಗುತ್ತದೆ.

ಈಗಾಗಲೇ ಶಿವಸೇನೆಯು ಗೋರಿ ಒಳಗೆ ಹೋಗಿದೆ. ಅದನ್ನು ಗೋರಿಯೊಳಗೆ ಮುಚ್ಚುವುದಕ್ಕೆ ಮತ್ತೆ ತಾವು ಏನೂ ಪ್ರಯತ್ನ ಮಾಡಬೇಡಿ. ಮುಖ್ಯವಾಗಿ ನಮ್ಮ ಮುಖ್ಯಮಂತ್ರಿಗಳು ಮಹಾಜನ್ ವರದಿಯನ್ನು ಅನುಷ್ಠಾನದಲ್ಲಿ

ತರುವಂತೆ ಕೇಂದ್ರ ಸರಕಾರದವರಿಗೆ ತಿಳಿಸಬೇಕು. ಅದು ಏನಾದರೂ ರದ್ದಾದರೆ ಯಥಾಸ್ಥಿತಿಯೇ ಮುಂದುವರೆಯುಲಿ ಎಂದು ಅವರು ಹೇಳಿದ್ದಾರೆ ಒಂದು ಪಕ್ಷ ಅವರು ಹೇಳಿದಂತೆ ಅದು ರದ್ದಾದರೆ ಮತ್ತೊಂದು ಆಯೋಗವನ್ನು ರಚನೆ ಮಾಡು ವುದಿಲ್ಲ ಎಂದು ಯಾವ ರೀತಿ ಹೇಳುವುದು: ಅದು ನಿಮ್ಮ ಕೈಯ್ಯಲ್ಲಿ ಇಲ್ಲ: ಮುಂದೆ ಕೇಂದ್ರದಲ್ಲಿ ಯಾರು ಅಧಿಕಾರಕ್ಕೆ ಬರುತ್ತಾರೆಂಬುದು ಯಾರಿಗೂ ಗೊತ್ತಿಲ್ಲ. ಆದಕಾರಣ ಮಹಾಜನ್ ವರದಿಯಿಂದ ನಮಗೆ ಲುಕ್ಸಾನಾದರೂ ಸಹ ಅದನ್ನು ಒಪ್ಪಿಕೊಳ್ಳುವುದು ಒಳ್ಳೆಯದು. ನಮ್ಮ ರಾಜ್ಯದಿಂದ ಯಾವುದೇ ಭಾಗ ಮಹಾರಾಷ್ಟ್ರಕ್ಕೆ ಹೋದರೂ ಸಹ ಅದು ಭಾರತದಲ್ಲಿಯೇ ಇರುತ್ತದೆಯೇ ಹೊರತು ಅಫ್ರಿಕಾ ದೇಶಕ್ಕೇನೂ ಹೋಗುವುದಿಲ್ಲ. ಬೆಳಗಾಂ ಒಂದು ಪಕ್ಷ ಮಹಾರಾಷ್ಟ್ರಕ್ಕೆ ಸೇರಿದರೂ ಸಹ ಅದು ಭಾರತ ದೇಶದಲ್ಲಿಯೇ ಇರುತ್ತದೆ. ನಾವು ಮಹಾಜನ್ ವರದಿಯನ್ನು ಒಪ್ಪಿಕೊಂಡಿರುವುದರಿಂದ ಅದನ್ನು ಜಾರಿಗೆ ತರುವ ವಿಚಾರ ಕೇಂದ್ರ ಸರ್ಕಾರಕ್ಕೆ ಸೇರಿದ್ದು. ಅದನ್ನು ಪಾರ್ಲಿಮೆಂಟಿನಲ್ಲಿ ಪಾಸು ಮಾಡಬೇಕು. ಆ ರೀತಿ ಪಾಸ್ ಮಾಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳು ದೆಹಲಿಗೆ ಹೋಗಿ ಹೇಳಬೇಕು. ಶ್ರೀಮಾನ್ ದೇವರಾಜ ಅರಸ್ ಅವರು ಅರ್ಜುನನ ರೀತಿಯಲ್ಲಿ ಇದ್ದಾರೆ. ಆದರೆ ಆವರ ಮೇಲೆ ಭೀಷ್ಮನ ಮಾಯೆ ಮುಚ್ಚಿಕೊಂಡು ಬಿಟ್ಟಿದೆ. ಆ ಒಂದು ಮಾಯೆಯಿಂದ ಅವರು ಹೊರಗೆ ಬಂದು ಕೆಲಸ ಮಾಡಬೇಕು. ಮಹಾರಾಷ್ಟ್ರ ಸರ್ಕಾರದವರಾದರೂ ಸಹ ಶಿವಸೇನೆಯ ಸಹಾಯದಿಂದ ಚುನಾವಣೆಯಲ್ಲಿ ಆರಿಸಿ ಬರಬೇಕು, ಯಾವ ರೀತಿಯಿಂದ ಲಾದರೂ ಸಹ ಆರಿಸಿ ಬರಬೇಕು ಎಂದು ಹೊರಟಿರುವುದು ಸರಿಯಲ್ಲ: ಅವರಿಗೆ ಒಂದು ರೀತಿಯ ಕೆಟ್ಟ ಕನಸು ಬಿದ್ದಿದೆ. ಗೆಲ್ಲುವುದಿದ್ದರೆ ಯೋಗ್ಯ ರೀತಿಯಿಂದ ಗೆಲ್ಲಬೇಕು. ಟಿ. ಬಿ. ಪೇಸೆಂಟ್ ತರಹ ಇರುವುದರ ಬದಲು ಸಾಯುವುದೇ ಮೇಲು, ಈ ದೃಷ್ಟಿಯಿಂದ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಕೆಲಸ ಮಾಡ ಬೇಕು. ಅವರು ಕರ್ನಾಟಕ ರಾಜ್ಯದ ಪುಣ್ಯಾತ್ಮರಾಗಿದ್ದಾರೆ. ಅಂತಹವರು ಮಹಾಜನ್ ವರದಿ ಜಾರಿಗೆ ಬರುವುದು ಬೇಡ ಎಂದು ಹೇಳುವುದು ಸರಿಯಲ್ಲ: ಈಗಲೇ ಅವರು ದೆಹಲಿಗೆ ನೇರವಾಗಿ ಹೋಗಿ ಕೇಂದ್ರ ಸರ್ಕಾರದವರಿಗೆ ಅದನ್ನು ಜಾರಿಗೆ ತರುವಂತೆ ಹೇಳಬೇಕು. ಇಷ್ಟು ಹೇಳಿ ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯ ಮುಂದೆ ಏನು ಒಂದು ನಿರ್ಣಯ ತಂದಿದ್ದಾರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ: ಮತ್ತು ಅದಕ್ಕೆ ನಮ್ಮ ಮಾನ್ಯ ದೇವೇಗೌಡರು ಏನು ಒಂದು ತಿದ್ದುಪಡಿ ತಂದಿದ್ದಾರೆ, ಅದನ್ನು ಸಹ ನಾನು ಸ್ವಾಗತ ಮಾಡುತ್ತೇನೆ. ಮಾನ್ಯ ದೇವೇಗೌಡರು ಎಷ್ಟು ವಿಷಯಗಳನ್ನು ಪ್ರತಿ ದಿವಸ ಓದುತ್ತಾರೋ ನನಗೆ ಗೊತ್ತಿಲ್ಲ. ಅವರು ಬಹಳ ಯೋಚನೆ ಮಾಡಿ ಈ ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಅದಕ್ಕಾಗಿ ಅದನ್ನು ನಾನು ಸ್ವಾಗತ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

6 P. M.

ಶ್ರೀ ಡಿ. ದೇವರಾಜ್ ಅರಸ್ : ಮಾನ್ಯ ಅಧ್ಯಕ್ಷರೇ, ಈ ಠರಾವಿಗೆ ಬೆಂಬಲ ಕೊಟ್ಟ ಎಲ್ಲ ಮಾನ್ಯ ಸದಸ್ಯರಿಗೂ ನನ್ನ ಅಭಿನಂದನೆಗಳು. ಹಾಗೂ ಶ್ರೀ ಮಾನ್ ಸೈಯನಕ್ ಅವರೂ ಸಹ ಹಿಂಸಾ ಕೃತ್ಯಗಳನ್ನು ಖಂಡನೆ ಮಾಡಿದ್ದಾರೆ. ಅದಕ್ಕಾಗಿ ಅವರನ್ನೂ ಸಹ ಅಭಿನಂದಿಸುತ್ತೇನೆ

I congratulate him because he has also condemned along with us the atrocities or the violent activities done in Maharashtra.

SRI B. B SAYANAK : You have not condemned the attrocities committed in Karnataka.

SRI D. DEVARAJ URS : Why I have given statements and even broadcast. I have given my condemnation when others were keeping quiet. You please refer to my previous statements. I was the first person to condemn as soon as I heard about it even in my own State. You will agree with me that such hooliganism and atrocities should be condemned wherever they take place. I am sure you will support me even if the Shiva Sena indulges in such activities.

SRI B.B. SAYANAK : What about Kannada Chaluvaligars ? Are you going to condemn it ?

Sri D. DEVARAJ URS : You please tell me whether you are going to be with us in condemning when the Shiva Sena commits such atrocities ?

SRI B. B. SAYANAK : No

SRI D. DEVARAJ URS : There, you are. That is the point.

SRI SRI B B. SAYANAK : Your Government has taken the support of Shiva Sena in Bombay. Your man Sri Rajni Patel has taken the support of Shiva Sena.

SRI D. DEVARAJ URS : Your statement is fallacious. It is not my Government. I was the first person in the whole of India to condemn the combination of BPCC and Shiva Sena in Bombay. You are exposed. You are not prepared to condemn Shiva Sena's activities. That is clear. Your MES people are hand in glove with Shiva Sena.

SRI B. B. SAYANAK : They are supporting you at the time of election.

SRI D. DEVARAJ URS : You people, the MES for which you are the Leader, have taken support from Shiva Sena.

SRI B. B. SAYANAK : We have taken support of even the Congress in Maharashtra.

SRI D. DEVARAJ URS : I do not want his interference. I know and I have reports and the Hon. member's attitude in the Assembly today confirms that they are hand in glove with Shiva Sena and the Shiva Sena of Bombay has been continuously helping the M. E. S. activities in Belgaum and round about. Therefore, if anything happens to Kannadigas by the Shiva Sena people, either what has happened already or is likely to happen, he will be the first person to take the blame. ಮತ್ತೆ ಶ್ರೀಮಾನ್ ನಾಯಕ್ ಅವರು ಒಂದು ಪತ್ರವನ್ನು ಬರೆದಿದ್ದಾರೆ. ಅವರಿಗೆ ನಾನು ಒಂದು ಟೆಲಿಗ್ರಾಮ್‌ನ್ನು ಸಹ ಕಳಿಸಿದ್ದೆ. ಅದು ಪತ್ರಿಕೆಗಳಲ್ಲಿ ಸಹ ವರದಿಯಾಗಿತ್ತು. ಅವರು ಅಲ್ಲಿ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆಂಬ ಬಗ್ಗೆ ನನಗೆ ಒಂದು ಪತ್ರ ಬರೆದಿದ್ದಾರೆ. ಮತ್ತು ಅಲ್ಲಿಯ ಅಸೆಂಬಿಯಲ್ಲಿ ಈ ಪ್ರಶ್ನೆ ಬಂದಾಗ ಅವರು ಅಲ್ಲಿ ಹೇಳಿರತಕ್ಕಂಥ ಭಾಷಣದ ಎಕ್‌ಸ್ಟ್ರಾಕ್ಟ್‌ನ್ನು ಸಹ ನನಗೆ ಕಳಿಸಿದ್ದಾರೆ. ಅದರಲ್ಲಿ ಯಾವ ಯಾವ ಸಂದರ್ಭಗಳಲ್ಲಿ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆಂಬುದನ್ನು ಹೇಳಿದ್ದಾರೆ. ಮತ್ತು ಅವರ ಮೇಲೆ ಬಂದಿರುವ ಅಪವಾದ ನಿರಾಧಾರವಾದುದು ಎಂದು ಅದರಲ್ಲಿ ಹೇಳಿದ್ದಾರೆ. ಅವರ ಮಾತಿನಲ್ಲಿಯೇ ಕೆಲವು ವಿಷಯಗಳನ್ನು ಹೇಳುತ್ತೇನೆ. ಅದನ್ನು ಮಾನ್ಯ ಸಭೆ ಕೇಳಬೇಕೆಂದು ನನ್ನ ಅರಿಕೆ :

(ಶ್ರೀ ಡಿ. ದೇವರಾಜ ಅರಸ್)

> "Here I must also condemn the canard now being spread against us that we are siding with the Shiva Sena and thereby becoming an active party with the linguistic agitation on the borders. I emphatically repudiate with all the force at my command this allegation. I am proud to say that mine is the only political party which has fought in all elections to local bodies, State Legislatures and Parliament ".

He has also gone on saying that he is one with us in condemning the violent activities and his Government is doing its best so far as these activities are concerned to prevent the Shiva Sena indulging in these activities as well as giving protection to linguistic minorities.

In the light of the categorical denial on the part of the Chief Minister of Maharashtra and also in the absence of any specific evidence to prove that the Government of Maharashtra has been supporting or siding or conniving with Shiva Sena activities, it is hard for us to expect and say that the Maharashtra Government is conniving. I very closely listned to the speech of sri D. Deve Gowda. He quoted several instances and every time I was carefully watching. He said that several instances quoted proves indirectly that there was a kind of support to the activities of the Shiva Sena. Independently it cannot be considered as a direct evidence. May be, there is scope for anybody to draw a conclusion that the Government of Maharashtra might have connived or might have committed omission or commission. Even Police people might have done certain acts but that dones not prove that there has been any connivance on the part of Maharashtra Government. For our Assembly to straightaway pass a verdict of condemnation against a Government or a person who is not here to defend or explain, may not be proper. That is why I appeal to the Hon. member that the amendment he has thought fit to bring in may not be pressed.

The other aspect namely, judicial enquiry is concerned, I got the legal advice that the State Government is wholly and solely responsible for the maintenance of law and order and even the Central Government has no jurisdiction to intervenc or interfere, unless there is a President's Rule. After this amendment was brought in, I sought legal advice and I am advised that the resolution cannot be amended that way. Therefore we only request the Central Government to prevail upon the other Government to constitute a judicial enquiry. That would be more appropriate, We cannot directly ask them to institute a judicial enquiry. We are asking the Central Government because both of us are parties in a way and the Central Government being the third party it can have this much of jurisdiction of requesting the Maharashtra Government to institue a judicial enquiry to prove to the whole world beyond any doubt that whoever is the culprit must be brought to book. This also is the stand that I took in the beginning itself in requesting the Central Government to go into this question and appoint a kind of enquiry. I asked the Union Home Minister and this matter was spoken to the Chief Minister of Maharashtra in my presence.

ಶ್ರೀ ಕೋಣಂದೂರು ಲಿಂಗಪ್ಪ.—ಆರ್ಟಿಕಲ್ 258ರ ಪ್ರಕಾರ ಕೇಂದ್ರ ಸರ್ಕಾರ ತನ್ನ ಅಧಿಕಾರಿಗಳನ್ನು ಯಾವುದೇ ಒಂದು ವಿಷಯದ ಬಗ್ಗೆ ನೇಮಕ ಮಾಡುವುದಕ್ಕೆ ಸಂಪೂರ್ಣವಾದ ಅಧಿಕಾರ ಕೇಂದ್ರ ಸರ್ಕಾರಕ್ಕೆ ಇದೆ.

ಶ್ರೀ ಡಿ. ದೇವರಾಜ ಅರಸ್.—ಅದನ್ನು ಮಾನ್ಯ ಸದಸ್ಯರು ನನ್ನ ಕಡೆಗೆ ಕಳುಹಿಸಿದರೆ ನಾನು ಅದನ್ನು ನೋಡುತ್ತೇನೆ. ಮಹಾರಾಷ್ಟ್ರದ ಮುಖ್ಯ ಮಂತ್ರಿಗಳಾದ ಶ್ರೀಮಾನ್ ವಿ. ಪಿ. ನಾಯಕ್ ಅವರು ತಮ್ಮ 2 ಪತ್ರಗಳಲ್ಲಿಯೂ ನಮೂದಿಸಿರುವುದನ್ನು ಇಲ್ಲಿ ಈಗ ಓದುವುದಕ್ಕೆ ಹೆಚ್ಚು ಕಾಲಾವಕಾಶವನ್ನು ತೆಗೆದುಕೊಳ್ಳುತ್ತದೆ. ಆದ್ದರಿಂದ ನಾನು ಅದನ್ನು ಇಲ್ಲಿ ಪೂರ್ತಿ ಓದುವುದಕ್ಕಾಗುವುದಿಲ್ಲ. ಈ ದೃಷ್ಟಿಯಿಂದ ನಾನು ಮನವಿ ಮಾಡಿಕೊಳ್ಳುತ್ತೇನೆ ಮಾನ್ಯ ವಿರೋಧ ಪಕ್ಷದ ನಾಯಕರು ದಯಮಾಡಿ ತಮ್ಮ ತಿದ್ದುಪಡಿಯನ್ನು ವಾಪಸ್ಸು ತೆಗೆದುಕೊಂಡು ಎಲ್ಲರೂ ಒಟ್ಟಿಗೇ ಸೇರಿ ಈ ನಿರ್ಣಯವನ್ನು ಪಾಸು ಮಾಡೋಣ ಎಂದು ನನ್ನ ವಿನಯಪೂರ್ವಕವಾದ ಪ್ರಾರ್ಥನೆಯನ್ನು ಈ ಸಭೆಗೆ ಸಲ್ಲಿಸುತ್ತೇನೆ. ನಾನು ಈ

(ಶ್ರೀ ಡಿ. ದೇವರಾಜ ಅರಸ್)

ಬಗ್ಗೆ ಇನ್ನು ಹೆಚ್ಚು ಹೇಳುವುದಕ್ಕೆ ಬಯಸುವುದಿಲ್ಲ. ಈ ನಿರ್ಣಯವನ್ನು ಪಾಸು ಮಾಡುವುದಕ್ಕೆ ಮುಂಚೆ ಈ ಸಭೆಯ ಮುಖಾಂತರ ಮಹಾರಾಷ್ಟ್ರ ಸರಕಾರಕ್ಕೆ ಹಾಗೂ ಮಾನ್ಯ ಮುಖ್ಯ ಮಂತ್ರಿಗಳಿಗೆ ನಾನು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ. ಬೊಂಬಾಯಿನಲ್ಲಿರುವ ಎಂದರೆ ಬೊಂಬಾಯಿ ಪಟ್ಟಣದಲ್ಲಿರುವ ಕನ್ನಡಿಗರು ಭಾಷಾ ಅಲ್ಪಸಂಖ್ಯಾತರು ಮತ್ತು ಬೊಂಬಾಯಿನಿಂದ ಹೊರಗಡೆ ಇರತಕ್ಕಂಥಾ ಬೇರೆ ಪ್ರದೇಶಗಳಲ್ಲಿ ಎಂದರೆ ಮಹಾರಾಷ್ಟ್ರದಲ್ಲಿರತಕ್ಕ ಕನ್ನಡಿಗರು ಭಾಷಾ ಅಲ್ಪ ಸಂಖ್ಯಾತರು ಏನಿದ್ದಾರೆ ಅವರಿಗೆ ಇರತಕ್ಕ ಒಂದು ಅನುಮಾನ, ಒಂದು ಭೀತಿ ಏನಿದೆ ಅದು ಪೂರ್ಣವಾಗಿ ದೂರವಾಗುವ ಹಾಗೆ ಇನ್ನೊಂದು ಸಾರಿ ಆ ರೀತಿಯ ಅನುಮಾನ ಬಾರದ ಹಾಗೆ ಸರ್ಕಾರ ನೋಡಿ ಕೊಳ್ಳುತ್ತಾರೆ ಎಂದು ನಾನು ನಂಬಿದ್ದೇನೆ. ಈ ರೀತಿ ನಾನು ತಮ್ಮ ಮುಖಾಂತರ ಅವರಿಗೆ ಪ್ರಾರ್ಥನೆ ಸಲ್ಲಿಸುತ್ತೇನೆ. ಶಿವಸೇನೆ ಬಗ್ಗೆ ದೇಶದಲ್ಲಿ ಜನಗಳ ಮನಸ್ಸಿನಲ್ಲಿ ಮಹಾರಾಷ್ಟ್ರ ಸರ್ಕಾರ ಪ್ರತ್ಯಕ್ಷವಾಗಿ ಶಿವಸೇನೆಗೆ ಬೆಂಬಲ ನೀಡಿದೆ ಇಲ್ಲದೆ ಇದ್ದರೆ ಇಷ್ಟೊಂದು ಪ್ರಬಲ ವಾದ ರೀತಿಯ ವಿದ್ಯಾಮಾನಗಳು ಎಲ್ಲಾ ಚಟುವಟಿಕೆಗಳೆಲ್ಲಾ ನಡೆಯುತ್ತಾ ಇರುವುದಕ್ಕೆ ಸಾಧ್ಯವಾಗುತ್ತಾ ಇರಲಿಲ್ಲ ಎಂಬ ಒಂದು ಇಂಪ್ರೆಷನ್, ಒಂದು ಭಾವನೆ ಬಂದಿದೆ. ಆದ್ದರಿಂದ ಆ ಒಂದು ಭಾವನೆ ಏನೇ ಕಾರಣಕ್ಕಾಗಿ ಬಂದಿರಲಿ ಅದು ಮಹಾರಾಷ್ಟ್ರ ಸರ್ಕಾರಕ್ಕೆ ಅನೇಕ ರೀತಿಯಲ್ಲಿ ಒಂದು ತೊಂದರೆ ಇದೆ. ಅವರ ಒಂದು ಕೀರ್ತಿಗೆ ಕಳಂಕ ಉಂಟಾಗುತ್ತದೆ. ಶ್ರೀಮಾನ್ ವಿ. ಪಿ. ನಾಯಕ್ ಅವರ ಸರ್ಕಾರದಲ್ಲಿ ನಮಗೆ ಯಾವ ದ್ವೇಶವೂ ಇಲ್ಲ. ಅವರೂ ನಮ್ಮ ಪಕ್ಷದವರು ಎನ್ನುವ ಮಾತಲ್ಲ. ಅವರು ಯಾವ ಪಕ್ಷದವರೇ ಅದರೂ ಅವರು ನಮಗೆ ನೆರೆ ಸರ್ಕಾರದವರು. ಅವರು ನಾವು ವಿಶ್ವಾಸದಿಂದ ಕೂಡಿ ಬಾಳಬೇಕು. ಇಂಥಾದ್ದರಲ್ಲಿ ಅವರು ಈ ರೀತಿಯಾಗಿ ಶಿವಸೇನೆಗೆ ಒಂದು ಆರ್ಗನೈಜೇಷನ್ ಎಂದು ಒಪ್ಪಿಕೊಂಡ ಮೇಲೆ ಆ ಒಂದು ಸಂಘದ ಚಟುವಟಿಕೆ ಯಾಗಲೀ ಆ ಸಂಘಕ್ಕೆ ಸರ್ಕಾರದ ಸಹಾಯ ಇದೆ ಎನ್ನುವ ಅನುಮಾನ ಬಂದಿದೆ. ಕೆಲವು ಸಹಾಯವನ್ನಾದರೂ ಅವರು ಪಡೆಯದೇ ಈ ರೀತಿ ಮಾಡುವುದಕ್ಕೆ ಸಾಧ್ಯವಿಲ್ಲ. ಆ ಸಂಘವನ್ನು ಅವರು ಬೆಳೆಸುವುದಕ್ಕೆ ತಕ್ಷಣದಲ್ಲಿ ಬೇಕಾದಂತಹ ಸಹಾಯವನ್ನು ಸರ್ಕಾರದಿಂದ ಪಡೆದಿರಬೇಕು ಎನ್ನುವ ಮಾತು ಬಂದಿದೆ. ಇನ್ನು ಮೇಲೆ ಕಡ್ಡಾಯವಾಗಿ ಇದು ಸರಿಯಲ್ಲವೆಂದು ಇದ್ದರೆ ಅದು ಸರಿಯಲ್ಲ ವೆಂದು ಹೇಳಬೇಕಾಗುತ್ತದೆ. ಅದು ಬಿಟ್ಟು ಅನುಕೂಲ ಸಿಂಧುವಿನಂತೆ ಕೆಲಸ ಮಾಡುವುದರಿಂದ ಅನಾಹುತ ಜಾಸ್ತಿಯಾಗುತ್ತದೆ. ಆದ್ದರಿಂದ ಇನ್ನು ಮೇಲಾದರೂ ಮಹಾರಾಷ್ಟ್ರದ ಮುಖ್ಯ ಮಂತ್ರಿಯಾದ ನಾಯಕರವರು ಇಲ್ಲಿಯ ವರೆಗೆ ಏನೊಂದು ಶ್ರಮ ಪಟ್ಟರೋ ಅದೇ ರೀತಿಯ ಶ್ರಮದಿಂದ ಇಂಥ ಸಮಸ್ಯೆ ಗಳಿಗೆ ಅವಕಾಶ ಕೊಡುವುದಿಲ್ಲವೆಂದು ಆಶಿಸಿ, ಮತ್ತೊಮ್ಮೆ ಮಾನ್ಯ ಸದಸ್ಯರು ಈ ಠರಾವಿಗೆ ಒಪ್ಪಿಗೆ ಕೊಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

MADAM SPEAKER.—Is it the pleasure of the House that leave be granted to the Hon. Member Sri H. D. Deve Gowda to withdraw the amendment ?

HON. MEMBERS.—Yes

The amendment, was by leave withdrawn

MADAM SPEKER.—Now I will put the motion to the vote of the House. The question is :

"That this House expresses its grave anxiety and deep concern over the atrocities committed on Kanndadigas and other linguistic minorities in Bombay and other parts of Maharashtra by the Shiva Sena and others and reguested the Maharashtra and Central Governments to take all steps to ensure the safety of the persons and property of Kannadigas and other linguistic minorities in the said places in order that they are enabled to pursue their legitimate avocations.

This House further requests the Central Government to prevail upon the Maharastra Government to institute a Judicial enquiry into those incidents to determine the causes and fix responsibility and also urges that adequate compensation be paid to the Kannadigas and other linguistic minorities who were the victims of those atrocities."

The resolution was adopted

SRI B. B. SAYANAK.—I press for division

MADAM SPEAKER.—The motion is already adopted. Now the House stands adjourn to meet tomorrow at 1 P. M.

The House adjourned at Twenty minutes past Six of the Clock to meet again at one of the Clock on Wednesday, the 27th February, 1974.

WD 21—GBPC—550 copies—5-7-1974.